ಡಾ. ಸಿ.ಕೆ.ನಾವಲಗಿ ಅವರ
ಜಾನಪದ ಸಂಕಲನಗಳ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ ಹಂಪಿ
ಕನ್ನಡ ವಿಷಯದಲ್ಲಿ ಎಂ.ಫಿಲ್ ಪದವಿಗಾಗಿ ಅರ್ಪಿಸಿದ ನಿಬಂಧ

ಸಂಶೋಧಕರು
ಸಾಂವಕ್ಕಾ ರಾ. ನಂದಿ ಎಂ.ಎ.ಎಂ.ಎಡ್
ಕನ್ನಡ ಉಪನ್ಯಾಸಕರು
ಶ್ರೀ ಬಿ.ಆರ್.ಪಾಟೀಲ ಬಿ.ಎಸ್.ಡಬ್ಲ್ಯೂ ಕಾಲೇಜು.
ಗೋಕಾಕ ಜಿಲ್ಲಾ : ಬೆಳಗಾವಿ

ಮಾರ್ಗದರ್ಶಕರು
ಡಾ. ಜಿ. ಎಮ್. ಪಾಟೀಲ ಎಂ.ಎ.ಪಿಎಚ್.ಡಿ

ಎಸ್.ಸಿ.ಪಿ.ಕಲಾ ... ಮಹಾವಿದ್ಯಾಲಯ
ಮಹಾಲಿಂಗಪೂರ ಜಿ: ಬಾಗಲಕೋಟ

ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರ.
ಹಾರೂಗೇರಿ ಜಿ: ಬೆಳಗಾವಿ

ಸಂಯೋಜನೆ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩೨೭೬

೨೦೦೨-೨೦೦೩

1100

ಡಾ. ಸಿ.ಕೆ.ನಾವಲಗಿ ಅವರ
ಜಾನಪದ ಸಂಕಲನಗಳ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ ಹಂಪಿ
ಕನ್ನಡ ವಿಷಯದಲ್ಲಿ ಎಂ.ಫಿಲ್ ಪದವಿಗಾಗಿ ಅರ್ಪಿಸಿದ ನಿಬಂಧ

ಸಂಶೋಧಕರು
ಸಾಂವಕ್ಕಾ ರಾ. ನಂದಿ ಎಂ.ಎ.ಎಂ.ಎಡ್
ಕನ್ನಡ ಉಪನ್ಯಾಸಕರು
ಶ್ರೀ ಬಿ.ಆರ್.ಪಾಟೀಲ ಬಿ.ಎಸ್.ಡಬ್ಲ್ಯೂ ಕಾಲೇಜು,
ಗೋಕಾಕ ಜಿಲ್ಲಾ : ಬೆಳಗಾವಿ

ಮಾರ್ಗದರ್ಶಕರು
ಡಾ. ಬಿ. ಎಮ್. ಪಾಟೀಲ ಎಂ.ಎ.ಪಿಎಚ್.ಡಿ
ಪ್ರಾಚಾರ್ಯರು
ಕೆ.ಎಲ್.ಇ ಸಂಸ್ಥೆಯ
ಎಸ್.ಸಿ.ಪಿ.ಕಲಾ ಹಾಗೂ ಡಿ.ಡಿ.ಎಸ್. ವಾಣಿಜ್ಯ ಮಹಾವಿದ್ಯಾಲಯ
ಮಹಾಲಿಂಗಪೂರ ಜಿ: ಬಾಗಲಕೋಟ

ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ ಜಿ: ಬೆಳಗಾವಿ

ಸಂಯೋಜನೆ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩೨೭೬

೨೦೧೨-೨೦೧೩

ಪ್ರಮಾಣ ಪತ್ರ

ಡಾ: ಸಿ.ಕೆ.ನಾವಲಗಿ ಅವರ ಜಾನಪದ ಸಂಕಲನಗಳ ಅಧ್ಯಯನ ಎಂಬ ಶೀರ್ಷಿಕೆಯ ಸಂಶೋಧನಾ ಪ್ರಬಂಧವನ್ನು ಎಂ.ಫಿಲ್.ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಕೆ.ಎಲ್.ಇ ಸಂಸ್ಥೆಯ ಪ್ರಾಚಾರ್ಯರಾದ ಡಾ:ಬಿ.ಎಮ್.ಪಾಟೀಲ ಅವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಲಾಗಿದೆ. ಈ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲಿ ಅಥವಾ ಇತರೆ ಯಾವುದೇ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಘೋಷಿಸುತ್ತೇನೆ.

ಸ್ಥಳ : ಗೋಕಾಕ

ದಿನಾಂಕ : ೨೪ - 02 - ೨೦೧೨

ಸಾಂವಾಕ್ಕಾ.ರಾಮಣ್ಣಾ.ನಂದಿ

ಸಂಶೋಧಕರು

ದೃಢೀಕರಣ ಪತ್ರ

ಶ್ರೀಮತಿ ಸಾಂವಕ್ಕಾ ರಾ ನಂದಿ ಇವರು ಡಾ: ಸಿ.ಕೆ. ನಾವಲಗಿ ಅವರ ಜಾನಪದ ಸಂಕಲನಗಳ ಅಧ್ಯಯನ ಎಂಬ ಶೀರ್ಷಿಕೆಯ ಸಂಶೋಧನ ಪ್ರಬಂಧವನ್ನು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿಧ್ಯಾಲಯ ಹಂಪಿಗೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಲಿ ಬಳಸಿಕೊಂಡಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಗೋಕಾಕ

ದಿನಾಂಕ: ೨೩-೦೭-೨೦೧೨.

ಮಾರ್ಗದರ್ಶಕರು

ಡಾ.ಬಿ.ಎಮ್.ಪಾಟೀಲ

ಪ್ರಾಚಾರ್ಯರು

ಕೆ.ಎಲ್.ಇ ಸಂಸ್ಥೆಯ

ಎಸ್.ಸಿ.ಪಿ.ಕಲಾ ಹಾಗೂ ಡಿ.ಡಿ.ಎಸ್.ವಾಣಿಜ್ಯ ಮಹಾವಿದ್ಯಾಲಯ

ಮಹಾಲಿಂಗಪೂರ ಜಿ : ಬಾಗಲಕೋಟೆ

ಕೃತಜ್ಞತೆಗಳು

ಈ ಕಾರ್ಯ ಯೋಜನೆ ಕಾರ್ಯರೂಪದಲ್ಲಿ ಬರಲು ಸಂಶೋಧಕರಿಗೆ ಇಂತಹ ವರದಿಯನ್ನು ತಯಾರಿಸಲು ಅನುಮತಿ ನೀಡಿದಂತಹ ಕನ್ನಡ ವಿಶ್ವವಿದ್ಯಾಲಯದ **ಕುಲಪತಿಗಳಿಗೆ** ನನ್ನ ಮೊದಲ ಕೃತಜ್ಞತೆಗಳು.

ಸಂಶೋಧನಾ ಕಾರ್ಯಕ್ಕೆ ಪ್ರೋತ್ಸಾಹ, ಸೂಕ್ತ ಸಲಹೆ ಹತ್ತು ಹಲವಾರು ವಿಚಾರಧಾರೆಗಳನ್ನು ಕ್ರೋಢಿಕರಿಸಿ ನನ್ನಲ್ಲಿ ಅಧ್ಯಯನ ಪ್ರವೃತ್ತಿಯ ಆಸಕ್ತಿ ತುಂಬಿದ ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರ ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥರಾದ **ಡಾ. ವ್ಹಿ.ಎಸ್. ಮಾಳ** ಗುರುಗಳಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು ಹಾಗೆಯೇ ಸದಾ ಹಸನ್ಮುಖಿಯಾಗಿ ನಗು-ನಗುತ್ತಾ ನಮ್ಮೊಂದಿಗೆ ಬೆರೆತು ಸದಾ ನಮ್ಮ ಯಶಸ್ಸಿಗೆ ಪ್ರೇರಣೆ ನೀಡಿದ **ಘಟನಟ್ಟಿ** ಗುರುಗಳಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಸಹಾಯ ಸಹಕಾರದ ಜೊತೆಗೆ ಸದಾ ಬೆಳಕಿನ ತರದಲ್ಲಿ ಕತ್ತಲೆಯಂತೆ ಬಂದುಬಿಡುವ ಸಮಸ್ಯೆಗಳನ್ನು ಪರಿಹರಿಸಲು ಹಸನ್ಮುಖರಾಗಿ ಹೃದಯಸಿರಿಯಿಂದ ತಪ್ಪಿದಾಗ ತಿದ್ದಿ, ಸಮಸ್ಯೆಗಳಿಗೆ ಪರಿಹಾರ ಕೊಟ್ಟು ಸಂಶೋಧನೆಯ ಹೊಸ ಹೆಜ್ಜೆ ಹಾಕಲು ದಿಗ್ದರ್ಶನ ತೋರಿದ ಎಸ್.ಸಿ.ಪಿ. ಕಲಾ ಹಾಗೂ ಡಿ.ಡಿ.ಎಸ್. ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯರು ಹಾಗೂ ಮಾರ್ಗದರ್ಶಕರಾದ **ಡಾ. ಬಿ.ಎಂ. ಪಾಟೀಲ** ಗುರುಗಳಿಗೆ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಡಾ.ಸಿ.ಕೆನಾವಲಗಿ ಅವರ ಜಾನಪದ ಸಂಕಲನಗಳ ಅಧ್ಯಯನ ಎಂಬ ವಿಷಯವನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಎಂ.ಫಿಲ್ ಪದವಿಗಾಗಿ ಪಡೆದ ನಿಬಂಧವಾಗಿದೆ. ಬೆಳಗಾವಿ ಜಿಲ್ಲೆಯ ಮೂರನೆ ತಲೆಮಾರಿನ ಜಾನಪದ ವಿದ್ವಾಂಸರಲ್ಲಿ ಅತಿ ವಿರಳ ವ್ಯಕ್ತಿಗಳಲ್ಲಿ ಡಾ.ಸಿ.ಕೆ ನಾವಲಗಿ ಅವರು ಒಬ್ಬರು. ಅವರು ಜಾನಪದ ಉಳಿವಿಗಾಗಿ ಮಾಡಿದ ಸಾಧನೆಗಳನ್ನು ಸ್ಮರಿಸಿಕೊಂಡರೆ ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಆರಾಧಿಸಿದಂತೆ.

ಇಂದು ಜಾನಪದ ಕಣ್ಮರೆಯಾಗುವುದನ್ನು ಅರಿತು ಭಜನೆ,ಲಾವಣಿ,ಮದುವೆ ಹಾಡುಗಳು ಮತ್ತು ಜನಪದ ಕಥನಗೀತಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪರಿಷ್ಕರಿಸಿ, ಪ್ರಕಟಿಸಿ ಬೆಳಕಿಗೆ ತಂದು ನಮ್ಮ ನಾಡಿನ ಜಾನಪದ ಸಾಹಿತ್ಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ. ಈ ಜಾನಪದ ಸತ್ವವನ್ನು ಅರಿತು **ಡಾ.ಸಿ.ಕೆ ನಾವಲಗಿ** ಅವರಿಗೆ ನಾನು ಚಿರಋಣಿ.

ಬೆಳೆಯುವ ಸಿರಿ-ಮೊಳಕೆಯಿಂತೆ ಸದಾ ಆಶೀರ್ವದಿಸಿ ಸತತವಾಗಿ ನನ್ನ ಶಿಕ್ಷಣಕ್ಕೆ ಪ್ರೋತ್ಸಾಹ ಸಹಾಯ ನೀಡುತ್ತಿರುವ ನನ್ನ ಮಾವನವರಾದ **ಶ್ರೀ ರಾಮಜಿ ಜಂಗನ್ನವರ** ಇವರಿಗೆ ಕೃತಜ್ಞತೆಗಳು. ನನ್ನ ಶಿಕ್ಷಣಕ್ಕೆ ಸಹಕರಿಸಿದ ಕುಟುಂಬದ ಸದಸ್ಯರಾದ **ಶ್ರೀ ರವೀಂದ್ರ ಸಂಜನಾ** ದಂಪತಿಗಳು, **ಶ್ರೀ ಕುಮಾರ ಅನಿತಾ** ದಂಪತಿಗಳು, ಹಾಗೆಯೇ ಮಕ್ಕಳಾದ ತೇಜಸ್ವಿನಿ, ತ್ರಿವೇಣಿ, ಕೇಶವ, ಗಣೇಶ, ದೈನಿಕ ಈ ಎಲ್ಲ ಪುಟ್ಟ ಮಕ್ಕಳನ್ನು ಸ್ಮರಿಸದೆ ಇರಲಾರೆ.

ಪುರಷನ ಯಶಸ್ಸಿನ ಹಿಂದೆ ಒಬ್ಬ ಮಹಿಳೆ ಇರುವಂತೆ ಮಹಿಳೆಯ ಯಶಸ್ಸಿನ ಹಿಂದೆ ಒಬ್ಬ ಪುರುಷ ಇರುತ್ತಾನೆಂಬುದಕ್ಕೆ ಪ್ರತ್ಯಕ್ಷ ಸಾಕ್ಷಿ ನಾನೇ. ನನ್ನ ಕ್ರಿಯಾಶೀಲ ಯೋಜನೆಗಳಿಗೆ ಸದಾ ಮುದ್ರೆ ಒತ್ತಿ ಬೆನ್ನುತಟ್ಟಿ ಹುರಿದುಂಬಿಸಿದ ನನ್ನ ಪತಿಯವರಾದ **ಶ್ರೀ ಆನಂದ** ರವರಿಗೆ ವಿಶೇಷ ಶರಣ-ಶರಣು. ನನ್ನ ಓದುಬರಹಕ್ಕೆ ಯಾವುದೇ ಅಡ್ಡಿಯಾಗದೆ ಈಗಲೂ ಸಹಕರಿಸುತ್ತಿರುವ ನನ್ನ ಒಬ್ಬಳೇ ಒಬ್ಬ ಮುದ್ದಿನ ಮಗಳಾದ **ತ್ರಿವೇಣಿ** ಇವಳಿಗೂ ಧನ್ಯವಾದಗಳು.

ಈ ಸಂಶೋಧನ ನಿಬಂಧವನ್ನು ವ್ಯವಸ್ಥಿತವಾಗಿ ಮುದ್ರಣ ಮಾಡಿಕೊಟ್ಟವರಿಗೆ ಹಾಗೂ ಬೈಂಡ್ ಮಾಡಿದವರಿಗೆ ನನ್ನ ವಂದನೆಗಳು.

ಸಂಶೋಧಕರು,

ಎಸ್.ಆರ್. ನಂದಿ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಬೆಳಗಾವಿ ಜಿಲ್ಲೆಯ ಗೋಕಾಕ ನಾಡು ಕೃಷಿ ಸಾಹಿತ್ಯಸಂಗೀತ ರಂಗಕಲೆ ವೈವಿದ್ಯಮಯ ಜಾನಪದ ಕಲೆ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳ ನೆಲೆವೀಡು. ರಾಜಕೀಯ ಹಾಗೂ ಅಧ್ಯಾತ್ಮಿಕ ಕ್ಷೇತ್ರಗಳಲ್ಲಿ ತನ್ನದೆ ಆದ ಸ್ಥಾನಮಾನವನ್ನು ಹೊಂದಿ ತನ್ನ ಮಣ್ಣಿನ ಕಂಪನ್ನು ರಾಷ್ಟ್ರ ಅಂತರಾಷ್ಟ್ರಗಳಲ್ಲಿ ಹರಡಿ ಕೀರ್ತಿ ಪತಾಕಿಯನ್ನು ಹಾರಿಸಿರುವುದು ಭೂಪುಟದಲ್ಲಿ ಕಂಗೋಳಿಸುತ್ತದೆ. ಇದಲ್ಲದೇ ಸಿಹಿ ಕರದಂಟು ಸುಣ್ಣ, ಬಣ್ಣ ಜಲಪಾತಗಳಿಗೂ ಪ್ರಸಿದ್ಧಿಯನ್ನು ಹೊಂದಿದೆ. ಇಲ್ಲಿ ಜನಪದ ಸಾಹಿತ್ಯ ಸೃಷ್ಟಿ ನೂರಾರು ಜನಪದ ಕವಿಗಳಿಂದ ಕ್ರಿ.ಸ. ೧೮೦೦– ೧೯೫೦ ರ ಅವದಿಯಲ್ಲಿ ನಡೆಯಿತು. ಆದರೆ ಇದಕ್ಕೂ ಹಿಂದೆ ಜಾನಪದ ಸಾಹಿತ್ಯ ಇಲ್ಲ ಅಂತಲ್ಲ ಇದ್ದೆ ಇತ್ತು. ಜನಪದ ಕವಿಗಳೂ ಇದ್ದರು ಆದರೆ ಇದಕ್ಕೆ ಉಚಿತ ದಾಖಲೆಗಳಿಲ್ಲದಿರುವುದರಿಂದ ಗೋಕಾಕ ತಾಲೂಕಿನ ಇತಿಹಾಸ ಕಟ್ಟಲಾಗದು. ಈ ಇನ್ನೂರು ವರ್ಷಗಳ ಕಾಲಾವಧಿಯಲ್ಲಿ ಸಮೃದ್ಧವಾದ ಜಾನಪದ ಸಾಹಿತ್ಯ ಸೃಷ್ಠಿಯಾಗಿದೆ.

ಇತ್ತೀಚಿನ ದಿನಗಳಲ್ಲಿ ಜಗತ್ತಿನಾದ್ಯಾಂತ ಕುತೂಹಲ ಕೆರಳಿಸುತ್ತಿರುವ ಅಧ್ಯಯನಗಳಲ್ಲಿ ಜಾನಪದ ಅಧ್ಯಯನವೂ ಒಂದು ಹಾಗಾಗಿ ಬೆಳಗಾವಿ ಜಿಲ್ಲೆ ಜಾನಪದ ಕ್ಷೇತ್ರಕ್ಕೆ ಹೆಸರುವಾಸಿಯಾಗಿದೆ. ಏಕೆಂದರೆ "ಬೆಳಗಾಂವಿ ಜಿಲ್ಲೆ ಗೋಕಾಕ ತಾಲೂಕಿನ 'ಜಾನಪದ ವಿದ್ವತ್ತು' ಎಂದು ಕರೆಯಿಸಿಕೊಂಡ ಬೆಟಗೇರಿ ಗ್ರಾಮದ ಕೃಷ್ಣಶರ್ಮರೆಂಬುದು ನಿಸ್ಸಂಶಯ[೧] ಇವರನ್ನು ಮೊದಲನೆ ತಲೆಮಾರಿನ ಜಾನಪದ ವಿದ್ವಾಂಸರೆಂದು ಕರೆಯಲಾಗಿದೆ".

ಇದರ ನಂತರ ಎರಡನೆ ತಲೆಮಾರಿಗೆ ಸಂಬಂಧಿಸಿದವರು ಡಾ. ಚಂದ್ರಶೇಖರ ಕಂಬಾರ ಡಾ. ಎಂ.ಎಸ್. ಲಟ್ಟೆ ಡಾ. ಜ್ಯೋತಿ ಹೊಸೂರ ಡಾ. ನಿಂಗಣ್ಣ. ಸಣ್ಣಕ್ಕಿಯವರು ಜಾನಪದ ಉಳಿವಿಗಾಗಿ ಸಾಕಷ್ಟು ಶ್ರಮವಹಿಸಿದ್ದಾರೆ. ತದ ನಂತರ ಮೂರನೆಯ ತಲೆಮಾರಿನವರಾದ ಡಾ. ಬಸವರಾಜ ಮಲಶೆಟ್ಟಿ ಡಾ. ಶ್ರೀರಾಮ ಇಟ್ಟನ್ನವರ ಡಾ.ಸಿ.ಕೆ. ನಾವಲಗಿ ಅವರು ಜಾನಪದ ಕಾರ್ಯವನ್ನು ಮುನ್ನಡಿಸಿಕೊಂಡು ಬಂದಿದ್ದಾರೆ. ಡಾ.ಸಿ.ಕೆ. ನಾವಲಗಿ ಅವರು ತಮ್ಮ ಸ್ವಪ್ರಯತ್ನದಿಂದ ಒಂದೊಂದು ಚಿಕ್ಕ ಮೆಟ್ಟಲನ್ನು ಏರುತ್ತಾ ಜಾನಪದ ಮೇರು ಕೀರ್ತಿಗೆ ಭಾಜನರಾಗಿದ್ದಾರೆ.ಇವರು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಚನ್ನಮ್ಮನ ಕಿತ್ತೂರು ಪರಿಸರದ ಬಸರಕೋಡದ ಗ್ರಾಮೀಣ ಪ್ರತಿಭೆ. ಡಾ.ಸಿ.ಕೆ. ನಾವಲಗಿ ಅವರು ಬೋಧಕ- ಬರಹಗಾರ - ವಾಗ್ಮಿಯಾಗಿ ಬಹುಮುಖಗಳಿಂದ ತಮ್ಮ ಪ್ರತಿಬೆಯನ್ನು ವ್ಯಾಪ್ತಿ ವೈಶಿಷ್ಟ್ಯವನ್ನು ಮೆರೆಯುತ್ತಿದ್ದಾರೆ. ಅದೇ ರೀತಿ ಡಾ.ಸಿ.ಕೆ. ನಾವಲಗಿ ಅವರು ಸೇವೆ ಸಾಧನೆಗಳ ಮೂಲಕ ಸಣ್ಣ ವಯಸ್ಸಿನಲ್ಲಿಯೆ ದೊಡ್ಡ ಹೆಸರು ಮಾಡಿದ್ದಾರೆ. ಡಾ.ಸಿ.ಕೆ. ನಾವಲಗಿ ಅವರು ಅಪರೂಪದ ಅಪೂರ್ವ ಜಾನಪದ ತಜ್ಞರು 'ಮೂರ್ತಿ ಚಿಕ್ಕದಾದರೂ ಕೀರ್ತಿದೊಡ್ಡದು' ಎಂಬಂತೆ ಅವರ ಅನಭವ, ಅಭ್ಯಾಸ, ಸಾಹಿತ್ಯ, ಪ್ರತಿಭೆಯಿಂದ ತಿಳಿದು ಬಂದಿದೆ.

---

೧. ಹೊನ್ನಬೆಳೆ -ಡಾ. ಸಿ.ಕೆ.ನಾವಲಗಿ ಪ್ರೋ. ಚಂದ್ರಶೇಖರ ಅಕ್ಕಿ [ರಿ] ಪ್ರಕಟಣೆ ೨೦೦೪ ಪ್ರಕಾಶನ ಕನ್ನಡ ಸಾಹಿತ್ಯ ಪ್ರತಿಷ್ಠಾನ ಬೆಂಗಳೂರು ಪುಟ ಸಂಖ್ಯೆ ೦೪

ಡಾ.ಸಿ.ಕೆ. ನಾವಲಗಿ ಅವರು ಯಾವುದೇ ವಿಷಯ ಇರಲಿ ನಿಖರವಾಗಿ, ನಿರರ್ಗಳವಾಗಿ, ಮಾತನಾಡಬಲ್ಲರು. ಸಾಹಿತ್ಯ ಸಂಸ್ಕೃತಿ ಜಾನಪದ ಸಮಾಜದ ಬಗ್ಗೆ ಅಪಾರ ಕಾಳಜಿ -ಕಳಕಳಿ ಹೊಂದಿರುವ ಡಾ: ಸಿ.ಕೆ. ನಾವಲಗಿ ಹಲವಾರು ಹಲವಾರು ಸಂಘಟನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರಲ್ಲದೆ ಗಡಿ, ನಾಡು, ನುಡಿಗೆ, ಸಂಭಂದಿಸಿದಂತೆ ಹೋರಾಟಗಳಲ್ಲಿಯಯೂ ತಮ್ಮ ಸಾಧ್ವತೆಯ ಇತಿಮಿತಿಗಳಲ್ಲಿ ಸ್ಪಂಧಿಸುತ್ತಾ ಬಂದಿದ್ದಾರೆ. ಗೋಕಾಕ ಒಂದು ಸಾಂಸ್ಕೃತಿ ಕೇಂದ್ರವೆನ್ನಿಸಿಕೊಳ್ಳವಲ್ಲಿ ಡಾ.ಸಿ.ಕೆ. ನಾವಲಗಿ ಅಂತಹ ಸಾಹಿತ್ಯ ಕಲಾವಿದರ ಕಾಣಿಕೆ ದೊಡ್ಡದು. ಜಾನಪದ ವಿಧ್ಯಾರ್ಥಿ ಅಭ್ಯಾಸಿಯಾದ ಶ್ರೀಯುತರು ಗುಣಾತ್ಮಕವಾದ ವಿಮರ್ಶನ ಲೇಖನಗಳ ಮೂಲಕ ಜಾನಪದ ಕ್ಷೇತ್ರಕ್ಕೆ ಹೊಸ ಆಲೋಚನೆಗಳನ್ನಿ ಕೊಟ್ಟಿದ್ದಾರೆ. "ಜೋಲಿತಪ್ಪದ ಚಿಂತನ ಶೀಲತೆ , ವಿಷಯ ನಿರೂಪನೆಯಲ್ಲಿ ಆಳವಾದ ಅಲೋಚನಾ ದೀಪ್ತಿ ಏಕಮುಖದ ವಿಮರ್ಶಾದೃಷ್ಟಿ ಹೊಸತೊಂದನ್ನು ಗ್ರಹಿಸಬೇಕೆಂದು ಹಂಬಲ ಡಾ. ಸಿ.ಕೆ. ನಾವಲಗಿ ಅವರು ಬರವಣಿಗೆ ಉದಕ್ಕೂ ಮಿಳಿತಗೊಂಡಿರುವುದು ಕುತೂಹಲಕಾರಿಯಾಗಿದೆ. ಒಬ್ಬ ಜಾನಪದ ವಿದ್ವಾಂಸನಿಗೆ ಇರಬೇಕಾದ ಅರ್ಹತೆಗಳನ್ನು ಹೊಂದಿರುವ ಶ್ರೀ ನಾವಲಗಿಯವರಿಗೆ ಗೋಕಾಕದ ಗಟ್ಟಿಯಾದ ಜಾನಪದ ಪರಿಸರವೂ ಪ್ರೇರಣಿಗೆ ಹರಿಗಟ್ಟಿದಂತಾಗಿದೆ. ೧" ಎಂದು ಸೋಮಶೇಖರ ಇಮ್ರಾಪುರ ಇವರ ಜಾನಪದದಲ್ಲಿರುವ ಸೃಜನ ಪ್ರತಿಭೆಯನ್ನು ಗುರುತಿಸಿದ ನಾಡಿನ ಹಿರಿಯ ವಿದ್ವಾಂಸರು ಉತ್ತರಕರ್ನಾಟಕದ ಮೂರನೆಯ ತಲೆಮಾರಿನ ಜಾನಪದ ವಿದ್ವಾಂಸರೆಂದು ಪರಿಗಣಿಸಿದ್ದು ಅರ್ಥಪೂರ್ಣವಾಗಿದೆ.

ಅಧ್ಯಯನದ ಉದ್ದೇಶ: ಪ್ರತಿಯೊಂದು ಅಧ್ಯಯನಕ್ಕೂ ತನ್ನದೇಯಾದ ಉದ್ದೇಶ ಒಳಗೊಂಡಿರುವಂತೆ ಈ ಹಿನ್ನೆಲೆಯಲ್ಲಿ ಸಂಶೋಧನೆಯನ್ನು ಕೈಗೊಳ್ಳಲು ಹಲವಾರು ವಿಷಯಗಳಿದ್ದರೂ ಡಾ. ಸಿ.ಕೆ. ನಾವಲಗಿ ಅವರು ಅದೂ ಜಾನಪದ ಸಂಕಲನಗಳ ಅಧ್ಯಯನ ಕೈಗೊಳ್ಳುವ ಉದ್ದೇಶ ಏನೆಂದರೆ ನಾನು ಕೂಡ ಗ್ರಾಮೀಣದವಳಾಗಿದ್ದರಿಂದ ಗ್ರಾಮೀಣ ಜನಪದದ ಬಗ್ಗೆ ಒಲವು ಮೂಡಿತು. ಅದರಲ್ಲೂ ಇಂದು ನಮ್ಮ ಸಂಸ್ಕೃತಿಯ ಉಳಿವಿನ ಬಗ್ಗೆ ನಾವೆಲ್ಲರೂ ಗಮನ ಹರಿಸಬೇಕಾಗಿದೆ. ಆದರಿಂದ ಈ ಸಂಸ್ಕೃತಿಯು ಉಳಿದು ಬೆಳೆಯ ಬೇಕಾದರೆ ನಾವು ಇಂದು ಗ್ರಾಮೀಣ ಜಾನಪದ ಕಲೆಗಳನ್ನು ಉಳಿಸಿಕೊಂಡು ಬರುವದು ಮಹತ್ವದ ಸಂಗತಿಯಾಗಿದೆ. ಅಂತಹ ಕೆಲಸಗಳನ್ನು ಡಾ.ಸಿ.ಕೆ. ನಾವಲಗಿ ಅವರು ಮಾಡುತ್ತಿದ್ದಾರೆ. ಆ ನಿಟ್ಟಿನಲ್ಲಿ ಅವರ ಸಂಕಲನಗಳ ಅಧ್ಯಯನ ಕೈಗೊಳ್ಳುವ ಉದ್ದೇಶ ಇಟ್ಟು ಕೊಳ್ಳಲಾಗಿದೆ. ಇಂದು ಕುಟ್ಟುವ, ಬೀಸುವ, ಮದುವೆಹಾಡುಗಳು ಇವೆಲ್ಲ ನಶಿಸಿಹೋಗುತ್ತಾ ಇವೆ. ಆದ್ದರಿಂದ ಇವುಗಳನ್ನು ನಾವು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಮುಂದುವರೆಸಬೇಕಾದರೆ ಇವುಗಳ ಸಂಗ್ರಹ ಮತ್ತು ಸಂಪಾದನ ಕಾರ್ಯ ಬರದಿಂದ ಸಾಗಬೇಕಾಗಿದೆಯೆಂದು ಈ ಉದ್ದೇಶಕ್ಕಾಗಿ ಸಂಸ್ಕೃತಿಯ ಉಳಿವಿಗಾಗಿ ನಾವುಇಂದು ಹೋರಾಡಿ ಜಯಿಸಬೇಕಾಗಿದೆ. ಅಂತಹ ಮಹಾನ್ ಕಾರ್ಯವನ್ನು ಈಗಾಗಲೇ ಹಲವಾರು ವಿದ್ವಾಂಸರು ಮಾಡಿದ್ದಾರೆ. ಆದರೆ ಈಗ ಹೊಸ ತಲೆಮಾರಿನ ಜಾನಪದ ವಿದ್ವಾಂಸರು ಈ ಉಳಿವಿಗಾಗಿ ತಾವು ಒಬ್ಬರೆ ಶ್ರಮಿಸದೇ ಅವರ ಪತ್ನಿಕೂಡ ಇವರ ಜೊತೆ ಕೈಗೂಡಿಸಿದ್ದಾರೆ. ಇಲ್ಲಿ ಅವರಿಬ್ಬರ ಶ್ರಮ ಅಪಾರವಾದದ್ದು.

---

೧. ಜನಪದ ಕಥನಗೀತ ಸಂಚಯ ಡಾ.ಚನ್ನಬಸವ ನಾವಲಗಿ ಶಕುಂತಲಾ ಚನ್ನಬಸವ ಪ್ರಕಟಣೆ ೨೦೦೨ ಕನ್ನಡ ಸಾಹಿತ್ಯ ಪ್ರತಿಷ್ಠನ ಬೆಂಗಳೂರು ಪುಟ ಬೆನ್ನುಡಿ.

ಜಾನಪದದ ತೆರನ್ನೇಳೆಯಲು ಈಗಲೂ ಸನ್ನದ್ಧರಾಗಿರುವ ದಂಪತಿಗಳ ಶ್ರಮ ಬಹಳ ಅತ್ಯದ್ಭುತವಾದದ್ದು. ಹಾಗಾಗಿ ಇವರ ಬಗ್ಗೆ ಅದೂ ಜಾನಪದ ಸಂಕಲನಗಳ ಸಂಗ್ರಹಗಳ ಬಗ್ಗೆ ಅಧ್ಯಯನ ಕೈಗೊಳ್ಳುವ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಡಾ.ಸಿ.ಕೆ. ನಾವಲಗಿ ಅವರು ಐವತ್ತಕ್ಕೂ ಹೆಚ್ಚು ಗ್ರಂಥಗಳನ್ನು ಬರೆದಿದ್ದಾರೆ. ಇವುಗಳು ಪಿಎಚ್.ಡಿ ಮಾಡುವಷ್ಟು ವಿಷಯವಸ್ತು ಒಳಗೊಂಡಿರುವದರಿಂದ ನಾನು ಇವರ ಜಾನಪದ ಸಂಕಲನಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಏಕೆಂದರೆ ಇಷ್ಟೊಂದು ಎತ್ತರಕ್ಕೆ ಬೆಳೆದವರು. ಅವರ ಬಗ್ಗೆ ಯಾವುದೇ ಎಂ.ಫಿಲ್ ಪಿಎಚ್.ಡಿ ಪ್ರಬಂಧ ಮಂಡಿಸದೆ ಇದ್ದುದರಿಂದ ಇದನ್ನು ಅರಿತು ಅವರ ಜಾನಪದ ಸಂಕಲನಗಳ ಅಧ್ಯಯನವನ್ನು ಕೈಗೊಳ್ಳಲು ನಿಶ್ಚಯಿಸಲಾಗಿದೆ.

ಡಾ.ಸಿ.ಕೆ. ನಾವಲಗಿ ಅವರು ನಾಡಿನ ಮೂಲೆಮೂಲೆಗೆ ತಿರುಗಿ ಭಜನೆ ಹಾಡುಗಳು ಮದುವೆ ಹಾಡುಗಳನ್ನು ಸಾಕಷ್ಟು ಶ್ರಮವಹಿಸಿ ಅವು ನಶಸಿ ಹೋಗದಂತೆ ಸಂಗ್ರಹಿಸಿ ಸಂಪಾದಿಸಿದ್ದಾರೆ. ಈ ಜಾನಪದ ಸಂಗ್ರಹ ಸಂಪಾದನೆಯ ಶಾಸ್ತ್ರವನ್ನು ಅರಿತು ಅಚ್ಚುಕಟ್ಟಾಗಿ ಕಾರ್ಯನಿವಹಿಸಿ ನಮ್ಮೆಲ್ಲರನ್ನು ಸಂಸ್ಕೃತಿಯತ್ತ ಕೊಂಡೊಯ್ಯುವದರ ಮೂಲಕ ನಮ್ಮ ಗಮನ ಸೆಳೆದಿದ್ದಾರೆ. ಗಂಭೀರ, ಚಿಂತನೆ, ತಲಸ್ಪರ್ಶಿ, ಅಧ್ಯಯನ, ನಿರಂತರ ಕ್ಷೇತ್ರಕಾರ್ಯ, ಚಿಕಿತ್ಸಕ ಮನೋಭಾವ, ತೀಕ್ಷ್ಣ ಪ್ರತಿಕ್ರಿಯೆಗಳ ವ್ಯಕ್ತಿತ್ವದ ಪ್ರಮುಖ ಅಂಶಗಳನ್ನು ಹೊಂದಿದ ಡಾ. ಸಿ.ಕೆ.ನಾವಲಗಿಯವರು ಓರ್ವ ಪ್ರತಿಭಾನ್ವಿತ ವಾಗ್ಮಿ ಕೂಡ ವಿಷಯ ಯಾವದೇ ಇರಲಿ ಸಂಪೂರ್ಣ ಸಿದ್ದತೆಯೊಂದಿಗೆ **'ಅರಳು ಹುರಿದಂತೆ'** ಘಂಟೆಗಟ್ಟಲೆ ಜನ ಸಾಮಾನ್ಯರಿಂದ ಹಿಡಿದು ವಿದ್ವಜ್ಜನರು ತಲೆದೊಗುವಂತೆ ವಿಷಯ ಮಂಡನೆ ಮಾಡುವುದುಂಟು.

ಉತ್ತರ ಕರ್ನಾಟಕದ ಜಾನಪದ ಕ್ಷೇತ್ರದ ನಿಕಟ ಪರಿಚಯ, ಜನಪದ ಕಲೆಗಳ ಸಮೀಪ ಸಂಬಂಧ, ಗ್ರಾಮೀಣ ಜೀವನದ ಜೀವಂತ ಸಂಬಂಧವನ್ನು ಉಳಿಸಿಕೊಂಡು ಬಂದ ಜಾನಪದ ತಜ್ಞ ನಾವಲಗಿ ಅವರು. **'ಜಾನಪದ ಅಧ್ಯಯನಕ್ಕೆ ಹೇಳಿಮಾಡಿದ ವ್ಯಕ್ತಿ'**೧. ಎಂದು ಡಾ. ವೃಷಭೇಂದ್ರ ಸ್ವಾಮಿಯವರು ಅಭಿಪ್ರಾಯ ಪಟ್ಟಿರುವದು ನಿಜವಾಗಿದೆ. ಜಾನಪದ ಕ್ಷೇತ್ರಕ್ಕೆ ತಮ್ಮನ್ನು ಅರ್ಪಿಸಿಕೊಂಡು ಆ ಲೋಕದ ಅಂದ ಆನಂದಗಳನ್ನು ಪಂಡಿತ ಪಾಮರಿಬ್ಬರಿಗೂ ಬರಹ, ಮಾತು ಗಳ ಮೂಲಕ ತೆರೆದು ತೋರಿಸುತ್ತಿರುವ ಅಪರೂಪದ ಜಾನಪದ ತಜ್ಞರು.

ಜೀವನದ ಮೌಲ್ಯಗಳೆಲ್ಲ ಮಣ್ಣು ಪಾಲಾಗಿರುವ ಇಂದಿನ ದುರಂತಮಯ ಸಂದಿಕಾಲದಲ್ಲಿ ದೇಶದ ಚೇತನಾ ಶಕ್ತಿಯನ್ನು ಜಾಗೃತಗೊಳಿಸವ ಹಾಗೂ ಹೊಸ ಪೀಳಿಗೆಯಲ್ಲಿ ಜೀವನೋತ್ಸಾಹ ತುಂಬಿ ದಿಕ್ಕು ತಪ್ಪಿದ ತರುಣ ಜನಾಂಗವನ್ನು ಸರಿ ದಾರಿಗೆ ಹಚ್ಚುವ ಏಕಮೇವ ಸತ್ವ ಪೂರ್ಣ ಶಕ್ತಿ ಶಿಕ್ಷಕ. ಇಂತಹ ಶಿಕ್ಷಕ ಸಮೂಹಕ್ಕೆ ಸೇರ್ಪಡೆಯಾಗುವ ವ್ಯಕ್ತಿ ಡಾ. ಸಿ.ಕೆ. ನಾವಲಗಿ ಅವರು.

೧. ಜಾನಪದ ತಲೆಮಾರು ಡಾ.ಸಿ.ಕೆ.ನಾವಲಗಿ ಪುಟ ೨೪೧

ಡಾ.ಸಿ.ಕೆ. ನಾವಲಗಿ ಅವರು ಉತ್ತಮ ಶಿಕ್ಷಕ ರಾಷ್ಟ್ರ ಅಂತರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿಯನ್ನು ಗಿಟ್ಟಿಸಿದ್ದಾರೆ. ಅದೇ ರೀತಿ ಜಾನಪದ ಕ್ಷೇತ್ರದಲ್ಲಿ ಚಿನ್ನದ ಪದಕ ಸಹಿತ ಹೊರಹೊಮ್ಮಿದಾರೆ ಹಾಗಾಗಿ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರಾಗಿ ಸೇವೆಯನ್ನು ಈಗಲೂ ಸಲ್ಲಿಸುತ್ತಿದ್ದಾರೆ. ಹೀಗೆ ಇದೊಂದು ಕಡೆಯಾದರೆ ಜಾನಪದ ಸಾಹಿತಿಯಾಗಿ, ಸಂಶೋಧಕರಾಗಿ, ಸಂಪದಕರಾಗಿ, ವಿಮರ್ಶಕರಾಗಿ ಸಾಧನೆಯ ದಿಗಂತಕ್ಕೆ ಏರಿದ್ದು ಇನ್ನೊಂದು ಕಡೆ ನಮ್ಮ ಎಷ್ಟೋ ಖ್ಯಾತ ವಿದ್ಯಾಂಸರು ಜಾನಪದವನ್ನು ಮಹಾನಗರಗಳಲ್ಲಿ, ವಿಶ್ವವಿದ್ಯಾಲಯದ ಗ್ರಂಥಾಲಯಗಳಲ್ಲಿ ಹುಡುಕಿದರೆ ಆದರೆ ಅವರು ಹಳ್ಳಿಯಲ್ಲಿ ಹುಟ್ಟಿ ಬೆಳೆದು ಬಂದಿದ್ದರಿಂದ ಅವರಿಗೆ ಜಾನಪದ ಸಾಹಿತ್ಯದ ಸತ್ಯ ಸೌಂದರ್ಯ ಸೊಡಗುಗಳನ್ನು ಅರಿತು ಜಾನಪದ ಕಲೆಗಳನ್ನು ಉಳಿಸುವಲ್ಲಿ ಬಹುವಾಗಿ ಶ್ರಮಿಸಿದ್ದಾರೆ. ಅವರ ಜಾನಪದ ಕ್ಷೇತ್ರ ಕಾರ್ಯವಂತೂ ಅಪಾರವಾದದ್ದು. ಅವರೊಬ್ಬ ಉತ್ತಮ ಜಾನಪದ ಕ್ಷೇತ್ರ ಕಾರ್ಯಕರ್ತರೆಂದು ಇಂದು ಬಹುಜನ ವಿದ್ವಾಂಸವರ ಅಭಿಪ್ರಾಯವೂ ಹೌದು.

ಉತ್ತರ ಕರ್ನಾಟಕದ ಮೂರನೇ ತಲೆಮಾರಿನ ಜಾನಪದ ವಿದ್ವಾಂಸರ, ಜಾನಪದ ಕಾರ್ಯ ಮುಂದಿನ ಜಾನಪದ ಅಧ್ಯಯನಗಳಿಗೆ ಸಾಕಷ್ಟು ಆಕರ ಸಾಮಗ್ರಿ ಒದಗಿಸುತ್ತದೆಂಬುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ದೃಷ್ಟಿಯಿಂದ ಇಂತಹ ವ್ಯಕ್ತಿತ್ವ ಹೊಂದುವರನ್ನು ಸಂಶೋಧಕರ ಪ್ರಮುಖ ಸಾಲಿನಲ್ಲಿ ಗುರುತಿಸಲು ಹಾಗೂ ಇವರನ್ನು ಗುರುತಿಸಿ ಮುಂದೆ ಬರುವ ಯುವ ಪೀಳಿಗೆಯ ಅಧ್ಯಯನಕ್ಕೆ ಹೆಚ್ಚು ಅನುಕೂಲವಾಗಲಿ ಎನ್ನುವ ಉದ್ದೇಶದಿಂದ **ಡಾ. ಸಿ. ಕೆ. ನಾವಲಗಿ ಅವರ ಜಾನಪದ ಸಂಕಲನಗಳ ಅಧ್ಯಯನ.** ಎಂಬ ತಲೆಬರಹದಡಿ ಈ ಸಂಶೋಧನಾ ಪ್ರಬಂಧವನ್ನು ಸಮಗ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ವ್ಯಾಪ್ತಿ: ಈ ಹಿನ್ನೆಲೆಯಲ್ಲಿ ಅಧ್ಯಯನದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲಾಗಿದೆ. ಮೊದಲನೇಯ ಅಧ್ಯಯನದಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ವಿವರಿಸಲಾಗಿದೆ. ಎರಡನೇ ಅಧ್ಯಯನದಲ್ಲಿ ಇವರ ಜೀವನ ಮತ್ತು ಸಾಧನೆ ಕುರಿತಳು ವಿವರಿಸಲಾಗಿದೆ. ಮೂರನೇ ಅಧ್ಯಯನದಲ್ಲಿ ಅವರ ಸಂಕಲನಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ಕೈಗೊಳ್ಳಲಾಗಿದೆ. ಅವು ಪ್ರಮುಖವಾಗಿ ಐದು ಕೃತಿಗಳನ್ನು ಒಳಗೊಂಡಿರುತ್ತವೆ.

೧. ಉತ್ತರ ಕರ್ನಾಟಕದ ಭಜನೆ ಹಾಡುಗಳು
೨. ಸೋಮಲಿಂಗ ಕವಿಯ ಲಾವಣಿಗಳು
೩. ಹತ್ತು ಮಂದ್ಯಾಗ ಹಾಡೇನ
೪. ಜಾನಪದ ಕಥನ ಗೀತ ಸಂಚಯ
೫. ಜಾನಪದ ತ್ರಿಪದಿಗಳು

ಉತ್ತರ ಕರ್ನಾಟಕದ ಹಬ್ಬ ಹರಿದಿನಗಳಲ್ಲಿ ಜಾತ್ರೋತ್ಸವ,ಪ್ರಸಿದ್ಧ ಸಾಹಿತಿ ದೊಡ್ಡವರನ್ನು ಊರಿಗೆ ತರುವ ಸಂದರ್ಭದಲ್ಲಿ ಹಾಗೂ ಮಳೆ ಬಾರದಿದ್ದಾಗ ಗುಡಿಗುಂಡಾರಗಳಲ್ಲಿ ಭಜನೆ ಕಾರ್ಯಕ್ರಮ ಇಟ್ಟುಕೊಳ್ಳುವರು. ಭಜನೆ ಲಾವಣಿ ಪದಗಳು ಮದುವೆ ಹಾಡುಗಳು ಪೌರಾಣಿಕ ಐತಿಹಾಸಿಕ ಸಾಮಾಜಿಕ ಕಥನಗಳು ಹಾಗೂ ಜಾನಪದ ತ್ರಿಪದಿಗಳನ್ನು ಸೌದತ್ತಿ ತಾಲೂಕಿನ ಮುರಗೋಡ ಪರಿಸರದ ಹೊಸುರ ಹಾಗೂ ಬೆಳಗಾವಿ ಜಿಲ್ಲೆ ಬೈಲಹೊಂಗಲ ದಾರವಾಡ ಸಮೀಪ ಕುಂದಗೋಳದಲ್ಲಿ ಸಾಕಷ್ಟು ಶ್ರಮವಹಿಸಿ ಶ್ರದ್ದೆಯಿಂದ ಈ ದಂಪತಿಗಳು ಸಂಗ್ರಹಿಸಿ ಸಂಪಾದಿಸಿದ್ದಾರೆ.

ಇಂದು ಇವೆಲ್ಲಾ ಕಣ್ಮರೆಯಾಗುವುದನ್ನು ನೋಡುತ್ತೇವೆ ಆದ್ದರಿಂದ ಇಂದಿನ ಯುವ ಪೀಳಿಗೆಗೆ ಇಂತಹ ಸಂಪಾದನೆಗಳು ಅತ್ಯವಶ್ಯಕವಾಗಿವೆ ಹಾಗೂ ತುಂಬಾ ಪ್ರಯೋಜನಕಾರಿಯಾಗಿವೆ. ಹೀಗೆ ಇವುಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ಕೈಗೊಳ್ಳಲಾಗಿದೆ. ಡಾ. ಸಿ.ಕೆ.ನಾವಲಗಿ ಅವರ ಸಂಪಾದನ ಕೃತಿಗಳನ್ನು ಸಂಪೂರ್ಣವಾಗಿ ಅಧ್ಯಯನಿಸಿದ ನಂತರ ಅವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಹಾಗೂ ಜಾನಪದ ಸಂಪಾದನೆಯನ್ನು ಮೇಲ್ಮಟ್ಟಕ್ಕೆರಿಸಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಲಾಗಿದೆ. ನಾಲ್ಕನೇ ಅಧ್ಯಾಯದಲ್ಲಿ ಸಮಾರೋಪ ಹೇಳಲಾಗಿದೆ ಈ ರೀತಿಯಾಗಿ ಸಂಶೋಧನೆಯ ಉದ್ದೇಶ ಮತ್ತು ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲಾಗಿದೆ.

ಅಧ್ಯಾಯ ೨

ಡಾ. ಸಿ.ಕೆ.ನಾವಲಗಿ ಅವರ ಜೀವನ ಮತ್ತು ಸಾಧನೆ

ಅಧ್ಯಾಯ ೨

ಡಾ. ಸಿ.ಕೆ.ನಾವಲಗಿ ಅವರ ಜೀವನ ಮತ್ತು ಸಾಧನೆ

ಬೆಳಗಾವಿ ಜಿಲ್ಲೆ ಭವ್ಯ ಐತಿಹಾಸಿಕ, ಸಾಂಸ್ಕೃತಿಕ ಹಿನ್ನೆಲೆಯುಳ್ಳ ಗೋಕಾವಿ ನಾಡು ಹಲವು ವಿಶಿಷ್ಟಗಳ ಆಗರ. ಶರಣ ಸಂತರ ನೆಲೆಬೀಡು.ಜಲಪಾತದ ರಮಣೀಯತೆಗೆ, ಕರದಂಟಿನ ರುಚಿಗೆ ಅಳಿಯದ ಬಣ್ಣಕ್ಕೆ ಕಲ್ಲರಳಿ ಹೂವುವಾದಂತಹ ಶುಭ್ರ ಬಣ್ಣಕ್ಕೆ ಹೆಸುರವಾಸಿಯಾಗಿದೆ. ಇಲ್ಲಿ ಸಾಹಿತ್ಯ, ಸಂಗೀತ, ಜನಪದ, ಕಲೆ, ಶಿಕ್ಷಣ, ವಿಜ್ಞಾನ ಕ್ಷೇತ್ರದ ಜಗಜಟ್ಟಿಗಳೆನಿಸಿದ ಅಸಂಖ್ಯಾತರು ಸಾಧನೆಯ ಮೈಲುಗಲ್ಲು ನೆಟ್ಟಿದ್ದಾರೆ. ಪ್ರಕೃತಿ ಸಿರಿ ಸೌಂದರ್ಯದ ನೆಲೆಬೀಡಾದ ಗೋಕಾವಿ ನಾಡು ಸಾಹಿತ್ಯ ಕಲೆ ಸಂಸ್ಕೃತಿಯ ಬೀಡು.

ಹೀಗೆ ಸಾಧನೆ ಸಿದ್ಧಿಗಳ ದೃಷ್ಟಿಯಿಂದ ಒಂದು ಸ್ಥಳಕ್ಕೆ ಮಾತ್ರ ಸೀಮಿತವಾಗಿ ಉಳಿಯದೆ ಇಡೀ ಕರ್ನಾಟಕವೇ ಹೆಮ್ಮೆ ಪಡುವಂತಹ ಅನುಪಮ ಕೊಡುಗೆಗಳನ್ನು ನೀಡುತ್ತಾ ಬಂದಿದ್ದಾರೆ. ಈಗಲೂ ಆ ಸಾಧನೆಯ ಪಥದಲ್ಲಿ ಸಾಗಿ ಸಾರ್ಥಕ ಕೊಡುಗೆ ನೀಡುತ್ತಾ ಮುನ್ನಡೆದಿರುವಂತಹ ದಿಗ್ಗಜರು ನಮ್ಮ ನಾಡಿನವರು ಎಂದು ಹೇಳಿಕೊಳ್ಳುವದೇ ಒಂದು ಸಂಭ್ರಮದ ಅಭಿಮಾನದ ಸಂಗತಿ. ಹಾಗಾಗಿ ಕೆಲವು ಜನರಲ್ಲಿ ಎದ್ದು ಕಾಣುವ ಹೆಸರು ಡಾ. ಸಿ.ಕೆ. ನಾವಲಗಿ ಅವರು. ಇವರು ಗೋಕಾವಿ ನಾಡನ್ನು ಚಿರಂತನಗೊಳ್ಳಿಸುತ್ತಿರುವ ಪುಣ್ಯ ಜೀವಿ,ಬೆಳಕು ಬಿತ್ತುತ್ತಿರುವರು, ಹೊನ್ನ ಬೆಳೆಯುತ್ತಿರುವವರು ಇಂತವರ ಜೀವನ ಸಾಧನೆಯ ಕಿರು ಪರಿಚಯವನ್ನು ಸಂಕ್ಷಿಪ್ತವಾಗಿ ಕೊಡಲಾಗುವದು.

ಕೌಟುಂಬಿಕ ಹಿನ್ನೆಲೆ: ಡಾ. ಸಿ.ಕೆ. ನಾವಲಗಿ ಅವರ ಅಜ್ಜ ದೊಡ್ಡ ಫಕೀರಪ್ಪ ಇವರ ಮಕ್ಕಳು ಶಿವಲಿಂಗಪ್ಪ ಮತ್ತು ಕಲ್ಲಪ್ಪ ಎಂಬ ಇಬ್ಬರು ಶಿವಲಿಂಗಪ್ಪನಿಗೆ ಇಬ್ಬರು ಗಂಡ ಮಕ್ಕಳು ಫಕೀರಪ್ಪ, ಶಿವರುದ್ರಪ್ಪ ಅದೇ ರೀತಿ ಕಲ್ಲಪ್ಪ ಮತ್ತು ಬಸಲಿಂಗವ್ವ ದಂಪತಿಗಳಿಗೆ ನಾಲ್ಕು ಜನ ಹೆಣ್ಣು ಮಕ್ಕಳು ನಾಲ್ಕು ಜನ ಗಂಡ ಮಕ್ಕಳು. ಇದರಲ್ಲಿ ಡಾ. ಸಿ.ಕೆ. ನಾವಲಗಿ ಒಬ್ಬರು.

ಡಾ. ಸಿ.ಕೆ. ನಾವಲಗಿ ಅವರು ಪತ್ನಿ ಶ್ರೀಮತಿ ಶಕುಂತಲಾರವರು. ಅವರಿಗೆ ಒಬ್ಬನೆ ಒಬ್ಬ ಮಗ ಭರತ ಎಂಬುವನು. ಹೀಗೆ ಅವರ ಕುಟುಂಬದ ಹಿನ್ನೆಲೆ ಬೆಳೆದುಬಂದಿದೆ.

ಡಾ. ಸಿ.ಕೆ. ನಾವಲಗಿ ಅವರು ಬಾಲಕನಿದ್ದಾಗಲೇ ಅವರ ತಾಯಿ, ಅಕ್ಕ,ಅಣ್ಣ,ತಂಗಿ, ಪ್ರಭಾವ ಅವರ ಮೇಲೆ ಆಗಿದೆ. ಅದರಲ್ಲೂ ಇವರ ತಾಯಿಯ ಪ್ರಭಾವ ಬಾಲಕನಿದ್ದಾಗಲೇ ಇವರ ತಾಯಿ ಜಾನಪದ ಹಾಡುಗಳನ್ನು ಮೇಲಕು ಹಾಕುತ್ತಿರುವಾಗ ಗಮನವಿಟ್ಟು ಕೇಳುತ್ತಿದ್ದರು. ಅದುವೇ ಮುಂದೆ ಇವರು ಎಂ.ಎ. ಪಿಎಚ್.ಡಿ ಮಾಡುವಾಗ ಅನೂಕೂಲವಾಯಿತು. ಇವರು ಇವೆರಡು ಪದವಿಯಲ್ಲಿ ಚಿನ್ನದ ಪದಕ ಸಹಿತ ಹೊರಹೊಮ್ಮಲು ಸಹಕಾರಿಯಾಯಿತು.

ಡಾ.ಸಿ.ಕೆ. ನಾವಲಗಿ ಅವರು ಮೂಲತ: ಕೃಷಿ ಕುಟುಂಬದಲ್ಲಿ ಜನಿಸಿದ್ದು. ಅವರ ತಾಯಿ ಅನಕ್ಷರಸ್ಥೆಯಾದರೂ ಅವರಲ್ಲಿ ಜಾನಪದ ಸೊಡಗು ಮನೆಮಾಡಿದಂತಾಗಿತ್ತು.

ಅವರು ಯಾವುದೇ ಶಿಕ್ಷಣ ಪಡೆಯದಿದ್ದರೂ ಜಾನಪದದ ತ್ರಿಪದಿಗಳನ್ನು ಸರಾಗವಾಗಿ ಹಾಡುತ್ತಿರುವದನ್ನು ನೋಡಿದರೆ ಅವರ ನೆನಪಿನ ಶಕ್ತಿ ಅಗಾಧವಾದದ್ದು.

ಡಾ.ಸಿ.ಕೆ. ನಾವಲಗಿ ಅವರು ತಾಯಿ ಕುಟ್ಟುವಾಗ, ಬೀಸುವಾಗ, ಮಕ್ಕಳನ್ನು ಮಲಗಿಸುವಾಗ, ಹಾಡುವದನ್ನು ಕೇಳಿ ನಮ್ಮ ತಾಯಿಯೂ ಒಬ್ಬ 'ಜಾನಪದ ಕವಿಯಿತ್ರಿ' ಎಂಬುದು ಅವರಿಗೆ ಗೊತ್ತಾಗಿದ್ದು ೧೯೮೧ ರಲ್ಲಿ ಎನ್ನುತ್ತಾರೆ. ಈ ಸಂಧರ್ಭದಲ್ಲಿಯೇ ಎಂ.ಎ. ಮಾಡುವಾಗ ಜಾನಪದದ ಬಗ್ಗೆ ಬರೆಯ ಬೇಕಾಗಿದ್ದರಿಂದ ಅವರು ಅಲ್ಲೆ, ಇಲ್ಲಿ, ಎಲ್ಲಿ ತಿರುಗಾಡಿ ಮಾಹಿತಿ ಸಂಗ್ರಹಿಸ ಬೇಕು ಎಂದು ಆಳವಾಗಿ ಯೋಚಿಸತೊಡಗಿದಾಗ ಆ ಕ್ಷೇತ್ರಕಾರ್ಯಕ್ಕೆಂದು ಧಾರವಾಡದಿಂದ ತಮ್ಮ ಮನೆಗೆ ಮರಳಿಬಂದಾಗ ಅವರ ತಾಯಿಯೇ ಅವರಿಗೆ ಸುಲಭವಾಗಿ ಜಾನಪದ ಉಸಿರು ಎನ್ನಿಸಿಕೊಳ್ಳಲಿಕ್ಕೆ ಪ್ರೇರಣೆ ಸುಲಭವಾಗಿ ದೊರೆಯಿತು. ಹೀಗೆ ಅವರ ಕೌಟುಂಬಿಕ ಹಿನ್ನೆಲೆ ಜಾನಪದದಿಂದಲೇ ಕೂಡಿತ್ತು ಎಂದರೆ ತಪ್ಪೆನಿಸಲಾರದು.

ಡಾ.ಸಿ.ಕೆ. ನಾವಲಗಿ ಅವರು ಸಾಹಿತ್ಯದಲ್ಲಿ ಒಂದೊಂದು ಮೆಟ್ಟಿಲನ್ನು ಏರುತ್ತಾ ಮುಂದೆ ಸಾಗುತ್ತಿರುವದಕ್ಕೆ ಅವರ ಕುಟುಂಬವೇ ಕಾರಣವಾಗಿದೆ. ಆದರೆ ಯಾವುದೇ ಒಂದು ಸಹಜ ಸಾಧಾರಣ ಕೆಲಸ ಮಾಡಿದರು ಸದಾ ಸುದ್ದಿಯಲ್ಲಿದ್ದು. ಚೌಲಿನಲ್ಲಿ ಡೌಲು ಮಾಡುವವರೇ ಹೆಚ್ಚು. ಸಾಕಷ್ಟು ಸಾಧನೆ ಖ್ಯಾತಿ ಮಾನ ಸನ್ಮಾನಗಳನ್ನು ಹೊಂದಿದ್ದು ಸರಳ ಸಾಚಾ ಸೇವೆ ನಡೆಸಿ ಜನ ಸಾಮಾನ್ಯರಂತೆ ಜನರೊಂದಿಗೆ ಬೆರೆತು ಬದುಕುವರ ಸಂಖ್ಯೆತೀರಾವಿರಳ. ಇಂತಹವರಲ್ಲಿ ಜಾನಪದ ತಜ್ಞ, ಜಾನಪದ ವಿದ್ವಾಂಸ ಉತ್ತಮ ಶಿಕ್ಷಕರಾಗಿ ಸರಳ ಸಜ್ಜನಿಕೆಗೆ ಹೆಸರಾದ ಡಾ.ಸಿ.ಕೆ. ನಾವಲಗಿ ಅವರು ಗತ್ತು ಗಾಂಭೀರ್ಯ ಆಡಂಬರಗಳಿಲ್ಲದೇ ಸಾಧನೆಗೈಯುತ್ತಿರುವದು ಅಪಾರವಾಗಿದೆ.

ಡಾ.ಸಿ.ಕೆ. ನಾವಲಗಿ ಅವರ ಎಲ್ಲ ಸಂಪಾದನಾ ಕಾರ್ಯಗಳನ್ನು ಗಮನಿಸಿದರೆ ಅವರ ನಿಷ್ಠೆ, ಪರಿಶ್ರಮ, ಕಾರ್ಯತತ್ಪರತೆ ಎಷ್ಟು ಗಟ್ಟಿಯಾಗಿವೆ ಎಂಬುವದನ್ನು ತೋರಿಸುತ್ತವೆ. ಜೀವನವನ್ನು ಸಮಗ್ರವಾಗಿ ಸ್ವೀಕರಿಸಿ ಸುಖ: ಸಂತೋಷ ನೆಮ್ಮದಿಯಿಂದ ಕೆಲವು ಎಲೆಯ ಮರೆಯ ಕಾಯಿಯಂತೆ ಬದುಕುತ್ತಿರುವ ಬುದ್ದಿ ಜೀವಿ

ಡಾ.ಸಿ.ಕೆ. ನಾವಲಗಿ ಅವರು ಜೀವನದಲ್ಲಿ ಏನಾದರು ಸಾಧಿಸಬೇಕು ಎನ್ನುವ ಛಲ ಹೊಂದಿದ ಇಡೀ ಜನಾಂಗ ಸಂಶೋಧಕರಿಗೆ ಒಂದು ಸೂಕ್ತವಾದ ಪಾಠವಾಗುತ್ತದೆ ಎಂದು ಹೇಳಬಹುದು.

<u>ಜನನ ಮತ್ತು ಬಾಲ್ಯ</u>: ಚೆನ್ನಬಸಪ್ಪ ಕಲ್ಲಪ್ಪ ನಾವಲಗಿ ಅವರು ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರು ಸಮೀಪದ ಬಸರಕೋಡ ಗ್ರಾಮದಲ್ಲಿ ಕಲ್ಲಪ್ಪ ಹಾಗೂ ಬಸಲಿಂಗವ್ವ ದಂಪತಿಗಳ ಮಗನಾಗಿ ೧೯೫೬ ಅಗಸ್ಟ ೧ರಂದು ಜನಿಸಿದರು.ಅವರದು ಒಕ್ಕಲುತನದ ಮನೆತನ ಬಾಲ್ಯದಲ್ಲಿ ತಾಯಿ ಬಸಲಿಂಗವ್ವ ಅವರು ಕುಟ್ಟುವಾಗ,ಬಿಸುವಾಗ, ಮನೆಗೆಲಸದಲ್ಲಿ ತೊಡಗಿದಾಗ ಮಕ್ಕಳನ್ನು ಮಲಗಿಸುವಾಗ ಅವರ ಹಾಡುಗಳ ನಾದ ಮಾದುರ್ಯ ಸ್ವಾರಸ್ವವನ್ನು ಆನಂದಿಸುತ್ತಿದ್ದರು.ಅವರ ತಾಯಿ ಅನಕ್ಷರಸ್ಥೆ ಆದರೂ ಅವರಿಗೆ ಜಾನಪದ ಹಾಡುಗಳನ್ನು ನೆನಪಿಡುವ ಶಕ್ತಿ ಅಪಾರ ವಾಗಿತ್ತೆಂದು ತಿಳಿದು ಬರುತ್ತದೆ ಹಾಗಾಗಿ ಇವರ ತಾಯಿಯೊಬ್ಬರೆ ಹಾಡಿದ ನೂರರಷ್ಟು ಜಾನಪದ ತ್ರಿಪದಿಗಳನ್ನು ಸಂಗ್ರಹಿಸಿದ್ದಾರೆ.

ಹಳ್ಳಿಯಲ್ಲಿ ನಡೆಯುತ್ತಿದ್ದ ಮದುವೆ,ಮುಂಜಿವೆ,ಸೀಮಂತಕಾರ್ಯ ಹೋಳಿಹುಣ್ಣಿವೆ ಮುಂತಾದ ಸಂದರ್ಬಗಳಲ್ಲಿ ತಮ್ಮ, ಅಕ್ಕ, ಅತ್ತಿಗೆ ಇನ್ನುಳಿದ ಹೆಣ್ಣುಮಕ್ಕಳು ಹಾಡುತ್ತಿದ್ದ ಹಾಡು, ಹೇಳುತಿದ್ದ ಒಡಪು,ಒಗಟು,ಕತೆಗಳನ್ನು ಬಾಲಕರಿದ್ದಾಗ ಗಮನವಿಟ್ಟು ಕೇಳ ಬಹಳ ಖುಷಿಪಡುತಿದ್ದರು.

ವರ್ಷಕ್ಕೊಮ್ಮೆಯಾರಾದರೂ ತಮ್ಮ ಊರು ಬಸರಕೂಡದಲ್ಲಿ ಏರ್ಪದಿಸಿದ್ದ ನಿಜಗುಣ ಶಿವಯೋಗಿಯ ವಣ ಸಣ್ಣಾಟವನ್ನು ನೋಡುತ್ತಿದ್ದ ಬಾಲಕ ನಾವಲಗಿ ಅವರು ಸಣ್ಣಾಟದ, ತಾಲೀಮು, ರಂಗತಾಲೀಮು ನೋಡಿ ಸಂತೋಷದಲ್ಲಿ ಮುಳಗುತ್ತಿದ್ದರು.ಬೈಲಹೊಂಗಲದ ಪ್ರಸಿದ್ಧ ಕಲೆಗಾರ ಈಶಪ್ರಭು ಈಟಿಯವರ ಸಣ್ಣಾಟವನ್ನು ಅನೇಕ ಸಲ ನೋಡಿ ಆ ಆಟದಲ್ಲಿಯ ಪಾತ್ರಗಳ ಸಂಭಾಷಣೆ ವಾದ್ಯಮೇಳ, ಸ್ವರ,ಹಾಡುಗಳಿಂದ ಪ್ರಭಾವಿತರಾಗಿದ್ದರು ಸಣ್ಣಾಟದಲ್ಲಿಯ ದಪ್ಪು ಬಾರಿಸುವದು ಗತಿ ಗತ್ತು ಬಾಲಕ ಛನ್ನಬಸಪ್ಪ ಅವರನ್ನು ರಂಜಿಸುತ್ತಿದ್ದವು. ಸಣ್ಣಾಟದ ಮಾತು ಗಳಂತೂ ಅವರಿಗೆ ಬಾಯಿಪಾಠವಾಗಿದ್ದವು.ಹೀಗೆ ಅವರ ಬಾಲ್ಯದಲ್ಲಿಯೇ ಜಾನಪದದ ಬಗ್ಗೆ ಹೆಚ್ಚಿನ ಒಲವು ತೋರುತ್ತಿದ್ದುದು ಕಂಡುಬರುತ್ತದೆ.

ಶಿಕ್ಷಣ:ಡಾ.ಸಿ.ಕೆ. ನಾವಲಗಿ ಅವರು ಬೆಳಗಾವಿ ಜಿಲ್ಲೆಯ ಕಿತ್ತೂರು ಪರಿಸರದ ಬಸರಕೊಡ ಗ್ರಾಮದಲ್ಲಿ ಒಂದರಿಂದ ನಾಲ್ಕನೇ ತರಗತಿವರೆಗೆ,ಐದರಿಂದ ಏಳನೆ ತರಗತಿವರೆಗೆ ದೇವಗಾಂವಿ ಗ್ರಾಮದಲ್ಲಿ ಪೂರೈಸಿ, ಹೈಸ್ಕೂಲ್ ಶಿಕ್ಷಣ ಕಿತ್ತೂರಿನಲ್ಲಿ ಮುಗಿಸಿದರು ಅಲ್ಲಿಯೇ ಪಿಯುಸಿ ಮುಗಿಸಿ ಪದವಿಯನ್ನು ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಓದಿದರು.

೧೯೮೧ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜಾನಪದ ಸಾಹಿತ್ಯದಲ್ಲಿ ಕನ್ನಡ ವಿಷಯತೆ ಗೆದುಕೊಂಡು ಫ್ರಥಮಸ್ಥಾನದೊಂದಿಗೆ ಚಿನ್ನದ ಪದಕ ಗಳಿಸಿದ್ದಾರೆ.

೧೯೮೨ ರಲ್ಲಿ ಬಸವ ಅದ್ಯಯನ ಡಿಪ್ಲೋಮಾ ಪ್ರಥಮಸ್ಥಾನದೊಂದಿಗೆ ಚಿನ್ನದಪದಕಸಹಿತ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಡೆದುಕೊಂಡಿದ್ದಾರೆ.

೧೯೯೨ ರಲ್ಲಿ ವಚನ ಸಾಹಿತ್ಯದಲ್ಲಿ ಜಾನಪದ ಅಂಶಗಳ ಒಂದು ವಿಷಯದ ಮೇಲೆ ಪ್ರೌಢಪ್ರಬಂಧ ಬರೆದು ಸುವರ್ಣ ಪದಕಸಹಿತ ಪಿಎಚ್.ಡಿ. ಸಂಪಾದಿಸಿದ್ದಾರೆ.

ಚಿಕ್ಕವರಿದ್ದಾಗ ಡಾ.ಸಿ.ಕೆ. ನಾವಲಗಿ ಅವರು ತಾಯಿಯಿಂದ ಜಾನಪದ ಹಾಡುಗಳನ್ನು ಬಹು ಆಸಕ್ತಿಯಿಂದ ಕೆಳುತ್ತಿದ್ದ ಅವರು ಚಿನ್ನದ ಪದಕ ಗಳಿಸಲು ಪ್ರೇರಣೆ ನೀಡಿದಂತಾಗಿದೆ. ಅವರು ಕೃಷಿ ಮನೆತನದಲ್ಲಿ ಹುಟ್ಟಿ ಬೆಳೆದರೂ ಶಿಕ್ಷಣಕ್ಕೆ ಯಾವದೂ ಅಡ್ಡಿಯಾಗಲಿಲ್ಲ ಎಂಬುವದು ಇವರ ಶಿಕ್ಷಣದಿಂದ ತಿಳಿದು ಬರುತ್ತದೆ.ಕಿತ್ತೂರು ಪರಿಸರದಲ್ಲಿಯೇ ಸಾಹಿತ್ಯಿಕ ವಿಷಯದಲ್ಲಿ ಸಾಧನೆ ಮಾಡಿ ಇವರೊಬ್ಬರೆ ಪಿಎಚ್.ಡಿ. ಪಡೆದಿರುವುದು ವಿಶೇಷವಾಗಿದೆ.

ಹೀಗೆ ಇಂದಿನ ಯಾಂತ್ರಿಕ ಬದುಕಿನಲ್ಲಿ ಯಾವುದೆ ಒಂದು ರಂಗದಲ್ಲಿ ಪ್ರಖ್ಯಾತಿಯನ್ನು ಪಡೆಯುವದು ಸುಲಭದ ಕಾರ್ಯವಲ್ಲ. ಈಗಲೂ ಸಾಹಿತಿಯಾಗಿ, ಸಂಶೋಧಕರಾಗಿ, ಸಂಪಾದಕರಾಗಿ, ವಿಮರ್ಶಕರಾಗಿಶಿಕ್ಷಕರಾಗಿ ಉತ್ತರ ಕರ್ನಾಟಕದಲ್ಲಿ ಜಾನಪದ ಸಾಹಿತ್ಯವನ್ನು ಉಳಿಸಿ ಬೆಳೆಸಿದ ಕೀರ್ತಿ ಜಾನಪದ ವಿದ್ವಾಂಸರಾದ ಅವರಿಗೆ ಸಲ್ಲುತ್ತದೆ. ಡಾ.ಸಿ.ಕೆ. ನಾವಲಗಿ ಅವರು ಸಲ್ಲಿಸಿದ ಸೇವೆ ಸಾಧನೆ ಅಪೂರ್ವ ಹಾಗೂ ಅಧ್ಭುತವಾದುದು.

ಕೌಟುಬಿಂಕ ಜೀವನ: ಡಾ.ಸಿ.ಕೆ. ನಾವಲಗಿ ಅವರು ಬೆಳಗಾವಿ ಜಿಲ್ಲೆಯ ಸವದತ್ತಿಯ ಮುನ್ನೋಳಿ ಗ್ರಾಮದ ಧಡೇದ ಮನೆತನದ ಶಕುಂತಲಾ ಅವರೊಂದಿಗೆ ಮೇ ೨೨ ೧೯೮೫ ರಂಡು ವಿವಾಹ ಮಾಡಿಕೊಂಡರು. ಶಕುಂತಲಾ ಅವರು ಎಂ.ಎ ಕನ್ನಡ ಪದವಿಧರರು ಆಗಿರುವದರಿಂದ ಇವರ ಬೋಧನೆ ಮತ್ತು ಸಾಹಿತ್ಯಿಕ ಸಾಧನೆಗಳಿಗೆ ಸಹಜವಾಗಿ ನೆರವಾದರು. ಈ ದಂಪತಿಗಳಿಗೆ ಭರತ ಎಂಬ ಒಬ್ಬನೇ ಒಬ್ಬ ಮಗ. ಗೋಕಾಕ ನಿವಾಸಿಯಾದ ಇವರು ಪತ್ನಿ ಹಾಗೂ ಸಹೋದ್ಯೋಗಿ ನೆರೆಹೊರೆಯವರು ಸಾರ್ವಜನಿಕ, ಗೋಕಾಕ ಶಿಕ್ಷಣ ಸಂಸ್ಥೆಯ ಸಹಾಯ ಸಹಕಾರದೊಂದಿಗೆ ಗೋಕಾಕ ಪರಿಸರದ ಜನಪ್ರಿಯ ಪ್ರಾಧ್ಯಾಪಕರಾಗಿ ಶ್ರೇಷ್ಠ ವಾಗ್ಮಿಗಳಾಗಿ ಉತ್ತಮ ಸಾಹಿತಿಗಳಾಗಿ ಕನ್ನಡ ಪರ ಸಂಘಟಕರು, ಹೋರಾಟಗಾರರಾಗಿ ಎಲ್ಲಕ್ಕೂ ಮುಖ್ಯವಾಗಿ ಜಾನಪದ ತಜ್ಞನಾಗಿ, ಜಾನಪದ ವಿದ್ವಾಂಸರಾಗಿ ಹೊರಹೊಮ್ಮಿದ್ದಾರೆ ಅದರಲ್ಲೂ ಅವರ ಕೌಟುಂಬಿಕ ಪರಿಸರ ಇವತ್ತಿಗೂ ಸಾಹಿತ್ಯಿಕವಾಗಿ ಸಾಂಸ್ಕೃತಿಕವಾಗಿ ಕಠಿಣಸಮಸ್ಯೆಗಳೂ ಎದುರಾದಂತಹ ಸಮಯದಲ್ಲಿ ಸಲಹೆಪಡೆದುದಾಗಿ ಅವರೆ ಹೇಳಿಕೂಳ್ಳುತ್ತಾರೆ.ಅವರ ಪತ್ನಿಯೂ ಜನಪದ ಸಂಪಾದನೆ ಅಲ್ಲದೆ ಪ್ರಕಟಿಸುವಲ್ಲಿಯೂ ನೆರವಾದುದು ಗಮನಾರ್ಹ.

ಜನಪದ ಕಥನದಲ್ಲಿ ಮದುವೆ ಹಾಡು, ಹಂತಿ ಹಾಡು,ಇತ್ಯಾದಿ ಸಂಗ್ರಹದೊಂದಿಗೆ ಡಾ.ಸಿ.ಕೆ. ನಾವಲಗಿ ಅವರ ಪತ್ನಿಯವರ ಶ್ರಮ ಶ್ಲಾಘನೀಯವಾದದು. ಕರ್ನಾಟಕದ ಜಾನಪದ ಅಕಾಡೆಮಿ,ಕನ್ನಡ ಮತ್ತು ಸಾಂಸ್ಕೃತಿಕ ಇವುಗಳ ಸಹಯೋಗದೊಂದಿಗೆ ಸಿದ್ದಗೊಳುತ್ತಿರುವ ಜಾನಪದ ನಿಘಂಟುವಿನ ಬೆಳಗಾವಿ ಜಿಲ್ಲೆಯಕ್ಷೇತ್ರ ತಜ್ಞೆಯಾಗಿ ಶಂಕುಂತಲಾ ಅವರು ಕೆಲಸ ಮಾಡಿದ್ದಾರೆ.ಈಗ ೨೦೧೨-೨೦೧೩ ನೇ ಸಂದರ್ಭದಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಹಮ್ಮಿಕೊಂಡ ಜಾನಪದ ಕೋಶಗಳ ಸಿಧ್ದತೆಯಲ್ಲಿ ಹಾಗೂ ಬೆಳಗಾವಿ ಜಿಲ್ಲೆಯ ಕ್ಷೇತ್ರ ತಜ್ಞೆಯಾಗಿ ಇವರ ಕೆಲಸ ಮಾಡುತ್ತಿರುವುದು ಅವರ ಸಾಹಿತ್ಯಿಕ ಪ್ರೀತಿಯನ್ನು ಬಿಂಬಿಸುತ್ತದೆ.

ಇದಕ್ಕೂ ಪೂರ್ವದಲ್ಲಿ ಶ್ರೀಮತಿ ಶಕುಂತಲಾ ಅವರು ಪದವಿ ಆದಾರದ ಮೇಲೆ ಕೆ.ಪಿ.ಎಸ್.ಸಿ ಪರಿಕ್ಷೆ ಪಾಸು ಮಾಡಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕಳೆದ ಇಪ್ಪತ್ತೈದು ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಆದರೆ ಸದ್ಯಕ್ಕೆ ಮಧುಮೇಹದ ಕಾರಣದಿಂದ ಸ್ವಯಂ ನಿವೃತ್ತಿಯನ್ನು ಕೈಗೊಂಡು ಕೇವಲ ಗೃಹಿಣಿಯಾಗಿ ಮನೆಯಲ್ಲಿದ್ದಾರೆ. ಆದರೂ ಪತಿಯೊಂದಿಗೆ ಸಾಹಿತ್ಯಿಕ ಕೆಲಸದೊಂದಿಗೆ ಅದರಲ್ಲಿಯೂ ಜಾನಪದ ಸಾಹಿತ್ಯಿಕ ಸೇವೆಯನ್ನು ಮಾಡುತ್ತಿದ್ದಾರೆ.

ಈ ರೀತಿಯಾಗಿ ಅವರ ಕೌಟುಂಬಿಕ ಪರಿಸರ ಡಾ.ಸಿ.ಕೆ. ನಾವಲಗಿ ಅವರ ಬೆಳವಣಿಗೆಗೆ ಪೂರಕವಾಗಿದ್ದು ತುಂಬಾ ಸಹಾಯಕವಾಗಿದೆ.ಇದಕ್ಕೂ ಪೂರ್ವದಲ್ಲಿ ಡಾ.ಸಿ.ಕೆ. ನಾವಲಗಿ ಅವರು ಚಿಕ್ಕವರಿರುವಾಗಲೇ ಅವರ ತಾಯಿ ಹಾಡುವ ಹಾಡುಗಳನ್ನು ಅವಳ ತೊಡೆಯ ಮೇಲೆ ಮಲಗಿ ಕೊಂಡೇ ಆಲಿಸಿದವರು. ಜೊತೆಗೆ ಊರಿನಲ್ಲಿ ಆಗಾಗ ಪ್ರದರ್ಶನಗೊಳ್ಳುವ ನಿಜಗುಣಿ ಆಟ, ಶ್ರೀಕೃಷ್ಣ ಪಾರಿಜಾತ, ಬೈಲಾಟ, ದುರುಗಮುರಗಿಯರ ಆಟ, ಹಾವಾಗಾರ ಆಟ, ಕರಡಿ ಆಟ, ಲಂಬಾಣಿ ಕುಣಿತ, ಕರ್ಬಲ್ ಕುಣಿತ, ಹಬ್ಬ ಹುಣ್ಣಿಮೆಗಳಲ್ಲಿ ಪ್ರದರ್ಶನಗೊಳ್ಳುವ ಇತ್ಯಾದಿ ಆಟ ನಾಟಕಗಳನ್ನು ಗ್ರಾಮೀಣ ಪ್ರದೇಶದಲ್ಲಿ ನೋಡುತ್ತಾ ಅವುಗಳಲ್ಲಿ ಪಾಲ್ಗೋಳ್ಳುತ್ತಾ ಅವುಗಳೊಂದಿಗೆ ಬೆಳೆದು ಬಂದವರು.

ಹೀಗೆ ಕೌಟುಂಬಿಕ ಪರಸರ, ಶಾಲಾ ಪರಿಸರ, ಸಾಮಾಜಿಕ ಪರಿಸರ, ಉದ್ಯೋಗ ನಿರಿತ ಪರಿಸರ ಇತ್ಯಾದಿಗಳಲ್ಲಿಯೇ ಸಾಂಸ್ಕೃತಿಕ ಪರಿಸರದ ಪ್ರಭಾವ ಪ್ರೇರಣೆಗಳಿಂದ ಬೆಳೆದುಬಂದವರು. ಅತ್ಯಂತ ಚಿಕ್ಕ ಬಡ ಊರಿನಲ್ಲಿ ಜನಿಸಿದ ಡಾ.ಸಿ.ಕೆ.ನಾವಲಗಿ ಅವರು ಪ್ರಾಧ್ಯಾಪಕರಾಗಿ, ಸಾಹಿತಿಯಾಗಿ, ಜಾನಪದ ವಿದ್ವಾಂಸರಾಗಿ ರಾಜ್ಯಮಟ್ಟದ ಪ್ರಶಸ್ತಿಗಳೊಂದಿಗೆ ಜನಪ್ರಿಯ ವ್ಯಕ್ತಿಯಾಗಿ ರೂಪಗೊಳ್ಳಲು ಸಾಧ್ಯವಾಗಿದೆ.

"ಪ್ರೇಯಸಿಯೇ ಪತ್ನಿಯಾಗಬೇಕು! ಪ್ರವೃತ್ತಿಯೇ ವೃತ್ತಿಯಾಗಬೇಕು ಎಂಬಂತೆ ಚನ್ನಬಸವ - ಶಕುಂತಲಾ ನಿಜಕ್ಕೂ ಇವರು ಭಾಗ್ಯವಂತರು ೧" ಎನ್ನುವದು ಅಭಿಮಾನಿಗಳ ಮಾತು. ಈ ದೃಷ್ಟಿಯಿಂದ ಡಾ. ಸಿ.ಕೆ.ನಾವಲಗಿ ಅವರು ನಿಜಕ್ಕೂ ಅದೃಷ್ಟವಂತರು. ಅವರು ಸುಖ ದಾಂಪತ್ಯ! ಅವರನ್ನು ಅರ್ಥಮಾಡಿಕೊಳ್ಳ ಬಲ್ಲ ಜೀವನ ಸಂಗಾತಿ ಅವರ ಸಾಧನೆ ಶ್ರೇಯಸ್ಸಿಗೆ ಒತ್ತಾಸೆಯಾಗಿ ನಿಂತಿದ್ದಾರೆ. ಹತ್ತು ಮಂದ್ಯಾಗ ಹಾಡೇನ ಸಂಗ್ರಹವನ್ನು ಮಾಡುವಾಗ ಇವರು ಹಾಗೂ ಪತ್ನಿ ಶಕುಂತಲಾ ಇಬ್ಬರು ಕೂಡಿ ಮಾಡಿದ ಸಂಗ್ರಹ ಪುಸ್ತಕ. ಇದನ್ನು ನೋಡಿದರೆ ಅವರ ದಾಂಪತ್ಯ ಜೀವನ ತಿಳಿದು ಬರುತ್ತದೆ.

ಏನು ಎಕೆಂಬ ಜಾನ ದಂಪತಿಗಳಿಗೆ ಸೂನು ಜನಿಸುವನು' ಎಂಬಂತೆ ಏಕೈಕ ಸುಪುತ್ರ ಭರತ. ಈತ ಪ್ರತಿಭಾವಂತ ವಾಕ್ಪಟು - ಬೆಂಗಳೂರಿನಲ್ಲಿ ಬಿ.ಇ. ಇಂಜನಿಯರಿಂಗ ಮುಗಿಸಿ ಸದ್ಯಕ್ಕೆ ದೆಹಲಿಯಲ್ಲಿ ಆಯ್.ಎ.ಎಸ್ ಓದುವಲ್ಲಿ ಮಗ್ನನಾಗಿದ್ದರೂ ಕೂಡ ಸಾಕಷ್ಟು ಸಹಕಾರಿ ನೀಡಿದ್ದಾನೆ ಎಂದು ಸ್ವತ: ತಾವೇ ಹೇಳಿದ್ದಾರೆ. ಹೀಗೆ ಇವರ ಕೌಟುಂಬಿಕ ಜೀವನದ ಪ್ರತಿಯೊಂದು ಘಟ್ಟವು ಇವರನ್ನು ಮೇಲ್ಮಟಕ್ಕೆ ತರಲು ಪ್ರೇರಣೆ ನೀಡಿದಂತಿದೆ. ಒಟ್ಟಿನಲ್ಲಿ ಅವರ ಕೌಟುಂಬಿಕ ಜೀವನ ಸುಮಧುರವಾದದ್ದು.

<u>ವೃತ್ತಿ ಜೀವನ</u>: ಬೆಳಗಾವಿಯ ಜಿಲ್ಲೆಯ ಗೋಕಾಕ ಕಾಲೇಜ ಎಂದಾಕ್ಷಣ ಮೊಟ್ಟ ಮೊದಲು ಹೆಸರು ಕೇಳಿ ಬರುವಂತಹದ್ದು ಜಗದ್ಗುರು ಶ್ರೀ ಸಿದ್ಧಲಿಂಗೇಶ್ವರ ಸಂಸ್ಥೆಯ ವಿಜ್ಞಾನ ಮತ್ತು ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಎಂಬ ಪ್ರತಿಷ್ಠಿತ ಕಾಲೆಜೋಂದರಲ್ಲಿ ಸೇವೆ ಸಲ್ಲಿಸುತ್ತಿರುವ ಡಾ.ಸಿ.ಕೆ.ನಾವಲಗಿ ಅವರ ಘನತೆ ಗೌರವ ಹೆಚ್ಚಿಸಿದೆ. ಇದು ಸಾವಳಗಿ ಮಠದ ಸ್ವಾಮೀಗಳ ಆಶೀರ್ವಾದದಿಂದ ಸ್ಥಾಪನೆಗೊಂಡಿದೆ.

೩೧-೧೨-೧೯೮೫ ರಿಂದ ಹಿಡಿದು ೨೫-೧೨-೧೯೯೨ ರ ವರೆಗೆ ಜಗದ್ಗುರು ಶ್ರೀ ಸಿದ್ಧಲಿಂಗೇಶ್ವರ ಸಂಸ್ಥೆಯಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದು. ನಂತರ ೨೬-೧೨-೧೯೯೨ ರಿಂದ ೧೪-೧೧-೧೯೯೯ ರ ವರೆಗೆ ಜಗದ್ಗುರು ಶ್ರೀ ಸಿದ್ಧಲಿಂಗೇಶ್ವರ ಸಂಸ್ಥೆಯ ಮಹಾವಿದ್ಯಾಲಯದಲ್ಲಿ ಕನ್ನಡ ಪ್ರವಾಚಕರಾಗಿ ಸೇವೆ ಸಲ್ಲಿಸಿ ತದನಂತರ ೧೫-೧೧-೧೯೯೯ ರಿಂದ ಈ ವರೆಗೆ ಕನ್ನಡ ಸಹ ಪ್ರಾಧ್ಯಾಪಕರಾಗಿ ಡಾ.ಸಿ.ಕೆ.ನಾವಲಗಿ ಅವರು ಸೇವೆ ಸಲ್ಲಿಸುತ್ತಿದ್ದಾರೆ.

---

೧ ಅಪರಂಜಿ - ಮಹಾಲಿಂಗ ಮಂಗಿ ಪ್ರಕಾಶನ ಹನುಮಂತ ನಗರ ಬೆಂಗಳೂರು ಪುಟ ಸಂಖ್ಯೆ ೧ ೧೬

ಡಾ.ಸಿ.ಕೆ.ನಾವಲಗಿ ಅವರು ತಮ್ಮ ವಾಕ್‌ಚಾತುರ್ಯ ದಿಂದ ಸ್ಪಷ್ಟವಾಗಿ ನಿರರ್ಗಳವಾಗಿ ಮಾತನಾಡುವ ಶೈಲಿಯಿಂದ ಹಲವಾರು ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಶಿಕ್ಷಕರಾಗಿದ್ದಾರೆ. ಡಾ.ಸಿ.ಕೆ.ನಾವಲಗಿ ಅವರು ಮಾರ್ಗದರ್ಶನ ಪಡೆದ ಕೆಲವು ವಿಧ್ಯಾರ್ಥಿಗಳು ಉನ್ನತ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಬೂಧಿಗೋಪ್ಪ ಸಿ.ಪಿ.ಐ ,ಅರಳಿಮಟ್ಟಿ ವಿಜ್ಞಾನಿ,ರಾಜು ಕಂಬಾರ ಸಾಹಿತಿ ಮಹಾನಂದಾ ಪಾಟೀಲ ಉಪನ್ಯಾಸಕರು ಬಿ.ಎಮ್.ಹಾದಿಮನಿ ಹಾಗೂ ಡಿ.ಡಿ.ಹಾದಿಮನಿ ಪ್ರೊಫೆಸರ್ ಹುದ್ದೆಯಲ್ಲಿದ್ದಾರೆ. ಇದರಿಂದ ಗೋಕಾಕ ಜೆ.ಎಸ್.ಎಸ್ ಕಾಲೇಜು ಹಾಗೂ ಡಾ. ಸಿ.ಕೆ. ನಾವಲಗಿ ಅವರ ಮಹತ್ವ ತಿಳಿದು ಬರುತ್ತದೆ. 'ಡಾ. ಸಿ.ಕೆ. ನಾವಲಗಿ ಅವರ ಭಾಷಣ ಚಂದ ಬರವಣಿಗೆ ಇನ್ನೂ ಚಂದ ಅವರಿಗೆ ಭಾಷೆ ಒಲಿದಿದೆ ಬರವಣಿಗೆ ಸಿದ್ಧಿಸಿದೆ೧' ಮಹಾಲಿಂಗ ಮಂಗಿಯವರು ಹೇಳಿದ್ದಾರೆ. ಇದು ಅವರ ವೃತ್ತಿ ಜೀವನದ ಮಹತ್ವವನ್ನು ತಿಳಿಸಿ ಕೊಡುತ್ತದೆ ಅದೇ ರೀತಿ ಅವರೊಬ್ಬ ಉತ್ತಮ ಶಿಕ್ಷಕರೆಂಬುದು ಮನವರಿಕೆಯಾಗುತ್ತದೆ. ಅವರು ಜಾನಪದ ವಿದ್ವಾಂಸರಾದರೂ ಕನ್ನಡ ಅಧ್ಯಪಾಕರಾಗಿ ಸೇವೆ ಸಲ್ಲಿಸುತ್ತಿರುವದು ಕನ್ನಡದ ಬಗ್ಗೆ ಅಭಿಮಾನ ಹೆಚ್ಚುವಂತಹದು. ನಿರಂತರ ನಾಡು ನುಡಿಗಳ ಚಿಂತನೆಯಲ್ಲಿ ತಮ್ಮನ್ನು ತಾವು ಸಮರ್ಥಿಸಿಕೊಂಡು ಸಾಹಿತ್ಯ ಪ್ರಕಾರದ ತ್ರಿಪದಿ, ಸಂಗ್ರಹ,ಭಜನೆ, ಮದುವೆ ಹಾಡುಗಳು, ಕಥನ ಕವನದ ವಿಮರ್ಶೆ, ಸಂಶೋಧನೆ, ಸಂಪಾದನೆಯಲ್ಲಿ ಶ್ರಮಿಸುತ್ತಿರುವ ಡಾ.ಸಿ.ಕೆ.ನಾವಲಗಿ ಅವರು ನಿರಂತರ ಅಧ್ಯಯನ ಅಧ್ಯಾಪನ ಬರಹಗಳಲ್ಲಿ ಮಗ್ನರಾಗಿ ನಾಡಿಗೆ ಈಗಲಾದರೂ ಸೇವೆ ಸಲ್ಲಿಸುತ್ತಿರುವದು ಅಪೂರ್ವ ಹಾಗೂ ಬೆಲೆಯುಳ್ಳದಾಗಿದೆ.

ಸಾಧನೆ: ಡಾ.ಸಿ.ಕೆ.ನಾವಲಗಿ ಅವರ ಬೃಹತ ಸಾಧನೆಗೆ ಅಪಾರವಾದ ಶ್ರಮವೇ ಕಾರಣವಾಗಿದೆ. ಶ್ರಮಕ್ಕೆ ತಕ್ಕ ಪ್ರತಿಫಲ ಎಂಬಂತೆ ಅಪಾರ ಸಾಧನೆಗೈಯಲು ಪ್ರೇರಣೆ ನೀಡಿದಂತೆಯಿದೆ. ಅವರ ಸಾಧನೆಗೆ ಶ್ರಮ ಹಿಡಿದ ಕೈಗನ್ನಡಿಯಂತೆ ಇದೆ. ಏಕೆಂದರೆ ಮೊದಲಿನಿಂದಲೂ ಅವರು ಶ್ರಮವಹಿಸಿದ ಪರಿಪಾಠ ನೋಡಬಹುದು. ಡಾ.ಸಿ.ಕೆ.ನಾವಲಗಿ ಅವರು ಎಸ್.ಎಸ್.ಎಲ್.ಸಿ ಓದುತ್ತಿರುವಾಗ ಅವರು ಇಡೀ ರಾತ್ರಿ ಕುಳಿತು ಓದುತ್ತಿದ್ದರು ಹೀಗಾಗಿ ಎಂಬತ್ತಕ್ಕೆ ಎಪ್ಪತ್ತೊಂಬತ್ತರಷ್ಟು ಅಂಕಗಳನ್ನು ತೆಗೆದುಕೊಂಡು ತೇರ್ಗಡೆ ಹೊಂದಿದ್ದಾರೆ. ಹೀಗೆ ಅವರಿಗೆ ಚಿಕ್ಕಂದಿನಿಂದಲೂ ಶಿಕ್ಷಣದಲ್ಲಿ ಬಹಳ ಆಸಕ್ತಿ ಇತ್ತು. ಯಾವಾಗಲೂ ಇವರು ಶಾಲೆಯಲ್ಲಿ ಮೊದಲಿನ ಸಾಲಿನಲ್ಲಿಯೇ ಕುಳಿತು ಕೇಳುತ್ತಿದ್ದರು.

ಅದೇ ರೀತಿ ಪ್ರಥಮ ದರ್ಜೆಯಲ್ಲಿಯೇ ಪಾಸಾಗುತ್ತಿದ್ದರು. ಮೊದಲಿನಿಂದಲೂ ಒಳ್ಳೆಯ, ಉತ್ತಮ ಭೋದಕರು ಸಿಕ್ಕಿದ್ದರು. ಅದೂ ಕೂಡ ಅವರ ಸಾಧನೆಗೆ ಪ್ರೇರಣೆ ಒದಗಿಸಿದಂತಿದೆ. ಅವರಿಗೆ ಈಗಲೂ ಸ್ಪರ್ಧಾ ಮನೋಭಾವ ಇದೆ. ಡಾ.ಸಿ.ಕೆ.ನಾವಲಗಿ ಅವರು ಹೆಚ್ಚು ಓದಿ ಸಾಧನೆ ಮಾಡಬೇಕೆಂಬ ಹಂಬಲ ಛಲ ಇನ್ನೂ ಇದೆ ಎಂದರು. ಇದು ಇವರ ಸಾಧನೆಯನ್ನು ಎತ್ತಿ ತೋರಿಸುತ್ತದೆ.

---

೧. ಜನಪದ ಕಥನಗೀತ ಸಂಚಯ ಸಂ.ಚನ್ನಬಸವ ನಾವಲಗಿ, ಶಕುಂತಲಾ ನಾವಲಗಿ ಪ್ರ.ಕನಕ ಸಾಹಿತ್ಯ ಪ್ರತಿಷ್ಠಾನ [ರಿ] ಬೆಂಗಳೂರು ಪ್ರಕಟನೆ೨೦೦೨ ಪುಟ ೪೭

ಹಾಗೆಯೇ ನನ್ನ ಪತ್ನಿಯೂ ನನಗಿಂತಲೂ ಬುದ್ಧಿವಂತಲೂ ಏಕೆಂದರೆ ಕನ್ನಡದಲ್ಲಿ ಚೆನ್ನಾಗಿ ಓದಿದವಳು ಸ್ವಂತ ಬರವಣಿಗೆ ಕಡಿಮೆಯಾದರೂ ಸಾಹಿತ್ಯದಲ್ಲಿ ಹೆಚ್ಚಿನ ಆಸಕ್ತಿ ಹೊಂದಿದವಳು ಎನ್ನುತ್ತಾರೆ.

ಶಕುಂತಲಾ ಅವರು ಹಳ್ಳಿ ಹಳ್ಳಿಗೆ ತಿರುಗಿ ಅಪಾರ ಶ್ರಮವಹಿಸಿ ಪತಿಗೆ ಸಹಕಾರ ನೀಡಿರುವಂತಹವರು. ಗ್ರಾಮೀಣ ಪ್ರದೇಶಕ್ಕೆ ಹೋಗಲು ಅನುಮಾನ ವ್ಯಕ್ತ ಪಡಿಸಿದಾಗ ಅವರ ಪತ್ನಿ ಸ್ವತ: ಇವರನ್ನು ಕರೆದುಕೊಂಡು ಹೋಗಿ ಸಹಾಯ ಸಹಕಾರ ನೀಡಿದ್ದು ವಿಶೇಷ. ಅದೇ ರೀತಿ ಮಗ ಭರತ ಚಿಕ್ಕವನಿದ್ದರೂ ಅವನಿಂದ ಅವರ ಸಾಧನೆಗೆ ಯಾವದೇ ಅವಘಢ ಉಂಟಾಗಲಿಲ್ಲ ಎನ್ನುತ್ತಾರೆ. ಇಂತಹ ಅಪಾರ ಸಾಧನೆಗೈದ ಅವರು ನೇರನೇಮಕಾತಿ ಹೊಂದಿದವರು. ಏಕೆಂದರೆ ಅವರು ಚಿನ್ನದ ಪದಕ ಸಹಿತ ಪಡೆದುಕೊಂಡ ಪ್ರತಿಭಾವಂತ ವಿಧ್ಯಾರ್ಥಿಯಾಗಿದ್ದರು. ಯಾವುದೇ ದೇಣಿ ಗೆಯಿಲ್ಲದೆಯೇ ನೇಮಕಗೊಂಡವರು. ಹಾಗೆಯೇ ಗೋಕಾಕದ ಸುತ್ತಮುತ್ತಲಿನ ವಾತಾವರಣ ಚೆನ್ನಾಗಿತ್ತು. ಡಾ. ಚಂದ್ರಶೇಖರ ಕಂಬಾರರಂತಹ ಗಟ್ಟಿತನದ ವ್ಯಕ್ತಿಯಾರೂ ಇರಲಿಲ್ಲ. ಅವರ ನಂತರ ಚರಿತ್ರೆ, ಪ್ರಭಂದ, ಸಾಹಿತ್ಯ, ಜಾನಪದ ಕ್ಷೇತ್ರದಲ್ಲಿ ಗಟ್ಟಿಯಾಗಿ ಬೆಳೆದವರು ಡಾ.ಸಿ.ಕೆ.ನಾವಲಗಿ ಅವರು.

ಡಾ. ಚಂದ್ರಶೇಖರ ಕಂಬಾರರ ನಂತರ ಇವರೇ ಸಾಹಿತ್ಯದೊಳಗೆ ಶಿಷ್ಠ ಮತ್ತು ಜಾನಪದದಲ್ಲಿ ಸಾಧನೆಗೈದ ಡಾ.ಸಿ.ಕೆ.ನಾವಲಗಿ ಅವರಿಗೆ "ತಜ್ಞ ಪ್ರಶಸ್ತಿ" ೨೦೦೮ ರಲ್ಲಿ ದೊರಕಿದ್ದು. ಅವರು ಜಾನಪದ ಕ್ಷೇತ್ರಕ್ಕೆ ಸಲ್ಲಿಸಿದ ಅಪಾರ ಕೊಡುಗೆಯನ್ನು ತಿಳಿಸಿಕೊಡುತ್ತದೆ.

ಸೋಮಲಿಂಗ ಕವಿ ಒಬ್ಬ ಅಜ್ಞಾತ ಕವಿ "ಲಾವಣಿ ಕವಿ" ಎಂದೇ ಪ್ರಸಿದ್ಧ ಪಡೆಯುವಂತಾಗಿ ಮಾಡಿದವರು ಹಾಗೂ 'ಎಲೆಮರೆಯ ಕಾಯಿಯಂತೆ' ಯಾರಿಗೂ ಗೊತ್ತಿರದೆ ಇದ್ದ ಸೋಮಲಿಂಗ ಕವಿಯ ಲಾವಣಿಗಳನ್ನು ಸಂಗ್ರಹಿಸಿ ಅವರನ್ನು ರಾಜ್ಯಮಟ್ಟಕ್ಕೆ ಪರಿಚಯಿಸಿದ ಕೀರ್ತಿ ಡಾ.ಸಿ.ಕೆ.ನಾವಲಗಿ ಅವರಿಗೆ ಸಲ್ಲುತ್ತದೆ.ಹೀಗೆ ಅವರ ಲಾವಣಿಗಳನ್ನು ಸಂಗ್ರಹಿಸದೆ ಇದ್ದಿದ್ದರೆ ಇಡೀ ಒಬ್ಬ ಜನಪದ ಕವಿಯನ್ನು ಕಳೆದುಕೊಂಡಂತೆ ಆಗುತ್ತಿತ್ತು ಇದರಿಂದ ಜಾನಪದ ಸಾಹಿತ್ಯ ಬಡವ ಆಗುತ್ತಿತ್ತು. ಸೋಮಲಿಂಗ ಕವಿ ನಿಂತ ಕಾಲಿನಲ್ಲಿಯೇ ಹತ್ತಾರು ಹಾಡುಗಳನ್ನು ಹಾಡಬಲ್ಲವರಾಗಿದ್ದರು. ಇವರಿಗೆ ೨೦೦೨ ರಲ್ಲಿ "ಜಾನಪದ ಪ್ರಶಸ್ತಿ" ಸಿಕ್ಕಿತು. ಡಾ. ಸಿ.ಕೆ. ನಾವಲಗಿ ಅವರು ಜಾನಪದ ಪರಿಸತ್ತಿನ ಅಧ್ಯಕ್ಷರನ್ನು ಕರೆಯಿಸಿ ಮುಂದೆ ನಿಂತು ದೊಡ್ಡ ಸಮಾರಂಭ ಮಾಡಿದರು.

ಅವರು ಬೆಳೆದುದಲ್ಲದೆ ಇನ್ನೂಬ್ಬರನ್ನು ಬೆಳೆಸುವದಂತಹ ಮಹಾನ್ ಕಾರ್ಯವು ಮಾಡಿ ತೋರಿಸಿದ್ದಾರೆ. ಇದು ಅವರ ವಿಶಾಲ ಮನೋಭಾವನೆಯನ್ನು ಎತ್ತಿ ತೋರಿಸುತ್ತದೆ.

ಪ್ರಾಥಮಿಕ ಶಿಕ್ಷಣದಿಂದ ಸ್ನಾತ್ತಕೋತ್ತರ ಪದವಿಯವರೆಗೆ ಉತ್ತಮ ಶಿಕ್ಷಕರನ್ನು ಹೊಂದಿದ್ದ ಅವರಿಗೆ ಉತ್ತಮ ಸಾಧನೆ ಮಾಡಲು ಪ್ರೇರಣೆ ಒದಗಿಸಿದಂತಾಗಿದೆ. ಅದರಲ್ಲಿ ಅವರ ಗುರುಗಳಾದ ಪಿ.ಬಿ. ಹಿರೇಮಠ, ಜಮಾದಾರ, ಎಮ್.ಜಿ.ತೆಂಗಿನಕಾಯಿ ಇವರಿಂದ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣಗಳಲ್ಲಿ ತುಂಬಾ ಸಹಾಯಕಾರಿಯಾಗಿದೆ ಎನ್ನುತ್ತಾರೆ. ಧಾರವಾಡ ವಿಶ್ವವಿದ್ಯಾಲಯದಲ್ಲಿ ಎಮ್.ಎಮ್.ಕಲಬುರ್ಗಿ ಅಂತಹ ದಿಗ್ಗಜ ಗುರುಗಳ ಅನುಭವ ಪಡೆದುಕೊಂಡರು. ಡಾ. ಸಿ.ಕೆ. ನಾವಲಗಿ ಅವರಿಗೆ ಶಿಕ್ಷಣವೆಂದರೆ ಬರೀ ಜ್ಞಾನಗಳಿಸುವುದೊಂದೇ

ಅಲ್ಲ. 'ವ್ಯಕ್ತಿತ್ವ ವಿಕಾಸದ ಅರಳುವಿಕೆ' ಎಂದು ಅರಿತುವರು. ಇಂತಹ ಚಿಂತನ ಶೀಲ ಮನಸ್ಸಿನವರ ಸಾಧನಗೆ ಚಿಲುಮೆಗಳಾಗಿವೆ. ಅವರಿಗೆ ಕೇವಲ ಕಲಿಯುವದೇ ಅಷ್ಟೇ ಅಲ್ಲ, ಕಲಿಸುವದು ಅಷ್ಟೇ ಪ್ರಾಮುಖ್ಯವಾಗಿದೆ. ಈಗಲಾದರೂ ಒಂದು ಅವದಿ ಪಾಠ ಮಾಡುವದನ್ನು ಕಳೆದು ಕೊಂಡರೆ ದು:ಖವಾಗುತ್ತದೆ ಎನ್ನುತ್ತಾರೆ.ಇದು ತಮ್ಮ ವೃತ್ತಿಯ ಮೇಲಿನ ಪ್ರಾಮಾಣಿಕತೆ ತಿಳಿಸಿ ಕೊಡುತ್ತದೆ.

ಡಾ. ಸಿ.ಕೆ.ನಾವಲಗಿ ಅವರು ತಾವು ಶಿಕ್ಷಣ ಪಡೆದ ಒಂದನೇ ತರಗತಿಯಿಂದ ಹಿಡಿದು ಇಲ್ಲಿಯವರೆಗೆ ಕಲಿತ ಎಲ್ಲ ಪಠ್ಯಪುಸ್ತಕಗಳು ಹಾಗೂ ಟಿಪ್ಪಣಿಗಳೂ ಸಹಿತ ಇವೆ ಎಂದು ಹೆಮ್ಮೆಯಿಂದ ಹೇಳುತ್ತಾರೆ.

ಇವುಗಳಿಂದ ಅವರ ಆಸೆ ಗುರಿ ಇಟ್ಟುಕೊಂಡಂತೆಯೇ ನೇರವೇರಿಸಲು ಸಾಧ್ಯವಾಯಿತು ಎನ್ನುತ್ತಾರೆ. ಅಷ್ಟೇ ಅಲ್ಲ ಅವರ ತಂದೆ ತಾಯಿಯ ಕನಸು ನನಸಾಗಿದೆ ಎಂದು ಹೇಳುತ್ತಾರೆ. "ಹಿಂದೆ ಗುರುಇರಬೇಕು ಮುಂದೆ ಗುರಿಇರಬೇಕು". ಎಂಬಂತೆ ಅವರ ಕನಸು ನನಸಾಯಿತು. ಅಧ್ಯಾಪಕ ಮತ್ತು ವಕೀಲ ಅಥವಾ ನ್ಯಾಯಧೀಶಯಾಗಬೇಕೆಂದು ಅವರ ತಂದೆ ತಾಯಿಯ ಆಸೆಯುಯಾಗಿತ್ತು. ಅದನ್ನೇ ಮನದಲ್ಲಿಟ್ಟುಕೊಂಡು ಪರಿಶ್ರಮದಿಂದ ಯಾರೂ ಮಾಡದ ಸಾಧನೆಯನ್ನು ಮಾಡಬೇಕೆಂಬ ಛಲದಿಂದ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿ ಯು.ಜಿ.ಸಿ ಯಿಂದ ಶಿಷ್ಯ ವೇತನವನ್ನು ಪಡೆದರು. ಡಾ. ಸಿ.ಕೆ. ನಾವಲಗಿ ಅವರ ಈ ಸಾಧನೆ ಕಂಡು ಗೋಕಾಕ ಶಿಕ್ಷಣ ಸಂಸ್ಥೆಯವರು ತಮ್ಮ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಲು ಕರೆಯಿಸಿಕೊಂಡರು.

ಡಾ.ಸಿ.ಕೆ.ನಾವಲಗಿ ಅವರು ಗೋಕಾಕಿನ ಜಗದ್ಗುರು ಶ್ರೀ ಸಿದ್ದಲಿಂಗೇಶ್ವರ ಸಂಸ್ಥೆಯ ಮಹಾವಿದ್ಯಾಲಯಕ್ಕೆ ಬಂದಾಗ ಅಲ್ಲಿಯ ಆಡಳಿತಾಧಿಕಾರಿಗಳಾದ ಡಾ. ಪಟ್ಟಣಶೆಟ್ಟಿ ಹಾಗೂ ಡಾ. ಕಡಕೋಳ ಅವರು ಉಪನ್ಯಾಸ ನೀಡುವಂತೆ ತಿಳಿಸಿದಾಗ ಯಾವದೇ ಪಠ್ಯ ಪುಸ್ತಕವಿಲ್ಲದೆ ಉಪನ್ಯಾಸ ನೀಡಿದರು. ಅದನ್ನುಕಂಡು ಪ್ರೊ. ಅಕ್ಕಿ ಗುರುಗಳು ಡಾ. ಸಿ.ಕೆ.ನಾವಲಗಿ ಅವರು ನಮ್ಮೆಲ್ಲರನ್ನು ಮೀರಿಸುವಂತಹ ಭೋಧನಾ ಚಾತುರ್ಯ ಹೊಂದಿದ್ದಾರೆಂದು ಹಾಗಾಗಿ ಅವರನ್ನೆ ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿದರು. ಈಗ' ಜಾನಪದ ಟ್ರಸ್ಟ' ಸಂಸ್ಥಾಪಕರಲ್ಲಿ ಅವರೂ ಒಬ್ಬರು.

ಸಂಶೋಧನಾ ಪ್ರಬಂಧಗಳ ಮಂಡನೆಯನ್ನು ವಿಶ್ವವಿದ್ಯಾಲಯ, ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಇಲ್ಲಿಯವರೆಗೂ ಒಂದನೂರಾಐವತ್ತಕ್ಕೂ ಮಿಕ್ಕಿ ಸಂಶೋಧನಾ ಪ್ರಬಂಧಗಳನ್ನು ಹಾಗೂ ಅದೇ ರೀತಿ ಉಪನ್ಯಾಸಕರಾಗಿ ಅಧ್ಯಕ್ಷರಾಗಿ ಪಾಲ್ಗೊಂಡಿದ್ದಾರೆ. ಸಂಶೋಧನಾ ಲೇಖನಗಳ ಪ್ರಕಟಣೆಯನ್ನು ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಶಿಷ್ಟ ಜಾನಪದಕ್ಕೆ ಸಂಬಂಧಪಟ್ಟ ನೂರಾರು ಲೇಖನಗಳ ಪ್ರಕಟಣೆ ಮಾಡಿದ್ದಾರೆ.

ಪುಸ್ತಕ ಪರಿಚಯ, ಮತ್ತು ವಿಮರ್ಶೆ: ಅವರ ಈವರೆಗಿನ ಬಹುತೇಕ ಪುಸ್ತಕಗಳ ಪರಿಚಯ ಹಾಗೂ ವಿಮರ್ಶೆ ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ, ಪುಸ್ತಕ ಮಾಹಿತಿ ಜಾನಪದ ಜಗತ್ತು, ಲಿಂಗಾಯತ ಶರಣ, ಸಂವಾದ ಇತ್ಯಾದಿ ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ರೇಡಿಯೋ ಭಾಷಣಗಳು: ಅವರು ಹತ್ತಾರು ರೇಡಿಯೋ ಭಾಷಣಗಳು, ರೇಡಿಯೋ ಚಿಂತನೆಗಳು, ಪುಸ್ತಕ ಪರಿಚಯಗಳು ಬೇರೆ ಬೇರೆ ಸಂದರ್ಭದಲ್ಲಿ ಬಿತ್ತರಗೊಂಡಿವೆ ಅವರ ಹತ್ತಾರು ಕೃತಿಗಳ

ಪುಸ್ತಕ ಅವಲೋಕನ ಕೂಡ ರೇಡಿಯೋದಲ್ಲಿ ಪ್ರಸಾರಗೊಂಡಿದೆ. ಸಮಾಜ, ಸಾಹಿತ್ಯ ಕುರಿತು ಇವರ ಗುಂಪು ಚರ್ಚೆ ಕೂಡ ಪ್ರಸಾರವಾಗಿದೆ. ರೇಡಿಯೋ ನಾಟಕ ಒಂದರಲ್ಲಿ ಚಿಕ್ಕ ಪಾತ್ರವಹಿಸಿದ್ದಾರೆ.

ಇವರ ವಿಶೇಷ ಆಸಕ್ತಿ: ಅಧ್ಯಯನ, ಅಧ್ಯಾಪನ ಸಂಶೋಧನಾ ವಿಮರ್ಶೆ ಮತ್ತು ಪ್ರಕಟಣ.

ದೂರದರ್ಶನದಲ್ಲಿ ಭಾಷಣ ಮತ್ತು ಸಂದರ್ಶನ: ಉದಯ ಟಿ.ವ್ಹಿಯಲ್ಲಿ ಜಾನಪದ ಕಲಾಮೇಳ ಕುರಿತು, ಈ ಟಿ.ವ್ಹಿಯಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಎಪ್ಪತನೇ ಕನ್ನಡ ಸಾಹಿತ್ಯ ಸಮ್ಮೇಳನ ಕುರಿತು ಇವರ ಭಾಷಣ ಪ್ರಸಾರವಾಗಿದೆ. ದೂರದರ್ಶನದ ಬೆಳಗು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ನಲವತ್ತೈದು ನಿಮಿಷಗಳ ಕಾಲ ಸಂದರ್ಶನ ನೀಡಿದ್ದಾರೆ.

ಇತರ ಕಾರ್ಯಗಳು: ಸಾಂಸ್ಕೃತಿಕ ವೈವಿಧ್ಯಮಯ ಕಾರ್ಯಗಳು, ನಾಡುನುಡಿ, ಸಾಹಿತ್ಯ ಸೇವೆ, ಅಕಾಡೆಮಿಗಳು ವಹಿಸಿಕೊಟ್ಟ ಕಾರ್ಯಗಳು, ವಿಶ್ವವಿದ್ಯಾಲಯ ವಹಿಸಿ ಕೊಟ್ಟ ಕಾರ್ಯಗಳು, ಮಹಾವಿದ್ಯಾಲಯ ವಹಿಸಿಕೊಟ್ಟ ಕಾರ್ಯ, ಸರ್ಕಾರದ ಕಾರ್ಯ ಹಾಗೂ ಸಾಮಾಜಿಕ ಕಾರ್ಯ ಗಳನ್ನು ಕ್ರಿಯಾಶೀಲರಾಗಿ ಪೂರೈಸಿದ್ದಾರೆ. ವಾಗ್ಮಿ ವಿಮರ್ಶಕರಾಗಿ, ಸಂಶೋಧಕರಾಗಿ, ಅಧ್ಯಯನ ಅಧ್ಯಾಪಕರಾಗಿ, ವಿದ್ಯಾರ್ಥಿಗಳ ನೆಚ್ಚಿನ ಗುರುಗಳಾಗಿ, ವಿದ್ವಾಂಸರ,ಸಾಮಾಜಿಕರ ಪ್ರೀತಿಗೆ ಪಾತ್ರರಾಗಿ ದ್ದಾರೆ.

ಡಾ. ಸಿ.ಕೆ. ನಾವಲಗಿ ಅವರು ಈಗಲೂ ಕೂಡ ಹಲವಾರು ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಳ್ಳುತ್ತಾರೆ. ಗೋಕಾಕ ತಾಲೂಕಿನ ಮೂಡಲಗಿ ಗ್ರಾಮದಲ್ಲಿ ನಡೆದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಥಮ ಚಿಂತನ ಗೋಷ್ಠಿಯ ಅಧ್ಯಕ್ಷತೆ ವಹಿಸಿ "ಸಾಹಿತ್ಯದಲ್ಲಿ ರಾಜಕೀಯದ ಹಸ್ತಕ್ಷೇಪ ಸಲ್ಲದು೧" ಎಂದಿದ್ದಾರೆ.

ಡಾ. ಸಿ.ಕೆ.ನಾವಲಗಿ ಅವರ ಈ ಎಲ್ಲ ಸಾಧನೆಗಳನ್ನು ಕೇಳಿ ಒಂದು ಕ್ಷಣ ದಂಗು ಬಡೆದಂತಾಯಿತು. ನನ್ನನ್ನು ನಾನೇ ಮರೆತಂತಾಯಿತು. ಈ ಎಲ್ಲ ಅಪಾರ ಸಾಧನೆ ಶ್ರೇಯಸ್ಸಿಗೆ ಅವರ ಪರಿಶ್ರಮವೇ ಸಾಧನವಾಗಿದೆ.

ರಣರಂಗದಲ್ಲಿ ಕಲೆಯಾಗಿ ಹೋರಾಡಿದವ ದೇಶ ರಕ್ಷಕನಾದರೇ ಇಡೀ ಮಾನವಕುಲದ ಉದ್ಧಾರದ ಶಿಲ್ಪಿಯಾಗಿ, ಚಿಗುರಿನಲ್ಲಿ ಹೊಸತನವ ಅರಳಿಸಿ, ಕೇರಳಿಸುವ ಶಿಕ್ಷಕರಾಗಿ, ಮಣ್ಣಿನವಾಸನೆ ಮೈಗೂಡಿಸಿಕೊಂಡು ತನ್ನ ಸುತ್ತಮುತ್ತಲ್ಲಿನವರ ಒಳ ಹೊರಗುಗಳನ್ನು ಹುಡುಕುವ ಛಲವಾದಿ ಸಂಶೋಧಕರಾಗುತ್ತಾರೆ.

ಇಂತಹ ಕಸುವನ್ನು ಜಾನಪದ ಸಂಪಾದನಾ ಸೊಗಡಿಯೊಂದಿಗೆ ಮೈಗೂಡಿಸಿಕೊಂಡವನ ಕಾರ್ಯ ಬಂಗಾರಕ್ಕೆ ಕುಂದನವಿಟ್ಟಂತಾಗುತ್ತದೆ. ಇಂತಹ ನೆಲೆ ಬೆಲೆಗಳನ್ನು ಅರಗಿಸಿ, ಕರಗಿಸಿ ತನ್ನೆಡೆಗೆ ತಿರುಗಿಸಿ ಕೊಂಡ ಸಾಹಿತಿ ಜಾನಪದ ತಜ್ಞ ಜಾನಪದ ವಿದ್ವಾಂಸನೆನಿಸಿಕೊಂಡು ಗೋಕಾಕ ನಾಡಿನಲ್ಲಿ ಉತ್ತಮ ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿರುವ ಡಾ. ಸಿ.ಕೆ. ನಾವಲಗಿ ಅವರು ಬಹುಮುಖ್ಯ ವ್ಯಕ್ತಿ.

೧. ಪ್ರಜಾವಾಣಿ ದಿನಪತ್ರಿಕೆ ಡಾ. ಸಿ.ಕೆ. ನಾವಲಗಿ ಬೆಳಗಾವಿ ಜಿಲ್ಲೆ ದಿನಾಂಕ ೧೨.೦೬.೨೦೧೩ ಪುಟ ಸಂಖ್ಯೆ ೩೭

ಇಂತಹ ಬಹುಮುಖ ಪ್ರತಿಭೆಯನ್ನು ಬೆಳೆಸಿಕೊಂಡ ಡಾ. ಸಿ.ಕೆ. ನಾವಲಗಿ ಅವರು ಉತ್ತಮ ಕಲಾವಿದರನ್ನು ಗುರ್ತಿಸಿ ರಾಜ್ಯಮಟ್ಟಕ್ಕೆ ಪರಿಚಯಿಸಿ ಪ್ರಶಸ್ತಿಯನ್ನು ಕೊಡಿಸಿದ್ದು ಮಹತ್ವದ ಕಾರ್ಯಗಳಲ್ಲಿ ಒಂದಾಗಿದೆ. ಹೀಗೆ ಸಾಹಿತ್ಯ ಕ್ಷೇತ್ರದಲ್ಲಿ ಒಬ್ಬ ಸಂಗ್ರಹಕಾರನಾಗಿ, ಸಂಪಾದಕರಾಗಿ, ಸಂಶೋಧಕರಾಗಿ, ವಿಮರ್ಶಕರಾಗಿ ಎಲ್ಲಕ್ಕೂ ಮಿಗಿಲಾಗಿ ಶ್ರೇಷ್ಠ ಜಾನಪದ ತಜ್ಞ, ವಿದ್ವಾಂಸರಾಗಿ ಅದಕ್ಕೂ ಮಿಗಿಲಾಗಿ ಉತ್ತಮ ಅದ್ಯಾಪಕರಾಗಿ ಹತ್ತು ಹಲವಾರು ಕ್ಷೇತ್ರದಲ್ಲಿ ನೊಗಹೊತ್ತವರು. ಇಂತಹ ಸಾಹಿತಿಯನ್ನು ಪಡೆದ ಜಾನಪದ ಕ್ಷೇತ್ರ ತನ್ನ ಶ್ರೀಮಂತಕೆಯನ್ನು ಹೆಚ್ಚಿಸಿಕೊಂಡಿದೆ.

<u>**ಪ್ರಶಸ್ತಿ ಪುರಸ್ಕಾರಗಳು:**</u> ಡಾ.ಸಿ.ಕೆ.ನಾವಲಗಿ ಅವರ ಈ ಪ್ರಶಸ್ತಿ ಪುರಸ್ಕಾರಗಳ ಪಟ್ಟಿ ನೋಡುವುದರ ಮೂಲಕ ತಿಳಿದುಬರುವುದೇನೆಂದರೆ ಅವರು ಸಮಾಜ ಸಂಘ ಸಂಸ್ಥೆಗಳ ಬಗ್ಗೆ ಅಪಾರವಾದ ಕಾಳಜಿ ಹೊಂದಿದ್ದನ್ನು ಗಮನಿಸಿದಾಗ ಡಾ. ಸಿ.ಕೆ. ನಾವಲಗಿ ಅವರು ಪ್ರಶಸ್ತಿಯ ಬೆನ್ನತ್ತಿ ಹೋಗಿಲ್ಲ. ಅವರನ್ನೇ ಹುಡುಕಿಕೊಂಡು ಪ್ರಶಸ್ತಿಗಳು ಬಂದಿವೆ ಎಂಬುದು ತಿಳಿದು ಬರುತ್ತದೆ

- **೨೦೦೪ ರಲ್ಲಿ ಜನಪದ ಸಮಾಲೋಕ** - ಕೃತಿಗೆ 'ಅಕ್ಕಮ್ಮ ಗಿರಿಗೌಡ ರುದ್ರಪ್ಪ ದತ್ತ ಪ್ರಶಸ್ತಿ' ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಇವರಿಂದ ಪಡೆದು ಕೊಂಡಿದ್ದಾರೆ.
- **೨೦೦೪** ರಲ್ಲಿ '**ಸಿರಿಗನ್ನಡ ಗೌರವ ಪ್ರಶಸ್ತಿ**' ಜಿಲ್ಲಾ ಸಾಹಿತ್ಯ ಪ್ರತಿಷ್ಠಾನ ಬೆಳಗಾವಿ ಇವರಿಂದ ಪಡೆದು ಕೊಂಡರು.
- **೨೦೦೫ ರಲ್ಲಿ 'ಸಾಹಿತ್ಯ ಭೂಷಣ'** ಕನ್ನಡ ಜ್ಯೋತಿ ಗಾನಕಲಾ ಸಂಗ್ರಹ ಗೋಕಾಕ ಇವರಿಂದ ಸ್ವೀಕರಿಸಿದರು.
- **೨೦೦೮ ರಲ್ಲಿ** 'ಡಾ. ವ್ಹಿ.ಎಸ್.ಗದ್ದಗಿಮಠ ಗೌರವ ಪ್ರಶಸ್ತಿ' [ಜಾನಪದ ತಜ್ಞ] ಕರ್ನಾಟಕ ಜಾನಪದ ಅಕಾಡೆಮಿ ಕೂಡಲಸಂಗಮ ಕ್ಷೇತ್ರದಲ್ಲಿ ೨೦೯ ರಂದು ರಾಜ್ಯದ ಮುಖ್ಯಮಂತ್ರಿಯವರು ಬಿ.ಎಸ್.ಯಡಿಯೂರಪ್ಪ ಪ್ರಧಾನ ಮಾಡಿದರು.
- **೨೦೧೦ ರಲ್ಲಿ** 'ಅತ್ತಿಮಬ್ಬೆ ಸಾಹಿತ್ಯ ಪ್ರಶಸ್ತಿ'ಯನ್ನು ಅತ್ತಿಮಬ್ಬೆ ಸಾಹಿತ್ಯ ಪ್ರತಿಷ್ಠಾನ ಬೆಂಗಳೂರು ಇವರಿಂದ 'ಬಸವ ಬೆಳಗು' ಎಂಬ ವಿಮರ್ಶೆ ಕೃತಿಗೆ ಪ್ರಶಸ್ತಿ ನೀಡಲಾಯಿತು.
- **೨೦೧೧ ರಲ್ಲಿ** ಜಾನಪದವನ್ನು ಪ್ರೀತಿಸುವವರನ್ನು ರಂಗ ಪ್ರೀತಿಸುತ್ತವೆ ಎಂಬಂತೆ 'ರಂಗ ಸಂಸ್ಥಾನ ಪ್ರಶಸ್ತಿ ಪುರಸ್ಕಾರ' ವನ್ನು ರಂಗ ಸಂಸ್ಥಾನ [ರಿ] ಬೆಂಗಳೂರು ಜಾನಪದ ಋತುಗಾಣ ಸಂಗೀತ ಉತ್ಸವದ ಸಮಾರೋಪ ಹಬ್ಬದಂದು ಗೌರವಿಸಿ ನೀಡಿದ ಜಯರೇಖೆಯಾಗಿದೆ.
- **೨೦೧೨ ರಲ್ಲಿ** 'ಜನಪದ ಸಡಗರ' ಕೃತಿಗೆ 'ಅಕ್ಕಮ ಗಿರಿಗೌಡ ರುದ್ರಪ್ಪ ದತ್ತಿ ಪ್ರಶಸಿ' ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ನೀಡಿತ್ತು.

<u>**ಸದಸ್ಯತ್ವ ಮತ್ತು ಗೌರವ:**</u> ಡಾ.ಸಿ.ಕೆ.ನಾವಲಗಿ ಅವರು ಮಾಡಿದಂತಹ ಹಲವಾರು ಕಾರ್ಯಗಳನ್ನು ಪರಿಗಣಿಸಿ ನೋಡಿದಾಗ ಅವರು ಕೆಲವು ಸದ ಸದಸ್ಯತ್ವ ಮತ್ತು ಗೌರವ ಸ್ಥಾನಮಾನಗಳೊಂದಿಗೆ ಹೊರಹೊಮ್ಮಿದ್ದಾರೆ. ಈ ಎಲ್ಲ ಸದಸ್ಯತ್ವ ಮತ್ತು ಗೌರವಗಳು ಅವರ ಶ್ರಮ ಕಾಳಜಿಯನ್ನು ಎತ್ತಿತೋರಿಸುತ್ತದೆ.

- ಸದಸ್ಯರು - ಕನ್ನಡ ಜಾಗೃತಿ ಸಮಿತಿ (ಗೋಕಾಕ ತಾಲ್ಲೂಕು)ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು
- ದಕ್ಷಿಣ ಭಾರತೀಯ ಭಾಷೆಗಳ ಜಾನಪದ ಸಂಸ್ಥೆ, ತಿರುವನಂತಪುರಂನ (ಕರ್ನಾಟಕದಿಂದ ಕಾರ್ಯಕಾರಿ) ಸಮಿತಿಯ ಸದಸ್ಯರಾಗಿ ೨೦೦೭ ರಲ್ಲಿ ಹೊರಹೊಮ್ಮಿದ್ದಾರೆ.
- ಕರ್ನಾಟಕ ಸರಕಾರ ಸ್ಥಾಪಿಸಿದ ಬೇಟಗೇರಿ ಕೃಷ್ಣಶರ್ಮ ಟ್ರಸ್ಟ್‌ನ ಸಂಸ್ಥಾಪಕ ಸದಸ್ಯರಾಗಿದ್ದರು.
- ಕರ್ನಾಟಕ ಜಾನಪದ ಪರಷತ್ತು ಬೆಳಗಾವಿ ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದರು.
- ಗೋಕಾಕದ ಶ್ರೀ ಸರ್ವೇಶ್ವರ ಜಾನಪದ ಕಲೋದ್ದಾರಕ ಸಂಘದ ಅಧ್ಯಕ್ಷರಾಗಿದ್ದರು.
- ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಜೀವ ಸದಸ್ಯರಾಗಿದ್ದಾರೆ.
- ಜಾನಪದ ಜಗತ್ತು ಪತ್ರಿಕೆಯ ಅಜೀವ ಸದಸ್ಯರಾಗಿದ್ದಾರೆ.
- ಬೆಳಗಾವಿ ಲಿಂಗಾಯತ ಮಾಸಿಕದ ಸಂಪಾದಕ ಮಂಡಳಿಯ ಸದಸ್ಯರಾಗಿದ್ದರು.
- ಕನ್ನಡ ಜಾನಪದ ನಿಘಂಟುವಿನ ಸಂಪಾದಕ ಸಮಿತಿಯ ಸದಸ್ಯರಾಗಿದ್ದರು.
- ಕರ್ನಾಟಕ ವಿಶ್ವವಿದ್ಯಾಲಯ ಕಾಲೇಜು ಶಿಕ್ಷಕರ ಸಂಘದ ಅಜೀವ ಸದಸ್ಯರಾಗಿದ್ದಾರೆ.
- ಕರ್ನಾಟಕ ವಿಶ್ವವಿದ್ಯಾಲಯ ಕಾಲೇಜು ಕನ್ನಡ ಅಧ್ಯಾಪಕರ ಒಕ್ಕೂಟದ ಸದಸ್ಯರಾಗಿದ್ದರು.
- ಗೋಕಾಕ ಸಾಹಿತ್ಯ ಚಿಂತನ ಕಮ್ಮಟದ ಸದಸ್ಯ ಮತ್ತು ಸಲಹೆಗಾರರಾಗಿದ್ದರು.
- ಭೂಮಿ ಬಳಗ [ಸಾಂಸ್ಕೃತಿಕ ಅಭಿವೃದ್ಧಿ ಪ್ರತಿಷ್ಠಾನದ] ಬೆಳಗಾವಿ ಜಿಲ್ಲಾ ಸಂಚಾಲಕ ರಾಜ್ಯ ಮಟ್ಟದ ಸಂಘಟನೆ ವಚನ ಸಾಹಿತ್ಯ ಚಿಂತನ ಮಂಥನ ವೇದಿಕೆ ಗೋಕಾಕದ ಅಧ್ಯಕ್ಷರಾಗಿದ್ದರು.
- ಧಾರವಾಡದ ಆಕಾಶವಾಣಿ, ಜನಪದ ಸಂಗೀತ ಕಲಾವಿದರ ಧ್ವನಿ ಪರೀಕ್ಷೆ ಸಮಿತಿಯ ೨೦೧೦ ರಿಂದ ಮುಂದಿನ ಮೂರು ವರ್ಷಗಳ ಅವಧಿಯ ವರೆಗೆ ಸದಸ್ಯರಾಗಿದ್ದಾರೆ.

<u>ಸನ್ಮಾನ ಸತ್ಕಾರ ಹಾಗೂ ಸ್ಥಾನ ಮಾನಗಳ ಗೌರವ</u> : ನಾಡಿನ ಹಲವಾರು ಸಂಘ ಸಂಸ್ಥೆಗಳು, ಸರಕಾರ ಇವರ ಸಾಹಿತ್ಯ ಸಾಧನೆಗೆ ಯೋಗ್ಯ ಸನ್ಮಾನ ಸತ್ಕಾರ ನೀಡಿವೆ.

ಕವಿ ಗೋಷ್ಠಿ, ವಿಚಾರ ಗೋಷ್ಠಿ, ಸಂಗೀತ ಗೋಷ್ಠಿ, ಸಂಸ್ಕೃತಿಕ ಕಾರ್ಯಕ್ರಮ, ಜಾನಪದ ಸಮಾರಂಭ, ನಾಡು-ನುಡಿ, ಗಡಿ ಹಬ್ಬ, ವಿಶ್ವ ಕನ್ನಡ ಸಮ್ಮೇಳನ, ಉತ್ಸಾಹ, ಪುಸ್ತಕ ಬಿಡುಗಡೆ ಸಮಾರಂಭ, ಸಾರ್ವಜನಿಕ ಸಭೆ ಸಮಾರಂಭ, ವಿಚಾರ ಸಂಕೀರ್ಣ ಇನ್ನೂ ಹಲವುಗಳಲ್ಲಿ ಅಧ್ಯಕ್ಷ, ಉದ್ಘಾಟಕ ಪುಸ್ತಕ ಬಿಡುಗಡೆ, ಆಶೆಯನುಡಿ ಇವೇ ಮುಂತಾದ ಹತ್ತಾರು ಸ್ಥಾನಮಾನ ತಾಲ್ಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರ, ವಿಶ್ವವಿದ್ಯಾಲಯ ಮಟ್ಟದಲ್ಲಿ ದೊರೆತಿವೆ.

ಕರ್ನಾಟಕ ಜಾನಪದ ಅದ್ಯಯನದ ಮೂರನೆ ತಲೆಮಾರಿನ ಜಾನಪದ ವಿದ್ವಾಂಸರೆಂದು ಈಗಾಗಲೇ ಗುರ್ತಿಸಲಾಗಿದೆ. 'ನನ್ನ ನಂತರ ನನ್ನ ರೀತಿಯಲ್ಲಿ ಆಲೋಚಿಸುವ ಗೋಕಾಕ ಪರಿಸರದ ಏಕೈಕ ವ್ಯಕ್ತಿ ಡಾ.ಸಿ.ಕೆ.ನಾವಲಗಿ ಎಂದು ಡಾ.ಚಂದ್ರಶೇಖರ ಕಂಬಾರ ಇವರ ಬಗೆಗೆ ಆಡಿದ ಮಾತು. ಇವರ ಸಾಹಿತ್ಯ ಶಕ್ತಿಯು ಇವರನ್ನು ಸಾಂಪ್ರದಾಯಿಕ ಜಾನಪದ ತಜ್ಞ ಅಥವಾ ಜಾನಪದ ವಿದ್ವಾಂಸವೆಂದು ಕರೆಯುವದಕ್ಕಿಂತ ಪ್ರಾಯೋಗಿಕ ಜಾನಪದ ಚಿಂತಕ' ರೆಂದು ಕರೆಯುವದು ಸೂಕ್ತವಾದುದೆಂದು ತಜ್ಞರ ಅಭಿಪ್ರಾಯ.

ಡಾ. ಕುವೆಂಪು ಕಥನ ಗೀತೆಗಳ ಜಾನಪದ ಅಧ್ಯಯನ ವಿಷಯದ ಮೇಲೆ ತೆಗೆದುಕೊಂಡ ಪ್ರೊಜೆಕ್ಟಿಗೆ ಯು.ಜಿ.ಸಿ. ಯು ಧನಸಹಾಯ ನೀಡಿದೆ. ಇಂತಹ ಮಹಾಸಾಧಕರಾದ ಡಾ. ಸಿ.ಕೆ. ನಾವಲಗಿ ಅವರ ಬಗ್ಗೆ ಒಂದೇ ಒಂದು ಸಂಪ್ರಬಂಧ ಹೊರಬಂದಿಲ್ಲವೆಂದರೆ ಆಶ್ಚರ್ಯವಾಗಿದೆ. ಹಾಗಾಗಿ ಇವರ ಒಟ್ಟ ಸಾಧನೆಯನ್ನು ಗಮನಿಸಿದಾಗ ಈಗಾಗಲೇ ಇವರ ಬಗ್ಗೆ ಯಾರಾದರೂ ಮಹಾಪ್ರಬಂಧ ಮಂಡಿಸಿದ್ದಿರಬಹುದೆಂದು ಊಹೆ ಮಾಡಿಕೊಂಡಿದ್ದೆ. ಆದರೆ ಆಕಸ್ಮಿಕವಾಗಿ ಅವರ ಮನೆಗೆ ಭೇಟಿ ನೀಡಿದಾಗ ಅವರ ಬಗ್ಗೆ ಯಾವ ಪ್ರಭಂದವೂ ಹೊರಬಂದಿಲ್ಲವೆಂಬುವದು ತಿಳಿದು ಇಂತಹ ಮಹಾತಜ್ಞರ ಬಗ್ಗೆ ಕಿರು ಪ್ರಬಂಧ ಮಂಡಿಸಬೇಕೆಂದು ಆಸೆ ಹುಟ್ಟಿಕೊಂಡಿತು.

ಆ ಆಸೆ ನಿರಾಶೆ ಆಗದೇ ಅವರ ಸಹಕಾರದ ಮೇರೆಗೆ ನನಗೆ ಸಂಪ್ರಬಂಧ ಮಂಡಿಸುವದಕ್ಕಾಗಿ ಅವಕಾಶ ಸಿಕ್ಕಿತು. ಆಗ ನನಗೆ ತುಂಬಾ ಸಂತೋಷವೆನಿಸಿ ಅವರ ಬಗ್ಗೆ ಎಷ್ಟು ತೀಕ್ಷ್ಣವಾಗಿ ಅಧ್ಯಯನ ನಡೆಸಿದರೂ ಅದು ಕಡಿಮೆ ಅನಿಸುತ್ತದೆ. ಏಕೆಂದರೆ ಅಷ್ಟೊಂದು ಅವರು ಎಲ್ಲರಿಗೂ ಅಚ್ಚುಮೆಚ್ಚಿನ ಶಿಕ್ಷಕರೂ ಹೌದು. ಸಮಾಜ ಪ್ರೇಮಿಗಳು ಹೌದು. ಇವರ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೆ ಅನಿಸುತ್ತದೆ. ಏಕೆಂದರೆ ನಾನೊಮ್ಮೆ ಡಾ.ವ್ಹಿ.ಎಸ್.ಮಾಳಿ ಗುರುಗಳನ್ನು ಭೇಟಿಯಾಗಿ ಡಾ.ಸಿ.ಕೆ.ನಾವಲಗಿ ಅವರ ಬಗ್ಗೆ ಎಂ.ಫಿಲ್. ಮಾಡಬೇಕೆಂದು ಅಂದುಕೊಂಡಿದ್ದೇನೆ ಅಂದಾಗ ಅವರು ನನಗಿಂತಲೂ ಉತ್ತಮವಾದ ವ್ಯಕ್ತಿ ಅವರ ಬಗ್ಗೆ ಅದ್ಯಯನ ಮಾಡುವದರಲ್ಲಿ ಎರಡು ಮಾತಿಲ್ಲ. ಒಳ್ಳೆಯ ಕೆಲಸ ಮಾಡಿದ್ದಿರಿ ಅವರ ಬಗ್ಗೆಯೇ ಮಾಡಿಬಿಡಿ ಎಂದು ಸಲಹೆ ನೀಡಿದರು.

ಅದೇ ರೀತಿ ಡಾ.ಸಿ.ಕೆ.ನಾವಲಗಿ ಅವರು ಯಾವಾಗಲೂ ನೇರ-ನಡೆ-ನುಡಿ-ಉಳ್ಳವರು. ನಾನು ನಿಮ್ಮ ಬಗ್ಗೆ ಕಿರುಪ್ರಬಂಧ ಮಾಡಬೇಕೆಂದಿದ್ದೇನೆ ಅಂದಾಗ ನಮ್ಮದೇನು ಅಭ್ಯಂತರವಿಲ್ಲ ಆದರೆ ಒಂದು ಮಾತು 'ಯೋಗ್ಯರ ಬಗ್ಗೆ ಆಯೋಗ್ಯ ಮಾಡಿದರೆ ಸರಿಯೆನಿಸದು. ಯೋಗ್ಯರ ಬಗ್ಗೆ ಯೋಗ್ಯರು ಮಾಡಿದರೆ ಅದಕ್ಕೆ ಮಹತ್ವ ಬರುವದು' ಎಂದಾಗ ಡಾ.ಸಿ.ಕೆ.ನಾವಲಗಿ ಅವರ ಮಾತು ನನಗೆ ನಿಜಕ್ಕೂ ಹೃದಯಕ್ಕೆ ಬಾಣ ಬಿಟ್ಟಂತಾಯಿತು. ಈಗಲಾದರೂ ಅವರ ಬಗ್ಗೆ ಅಧ್ಯಯನ ನಡೆಸುವಾಗ ಕ್ಷಣಕ್ಷಣಕ್ಕೂ ಅವರ ಮಾತು ಎದೆಗೆ ತಟ್ಟಿ ನನ್ನನ್ನು ಎಚ್ಚರಗೊಳ್ಳಿಸತ್ತದೆ. ಹೀಗೆ ಹೇಳುವದರ ತಾತ್ಪರ್ಯ ಇಷ್ಟೇ 'ಜಾಣನಿಗೆ ಮಾತಿನ ಪೆಟ್ಟು ಕೋ[ನನಿಗೆ ಲತ್ತಿ ಪೆಟ್ಟು' ಅಂದ ಹಾಗೆ ಅವರ ಮಾತಿನಿಂದ ನನ್ನ ಮನಸ್ಸನ್ನು ತಲ್ಲಣಗೊಳಿಸಿದೆ. 'ಬೈದು ಹೇಳುವವರು ನಮ್ಮ ಒಳ್ಳೆಯದಕ್ಕೆ ಹೇಳುತ್ತಾರೆ. ನಕ್ಕು ಹೇಳುವವರು ಕೆಟ್ಟದಕ್ಕೆ ಹೇಳುತ್ತಾರೆ' ಎಂಬಂತೆ ಅವರು ಹೇಳಿದ್ದು ಒಳ್ಳೆಯದೇ ಆಯಿತು.

ಅಧ್ಯಾಯ ೩

ಡಾ.ಸಿ.ಕೆ.ನಾವಲಗಿ ಅವರ ಜಾನಪದ ಸಂಕಲನಗಳ ಅಧ್ಯಯನ

- ಉತ್ತರ ಕರ್ನಾಟಕದ ಭಜನೆ ಹಾಡುಗಳು
- ಸೋಮಲಿಂಗ ಕವಿಯ ಲಾವಣಿಗಳು
- ಹತ್ತು ಮಂದ್ಯಾಗ ಹಾಡೇನ
- ಜನಪದ ಕಥನಗೀತ ಸಂಚಯ
- ಜನಪದ ತ್ರಿಪದಿಗಳು: ಒಂದು ಅಧ್ಯಯನ

ಸಂಪಾದನೆ

ಪ್ರಾಚೀನ ಹಸ್ತ ಪ್ರತಿಗಳನ್ನು ಅಮೂಲಾಗ್ರವಾಗಿ ಓದಿ ಒಂದು ವ್ಯವಸ್ಥಿತ ರೀತಿಯಲ್ಲಿ ಅವುಗಳಲ್ಲಿಯ ಅಶುದ್ಧ ಪಾಠಗಳನ್ನು ಪರಿಷ್ಕರಿಸಿ ಕೃತಿಕಾರನ ಮೂಲ ಆಶಯವನ್ನು ಗೊತ್ತು ಪಡಿಸುವ ಕಾರ್ಯವೇ ಗ್ರಂಥ ಸಂಪಾದನೆ. ಇದು ಬಹು ಜವಾಬ್ದಾರಿತಯುತವಾದ ಅತ್ಯಂತ ಎಚ್ಚರಿಕೆಯಿಂದ ನಿರ್ವಹಿಸುವ ಕಾರ್ಯ. ಕನ್ನಡ ಗ್ರಂಥ ಸಂಪಾದನೆಗೆ ಮಹತ್ವದ ಕಾಣಿಕೆ ಸಲ್ಲಿಸಿದ ಉತ್ತರ ಕರ್ನಾಟಕ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಜಾನಪದ ವಿದ್ವಾಂಸರಲ್ಲಿ ಡಾ. ಸಿ.ಕೆ.ನಾವಲಗಿ ಅವರ ಹೆಸರು ಮುಂಚೂಣಿಯಲ್ಲಿ ನಿಲ್ಲುವಂತದ್ದು ಎಂದು ಹೇಳುವ ಮಾತಿನಲ್ಲಿ ಅತಿಶಯೋಕ್ತಿ ಎಂಬುದಿಲ್ಲ.

ಇಂತಹ ಸಂಪಾದನಾ ಕಾರ್ಯವನ್ನು ಡಾ.ಸಿ.ಕೆ.ನಾವಲಗಿ ಅವರು ಎಚ್ಚರಿಕೆಯಿಂದ, ಅಷ್ಟೇ ಸೂಕ್ಷ್ಮವಾಗಿ ಅದರ ಶಾಸ್ತ್ರಗಳನ್ನು ಅರಿತು ಅದಕ್ಕೊಂದು ಚೌಕಟ್ಟನ್ನು ನೀಡಿದ್ದು ಅವರ ಪರಿಶ್ರಮ ಎತ್ತಿತೋರಿಸುವಂತಹದು. ಈ ನಿಟ್ಟಿನಲ್ಲಿ ಮೊಟ್ಟ ಮೊದಲು ಕನ್ನಡದಲ್ಲಿ ಗ್ರಂಥ ಸಂಪಾದನೆ ಕಾರ್ಯ ಆರಂಭಿಸಿದವರು ವಿದೇಶಿ ವಿದ್ವಾಂಸರು ೧೮೩೪ರ ಮಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟ "ಭಾಸಲ್ ಮಿಷನ್" ಸಂಸ್ಥೆಯು ಪ್ರಾಚೀನ ಕನ್ನಡ ಗ್ರಂಥಗಳನ್ನು ಸಾಕಷ್ಟು ಪ್ರಕಟಿಸಿತು.

ಹರ್ಮನ್ ಮೋಗ್ಲಿಂಗ್ ಅವರು ಬಿಬ್ಲಿಯಾಥಿಕಾ ಕರ್ನಾಟಕಾ ಮಾಲಿಕೆಯ ಮೂಲಕ ಪ್ರಾಚೀನ ಸಾಹಿತ್ಯದ ಜೈಮಿನಿ ಭಾರತ, ಬಸವ ಪುರಾಣ, ದಶಪರ್ವ, ಚನ್ನಬಸವ ಪುರಾಣ, ಕುಮಾರ ವ್ಯಾಸ ಭಾರತ, ಹರಿಭಕ್ತ ಸಾರ, ದಾಸರ ಕೀರ್ತನೆಗಳು ಮೊದಲಾದ ಮಹತ್ವದ ಗ್ರಂಥಗಳನ್ನು ಪ್ರಕಟಿಸಿದರು. ಎಫ್.ಕಿಟೆಲ್ ಅವರು ಶಬ್ದ ಮಣಿದರ್ಪಣವನ್ನು ಒಂಬತ್ತು ಹಸ್ತ ಪ್ರತಿಗಳಿಂದ ಪರಿಷ್ಕರಿಸಿ ೧೮೭೨ ರಲ್ಲಿ ಪ್ರಕಟಿಸುವ ಮೂಲಕ ಕನ್ನಡ ಗ್ರಂಥ ಸಂಪಾದನೆಗೆ ಒಂದು ಹೊಸ ಆರಂಭಿಸಿದರು. ಇವರ ನಂತರ ಬಿ.ಎಲ್.ರೈಸ್ ಮೊದಲಾದ ವಿದ್ವಾಂಸರು ಈ ಕಾರ್ಯವನ್ನು ಮುಂದುವರೆಸಿದರು.

ಈ ತರುವಾಯ ದೇಶಿ ವಿದ್ವಾಂಸರಲ್ಲಿ ಎನ್.ಆರ್.ಕರಿಬಸವಶಾಸ್ತ್ರಿ, ಎಮ್.ಎ. ರಾಮಾನುಜ ಅಯ್ಯಂಗಾರ, ಎಸ್.ಬಿ.ನರಸಿಂಹಚಾರ್ಯ, ಆರ್.ನರಸಿಂಹಚಾರ್ಯ, ಎ.ಆರ್. ಕೃಷ್ಣಶಾಸ್ತ್ರಿ ಮೊದಲಾದವರು ಅತ್ಯಂತ ಶ್ರದ್ದೆಯಿಂದ ದುಡಿದು ವೈವಿದ್ಯಪೂರ್ಣವಾದ ಪ್ರಾಚೀನ ಕನ್ನಡ ಸಂಪಾದನಾ ಗ್ರಂಥಗಳನ್ನು ಹೊರ ತಂದರು. ಇಂತಹ ಸಂದರ್ಭದಲ್ಲಿ ಸಂಗ್ರಹ ಸಂಪಾದನಾ ಕ್ಷೇತ್ರವನ್ನು ಪ್ರವೇಶಿಸಿದ ಡಾ. ಸಿ.ಕೆ.ನಾವಲಗಿ ಅವರ ಹೆಸರು ಎದ್ದು ಕಾಣುತ್ತದೆ. ಅವರು ಸಾಕಷ್ಟು ಶ್ರಮ ವಹಿಸಿ ಗ್ರಂಥ ಸಂಪಾದನೆ ಮಾಡಿದ್ದಂತು ನಿಜ. ಏಕೆಂದರೆ ಅವರು ಸಂಪಾದನೆ ಮಾಡುವ ವೇಳೆಯಲ್ಲಿ ಯಾವುದೇ ಆಧುನಿಕ ತಂತ್ರ ಪ್ರಯೋಗಗಳೂ ಇರಲಿಲ್ಲ. ಆದ್ದರಿಂದ ಅವರ ಸಂಪಾದನಾ ಕ್ಷೇತ್ರ ಇಂದು ವ್ಯಾಪ್ತಿ ಸಮೂಹ ಸಂಘಸಂಸ್ಥೆಗಳ ವಿವಿಧ ಹಂತಗಳಲ್ಲಿ ವೈಜ್ಞಾನಿಕ ಹಿನ್ನೆಲೆಯಲ್ಲಿ ಹೊಸ ಹೊಸ ತಂತ್ರ ಪ್ರಯೋಗಗಳಿಂದ ಗ್ರಂಥ ಸಂಪಾದನಾ ಕಾರ್ಯ ಬೆಳೆಯಲು ಇಂತವರ ಪರಿಶ್ರಮ ಪ್ರಾಮಾಣಿಕ ಸೇವೆ ಅರಿಯಬೇಕಾದದ್ದು ಅತ್ಯವಶ್ಯಕವಾಗಿದೆ.

ಸಂಗ್ರಹ, ಸಂಪಾದನೆ, ಸಂಶೋಧನೆ, ವಿಮರ್ಶೆ ಇವೆಲ್ಲ ಅವರ ಆಸಕ್ತಿ ಕ್ಷೇತ್ರಗಳಾಗಿವೆಯಲ್ಲದೆ ವಚನ ಸಾಹಿತ್ಯ, ಆಧುನಿಕ ಸಾಹಿತ್ಯ ಮತ್ತು ಜಾನಪದ ಇವು ಅವರ ಪರಿಣಿತಿಯ ಕ್ಷೇತ್ರಗಳಾಗಿವೆ. ಇದರಿಂದ ಅವರ ಹೆಸರು ಕನ್ನಡ ಸಾಹಿತ್ಯ ರಂಗದಲ್ಲಿ ಮೇಲ್ಮುಖವಾಗಿ ಚಲಿಸುತ್ತಲಿದೆ.

ಡಾ.ಸಿ.ಕೆ.ನಾವಲಗಿ ಅವರು ಸಾಹಿತ್ಯ ಕ್ಷೇತ್ರದ ಕಡೆಗೆ ಹೆಚ್ಚಿನ ಒಲವು ತೋರಿಸಿದರೂ ಅದರಲ್ಲೂ ಸಂಶೋಧನೆ, ಜಾನಪದ ಸಂಪಾದನೆಗಳತ್ತ ಹೊರಳಲು ಕಾರಣವೇನು ಎಂಬ ವಿಚಾರ ಮೂಡುವದು ಸಹಜ. ಈ ಸಹಜ ಒಲವು ಮೂಡಿಬರುವುದಕ್ಕೆ ಅವರ ಕುಟುಂಬವೇ ಕಾರಣ. ಇವರ ಬಾಲ್ಯದಲ್ಲಿ ಇದ್ದಾಗಡಿಷಿ] ಇವರ ಮೇಲೆ ಜಾನಪದದ ಪ್ರಭಾವ ಬೀರಿತು. ತಾಯಿಯ ಮಡಿಲಲ್ಲಿ ಇದ್ದಾಗಲಿ ತಾಯಿಯಿಂದ ಜಾನಪದದ ಒಲವು ಮೂಡಿದಂತು ನಿಜ. ಅದರಲ್ಲೂ ಅವರ ಪತ್ನಿಯವರು ಕೂಡ ಸಂಪಾದನೆಗೆ ಕೈಗೂಡಿಸಿದ್ದು ಮರೆಯುವಂತಿಲ್ಲ. ಇಲ್ಲಿ ಒಬ್ಬ ಪುರಷನ ಸಾಧನೆಯ ಹಿಂದೆ ಒಬ್ಬ ಮಹಿಳೆಯ ಪರಿಶ್ರಮ ಇದ್ದೆ ಇರುತ್ತದೆ ಎಂಬುದು ಅವರ ದಾಂಪತ್ಯ ಜೀವನದಿಂದ ತಿಳಿದು ಬರುತ್ತದೆ.

ಡಾ. ಸಿ.ಕೆ. ನಾವಲಗಿ ಅವರು ಕನ್ನಡದ ಪ್ರಾಧ್ಯಪಕರಾಗಿದ್ದು ಅವರ ಪತ್ನಿಯು ಕೂಡ ಎಮ್.ಎ. ಪಧವೀದರರಾಗಿದ್ದು ಇವರಿಬ್ಬರ ಅನೋನ್ಯ ದಾಂಪತ್ಯಜೀವನ ಸುಖಮಯವಾದುದಲ್ಲದೆ ಪತಿ ಜಾನಪದ ತಜ್ಞ, ಪತ್ನಿ ಬೆಳಗಾವಿ ಜಿಲ್ಲೆಯ ಜಾನಪದ ತಜ್ಞೆರೆಂದು ಕರೆಯಿಸಿಕೊಂಡವರು. ಹೀಗಾಗಿ ಇವರಿಬ್ಬರ ವಿಶಾಲವಾದ ಮನಸ್ಸು, ಗಾಡವಾದ ಪರಿಶ್ರಮ ಈ ಸಂಪಾದನಾ ಕ್ಷೇತ್ರದಲ್ಲಿ ಸಹಜವಾಗಿ ಮೂಡಿ ಬಂದಿದೆ. ಇಂದು ನಾಡಿನ ಸಂಸ್ಕೃತಿ ಕಣ್ಮರೆಯಾಗದಂತೆ ಭದ್ರವಾಗಿ ರಕ್ಷಿಸುವ ಕಾರ್ಯಭಾರ ಇಂದು ಹೆಚ್ಚಾಗಿರುವದರಿಂದ ಮತ್ತು ಅದೇ ತುರ್ತಾಗಿ ಅಗತ್ಯವಾಗಿ ಕಂಡಿದರಿಂದ ಅವರು ಸಂಪಾದನಾ ಕಾರ್ಯಗಳತ್ತ ಮುಖಮಾಡಿದ್ದು ಮಹತ್ವ ಪೂರ್ಣವೆನ್ನಿಸುತ್ತದೆ. ಇದರ ಅಧ್ಯಯನವು ಇಂದು ಅಗತ್ಯವೆಂದು ಅರಿತು ಅವರ ಸಂಪಾದನಾ ಗ್ರಂಥಗಳ ಅಧ್ಯಯನಕ್ಕೆ ಮುಂದಾಗಿದ್ದೆನೆ.

ನಮ್ಮ ಪ್ರಾಚೀನ ಸಂಸ್ಕೃತಿಕ ಸಂಪ್ರದಾಯಗಳು ನಮ್ಮನ್ನಗಲಿ ಹೋಗಬಾರದೆಂಬ ಆಂತರಿಕ ತುಡಿತವೇ ಅವರ ಜಾನಪದ ಸಂಗ್ರಹ ಸಂಪಾದನಾ ಕಾರ್ಯಗಳಲ್ಲಿ ತೊಡಗಿದ್ದು ಅದನ್ನು ಮೂಲರೂಪದಲ್ಲಿ ಉಳಿಸಿ ರಕ್ಷಿಸಿ ಜನ ಸಾಮಾನ್ಯರಿಗೆ ಅದರ ಮೌಲ್ಯಗಳನ್ನು ತಿಳಿಸಿಕೊಡುವತ್ತ ತಮ್ಮ ಗಮನ ಹರಿಸಿದ್ದಾರೆ ಹಾಗಾಗಿ ಅವರ ಸಂಪಾದನಾ ಕಾರ್ಯ ಇಂದು ಮಹತ್ವಪೂರ್ಣವೆನಿಸಿದೆ.

೩.೧ ಉತ್ತರ ಕರ್ನಾಟಕ ಭಜನೆ ಹಾಡುಗಳು :

ಸಂಪಾದಕರು ಡಾ. ಸಿ.ಕೆ. ನಾವಲಗಿ ಅವರು ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಕನ್ನಡ ಭವನ ಜೆ.ಸಿ.ರಸ್ತೆ ಬೆಂಗಳೂರು ಪ್ರಕಾಶಕರು. ಅದೇ ರೀತಿ ಪ್ರಕಟಣೆ ೨೦೦೬ ರಲ್ಲಿ ಒಟ್ಟು ಪುಟಗಳು ೪೮೮

ಇದರ ಬೆಲೆ ೫೦ ರೂ ಸಂಪಾದಕರ ಸಮಿತಿ ಮೇಲ್ವಿಚಾರಕರ ಸಮಿತಿ ಒಳಗೊಂಡಿದೆ. ಈ ಸಂಪಾದನೆಗೆ ಹೊನ್ನುಡಿ ಬರೆದವರು ಎಚ್.ಟಿ. ಕುಮಾರಸ್ವಾಮಿ ಪ್ರಕಾಶಕರ ಮಾತು ಕೆ.ಆರ್.ನಿರಂಜನ್ ಅಧ್ಯಕ್ಷರ ಮಾತು ಒಳಗೊಂಡತೆ ಅದೇ ರೀತಿ ಮುಂದೆ ಸಂಪಾದಕರ ನುಡಿ ಗಳಿವೆ. ಮತ್ತು ಪ್ರಸ್ತಾವಣೆಯನ್ನು ಕೂಡ ಅವರೇ ಬರೆದಿದ್ದಾರೆ. ಬೆನ್ನುಡಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರು ಬರೆದಿದ್ದಾರೆ. ಪ್ರಸ್ತಾವನೆಯಲ್ಲಿ ಇಡೀ ಉತ್ತರ ಕರ್ನಾಟಕದ ಭಜನೆ ಹಾಡು ಗಳ ಸಾರಂಶ ಒಳಗೊಂಡು ಒಟ್ಟು ಐವತ್ತಾರು ಪುಟಗಳನ್ನು ಒಳಗೊಂಡಿದೆ.

ಈ ಹದಿನೇಳು ಭಜನೆ ಹಾಡುಗಳು ತುಂಬಾ ವೈವಿಧ್ಯತೆಯಿಂದ ಕೂಡಿವೆ.ಸಮಾಜದ ಕಣ್ಣುತೆರೆಸಿವೆ ಇಂದು ಭಜನೆ ಹಾಡುಗಳ ಮಹತ್ವ ಅರಿಯಬೇಕಿದೆ ಇವುಗಳು ಪ್ರಯೋಜನಕಾರಿಯಾಗಿವೆ. ಜನಪದದ ಜೀವನಾಡಿ ಈ ಭಜನೆಯಲ್ಲಿಯೂ ಅನುಭಾವ ಮೈದೆಳೆದಿದೆ. ಸ್ವಅನುಭವದೊಂದಿಗೆ ಲೋಕಾನು ಬವವೂ ಸೇರಿಕೊಂಡು ಶ್ರದ್ಧೆ, ಭಕ್ತಿಯ ಪರಿಕಾಷ್ಠತೆಯನ್ನು ಈ ಭಜನೆಯಲ್ಲಿ ಕಾಣುತ್ತೇವೆ.

"ವೇದ ಶಾಸ್ತ್ರಗಳು ಪಂಡಿತರ ಸ್ವತ್ತಾದರೆ ಭಕ್ತಿಯ ಹಾಡುಗಳು ಪಾಮರರ ಸ್ವತ್ತು[೧]ಶರಣರ ಅನುಭಾವದ ಪದಗಳು ಭಜನೆಗಳಾಗಿ ಪರಿವರ್ತನೆಗಳಾಗಿವೆ. ವಾದ್ಯ ಪರಿಕರಗಳೊಂದಿಗೆ ಹೊಂದಿಕೊಂಡು ಹೋಗುವ ಈ ಭಜನೆ ಕೂಡ ಗೇಯತೆಯ ಗುಣಗಳನ್ನೊಂಡಿದೆ. ಹಬ್ಬ ಹರಿದಿನಗ ಳಷ್ಟೇ ಅಲ್ಲದೇ ಉತ್ತರ ಕರ್ನಾಟಕದ ಕಡೆಗೆ ಯಾರಾದರೂ ವಿಧಿವಶರಾದರೆ ಅಗಲೂ ಭಜನೆ ಹಾಡುತ್ತಾರೆ.

ಭಜನೆ ಪದ ನಿಷ್ಪತ್ತಿ

'ಭಜನೆ' ಎಂಬ ಪದ ' ಭಜ್ ' ಎಂಬ ದಾತುವಿನಿಂದ ನಿಷ್ಪತ್ತಿಯಾಗಿದೆ. ಭಜ್ ಎಂದರೆ ಸೇವೆ ಮಾಡು, ಪೂಜೆ ಮಾಡುವೆಂದು ಸಿರಿ ಗನ್ನಡ ಅರ್ಥಕೋಶದಲ್ಲಿ ಹೇಳಲಾಗಿದೆ. ಹಾಗೆಯೇ ಭಜಕ ಎಂದರೆ ಪೂಜಿಸುವದು, ಭಜಿಸು ಎಂದರೆ ಪೂಜಿಸು, ಆರಾಧಿಸು, ದೇವರ ಸ್ಮರಣೆಯನ್ನು ಮಾಡು, ಭಜನೆ ಮಾಡು ಎಂದರ್ಥ.

ಕನ್ನಡ-ಇಂಗ್ಲೀಷ ಶಬ್ದಕೋಷದಲ್ಲಿ ಭಜನೆಗೆ A Davation Worship Davation Singing the Praises of God's. ಎನ್ನುವ ಅರ್ಥ ನೀಡಿದ್ದಾರೆ.

೧ ಕಾವ್ಯಸಂಗಮ ಭಾಗ ೧ ಸಂಪಾಕರು ಚಂದ್ರಗೌಡ ಕುಲಕರ್ಣಿ ಶ್ರೀಮತಿ ದೇವಿಕಾ ಡಿ. ನಗರಕರ ಪ್ರಸಾರರಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಭಜನೆ ಸಂಪ್ರದಾಯ ಹುಟ್ಟು - ಬೆಳವಣಿಗೆ

ಮಾನವ ಶಿವನ ಆರಾಧಕನಾದುದರಿಂದ 'ಓಂ ನಮ: ಶಿವಾಯ' ಎಂಬ ಮಂತ್ರವನ್ನು ತಾಳ ಲಯ ಬದ್ಧವಾಗಿ ಜಪಿಸಿರಬೇಕು ಹಾಗೆಯೇ ಸಾಂಬಸದಾಶಿವ ಸಾಂಬಸದಾಶಿವ ಜಯ ಸಾಂಬ ಜಯ ಸಾಂಬ ಎಂದು ಶಿವನಿಗೆ ಜಯಕಾರ ಹಾಕುತ್ತಾ ವರ್ಣಿಸಿರಬೇಕು ಇದನ್ನೇ ಹರಭಜನೆ ಎನ್ನಲಾಗಿದೆ. ಏಕ ವ್ಯಕ್ತಿ ಏಕತಾರಿ ಮೂಲಕ ತನ್ನ ಇಷ್ಟ ದೈವವನ್ನು ಮೆಚ್ಚಿಸಲು ಮಾಡಿದ ಪ್ರಾರ್ಥನೆ ಸ್ತುತಿ ಎಂಬುದು ಭಜನೆ, ಏಕತಾರೆ ಭಜನೆ ಎನ್ನುವ ಹೆಸರಿನಲ್ಲಿ ಒಂದು ಸಾಂಪ್ರದಾಯವಾಗಿಯೇ ಬೆಳೆದು ಬಂದಿದೆ. ಇದು ಏಕಗ್ರತೆ ಮತ್ತು ಆತ್ಮಾನಂದಕ್ಕಾಗಿ ಮಾಡಿದ ಭಜನೆ. 'ಪ್ರಾರ್ಥನೆಗೆ ಕರಗದ ಕಲ್ಲಿಲ್ಲ' ಎಂಬ ನಾಣ್ಣುಡಿಯೂ ಇದೆ.

ದೇವನನ್ನು ಪ್ರಾರ್ಥಿಸಿಲು ಮತ್ತು ಸ್ತುತಿಸಲು ತನಗೆ ತಿಳಿದಂತೆ ಹಾಡುಗಳನ್ನು ರಚಿಸಿ ಏಕತಾರೆಯಲ್ಲಿ ಭಕ್ತಿ ಹಾಡತೊಡಗಿದ ಈ ಹಾಡುಗಳನ್ನೇ ಭಜನೆಗಳೆಂದು ಕರೆಯಬಹುದಾಗಿದೆ. ಭಜನೆಯನ್ನು ಭಕ್ತ ತುಂಬಿ ಹಾಡಲಾಗುತ್ತಿದ್ದುದರ ಉಲ್ಲೇಖವೊಂದು ಮಹಾದೇವಿ ಅಕ್ಕನಲ್ಲಿದೆ. ಬದುಕುವವರೆಗೂ ದೇವರ ಭಜನೆ ಮಾಡುತ್ತಲೇ ಇರಬೇಕೆಂದು ಅಲ್ಲಮಪ್ರಭು ಹೇಳುತ್ತಾರೆ.

ಶಿಶುನಾಳ ಶರೀಫರು, ಕಡಕೋಳ ಮಡಿವಾಳಪ್ಪನವರು, ಮೈಲಾರ ಬಸಲಿಂಗ ಶರಣರು ಮೊದಲಾದವರು ಪ್ರಮುಖ ತತ್ವ ಪಧಕಾರರು. ಒಟ್ಟಿನಲ್ಲಿ[೧೨ ನೇ ಶತಮಾನಕ್ಕೂ ಮುಂಚೆ ಇದ್ದ ಭಜನೆ ಹಾಡುಗಳ ಸಂಪ್ರದಾಯ ದಾಸರು, ನಿಜಗುಣರು, ಶರೀಫರು, ಹಾಗೂ ಅನುಭವಿ ಕವಿಗಳಿಂದ ತನ್ನ ಸಾಧ್ಯತೆಗಳನ್ನು ವಿಸ್ತರಿಸಿಕೊಂಡು ನಾನಾ ಮುಖವಾಗಿ ಬೆಳೆದು ಇಂದು ಪ್ರತಿ ಹಳ್ಳಿ, ಪಟ್ಟಣ, ಪ್ರದೇಶಗಳಲ್ಲಿಯೂ ಭಜನಾ ಮೇಳಗಳನ್ನು ಹೊಂದಿರುವದು ಅದರ ನಿತ್ಯ ನಿರಂತರತೆಗೆ ಹೆಗ್ಗುರುತು.

ಭಜನೆ ಹಾಡುಗಳ ಸ್ವರೂಪ-ಲಕ್ಷಣ: ಉತ್ತರ ಕರ್ನಾಟಕದ ಎಲ್ಲ ಹಳ್ಳಿ ಹಳ್ಳಿಗಳಲ್ಲಿ ಗಂಡಸರು ಹೆಂಗಸರು ಮಕ್ಕಳಾಧಿಯಾಗಿ ಭಜನೆ ಮಾಡುತ್ತಾರೆ. ಈ ಭಜನೆ ಹಾಡುಗಳು ಸಾಹಿತ್ಯ, ಸಂಗೀತ ಎರಡನ್ನು ಅಳವಡಿಸಿ ಕೊಂಡಿರುತ್ತದೆ. ಇವು ದ್ವಿಪದಿ, ತ್ರಿಪದಿ, ಚೌಪದಿಗಳುಳ್ಳವಿದ್ದು ಆಡುನುಡಿಯನ್ನು ಹೊಂದಿರುತ್ತವೆ. ಕನಿಷ್ಟ ಒಂದು ನುಡಿಯಿಂದ ಅನೇಕ ನುಡಿಯಗಳವರೆಗೆ ಭಜನೆ ಹಾಡು ರಚನೆಗೊಂಡಿರುವುದುಂಟು. ಈ ಬಗೆಯ ರಚನೆಗಳು ಜಾನಪದ ಹಾಡುಗಳಿಗಿಂತಲೂ ಮೇಲ್ಮಟ್ಟದ ಹಾಡುಗಳೆನ್ನಿಸಿವೆ. ಇದರಿಂದ ಅಂತವುಗಳನ್ನು ಜಾನಪದ ಸಾಹಿತ್ಯದಲ್ಲಿ ಪರಿಗಣಿಸುವದು ಕಷ್ಟವಾಗುತ್ತದೆ ಎಂದು ಎಮ್.ಎಮ್.ಕಲಬುರ್ಗಿಯವರ ಅಭಿಪ್ರಾಯ ಭಜನೆ ಹಾಡುಗಳು ಜಾನಪದ ನೆಲೆಯಿಂದಲೇ ಸೃಷ್ಟಿಗೊಂಡಿವೆ.

ಇವುಗಳ ಪ್ರಮುಖ ಉದ್ದೇಶ ಮುಕ್ತಿ ಸಾಧನೆ: ಇವನ್ನು ಯಾರಾದರೂ ಬರೆದಿರಬಹುದು, ಯಾರಬೇಕಾದರೂ ಹಾಡಬಹುದು. ವಿಶೇಷವಾಗಿ ಕಂಠ ಮಾಧುರ್ಯವಿದ್ದವರೆಲ್ಲ ಹಾಡುತ್ತಾರೆ. ಆದರೆ ಅವುಗಳಲ್ಲಿ ತುಂಬಿಕೊಂಡ ಅರ್ಥ ಅಮೂಲ್ಯವಾದದ್ದು. 'ಹರಿ ಭಜನೆಗಳು ಸಂಸಾರದ ಅನಿವಾರ್ಯತೆಯನ್ನು ಹೇಳಿದರೆ ಹರಿ ಭಜನೆಗಳು ಸಂಸಾರದ ವಿಷಮತೆಯನ್ನು ಅರುಹುತ್ತವೆ.' ಭಜನೆಯಲ್ಲಿ ಒಳಗೊಂಡ ಇತರ ಕಾವ್ಯ ಪ್ರಕಾರಗಳಾದ ಹಾಡುಗಬ್ಬ, ಅನುಭವ ಪದ, ಭಕ್ತಿ ಗೀತೆ, ತತ್ವಪದ, ಏಕತಾರೆ ಪದ, ಕೈವಲ್ಯಪದ, ಮುಂತಾದವುಗಳಿಗೆ ನಮ್ಮ ಭಜನೆ ಕಲಾವಿದರೂ ಭಜನೆ ಹಾಡುಗಳೆಂದೇ ಕರೆಯುತ್ತಾರೆ.

೧.೧ ಪುರಂದರದಾಸರ ಪದಗಳು: ಪುಣೆಯ ಹತ್ತಿರದ ಪುರಂದರಗಡದಲ್ಲಿ ಜನಿಸಿದ ಇವರ ಮೂಲ ಹೆಸರು ಶ್ರೀನಿವಾಸನಾಯಕ ಇವರ ಪತ್ನಿ ಸರಸ್ವತಿ ಪುರಂದರದಾಸರ ಗುರುಗಳಾದ ವ್ಯಾಸರಾಯರು ಇವರನ್ನು ದಾಸರೆಂದರೆ ಪುರಂದರದಾಸರಯ್ಯಾ ಎಂದು ಕೊಂಡಾಡಿದ್ದಾರೆ.

ಇಂದಿನ ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಮಾನವನಿಗೆ ಉತ್ತಮ ನೈತಿಕತೆ ಅತ್ಯವಶ್ಯಕವಾಗಿದೆ. ಈ ಮಾನವ ಜನ್ಮ ದೊಡ್ಡದು ಅದನ್ನು ಹಾನಿಮಾಡಬೇಡ ಹುಚ್ಚಪ್ಪಗಳಿರಾ ಎನ್ನುವ ಮಾತು ಸತ್ಯ. ಸಮಾಜದಲ್ಲಿ ಜನರು ಉತ್ತಮ ಗುಣಗಳನ್ನು ಬೆಳಸಿಕೂಂಡು ಇತರರಿಗೆ ಹಾನಿಯಾಗದಂತೆ ನಡೆದುಕೂಳ್ಳಬೇಕು ಜಿವನವೆನ್ನುವದು ಶಾಶ್ವತವಲ್ಲ. ಅದು ನೀರ ಮೇಲಿನ ಗುಳ್ಳೆಯಿದ್ದಂತೆ ಅದನ್ನರಿತು ಇಂದು ನಾವು ಜೀವಿಸಬೇಕಾಗಿದೆ. ಈ ಪುರಂದರದಾಸರ ಕೀರ್ತನೆಗಳು ಸಮಾಜದಲ್ಲಿ ಮಾನವ ಹೇಗೆ ಬದುಕಿ ಬಾಳಿ ಸಂಸಾರವೆಂಬ ಸಾಗರವನ್ನು ದಾಟಿ ಬರಬೇಕು ಎಂಬುವುದನ್ನು ಬಲು ಸೊಗಸಾಗಿ ಅಷ್ಟೆ ಸೂಕ್ಷ್ಮವಾಗಿ ತಿಳಿಸಿಹೇಳಿದ್ದಾರೆ. ಜೀವನ ಇರುವದರೊಳಗೆ ಸಮಾಜಕ್ಕೆ ಹಿಂದಿನಪೀಳಿಗಿಗೆ ಏನಾದರೂ ಅಮೂಲ್ಯವಾದ ಕೊಡುಗೆಗಳನ್ನು ನಿಡಬೇಕೆಂದು ಇವರ ಕಿರ್ತನೆಗಳು ತಾತ್ಪರ್ಯವಾಗಿದೆ. ಇವು ಸಮಾಜಕ್ಕೆ ತುಂಬಾ ಉಪಯುಕ್ತವಾದಂತಹ ಕಿರ್ತನೆಗಳಾವೆ. ಇವು ಜೀವನದ ಮೌಲ್ಯಗಳನ್ನು ಹೆಚ್ಚಿಸುವಂತಿವೆ.

'ಹೊಲೆಯ ಹೊರಗಿಹನೆ?ಊರೊಳಗಿಲ್ಲದೇ
ಹೊಲಗೇರಿಯೋಳು ಹೊಲೆಯ ಹೊಲತಿಲ್ಲವಯ್ಯ೧'

ಆತ್ಮಶುದ್ಧಿಯಿಲ್ಲದವರು ಮೇಲು ಜಾತಿಯಲ್ಲಿ ಜನಿಸಿಯೂ ಪಲವಿಲ್ಲ.ಆತ್ಮಶುದ್ಧಿ ಇರುವವರು ಕೀಳುಜಾತಿಯಲ್ಲಿ ಹುಟ್ಟಿಯೂ ಸುಖವಿಲ್ಲವೆಂದು ಪುರಂದರದಾಸರು ಹೇಳಿದ್ದಾರೆ.

೧.೨ ಕನಕದಾಸರ ಕೀರ್ತನೆಗಳು: ಹಾವೇರಿ ಜಿಲ್ಲೆಯ ಬಂಕಾಪುರದ ಬಾಡ ಗ್ರಾಮದ ಬೀರಪ್ಪ ಬಚ್ಚಮ್ಮ ದಂಪತಿಗಳ ಮಗನೀತ. ಇತನ ಹುಟ್ಟ ಹೆಸರು ತಿಮ್ಮಪ್ಪ.

ಪುರಂದರದಾಸರ ಕಿರ್ತನೆಗಳಷ್ಟೇ ಕನಕದಾಸರ ಕಿರ್ತನೆಗಳು ಪ್ರಾಮುಖ್ಯತೆ ಪಡೆದುಕೊಂಡಿವೆ. ಮಾನವ ತನು,ಮನ,ಎಲ್ಲವು ನಿನ್ನಲ್ಲಿಯೇ ಇದೆ ನಾನು ಮಾಡಿದ ಪಾಪ,ಪುಣ್ಯ ಎಲ್ಲವೂ ನಮ್ಮ ಬೆನ್ನುಹಿಂದಿಯೇ ಇದೆ. ಅದನ್ನರಿತು ಇಂದು ಮಾನವ ಜೀವಿಸಬೆಕಾಗಿದೆ,ಇಂತಹ ಆದುನಿಕ ಯುಗ ಗಳಲ್ಲಿಯೂ ಕೂಡ ನಾವು ಕತ್ತಲೆಯಲ್ಲಿ ಜೀವಿಸಿದತಾಂಗಿದೆ. ಜಾತಿಯೆಂಬ ಕತ್ತೆಯಲ್ಲಿ ಮುಳಗಿದ್ದೇವೆ ಇಷ್ಟೊಂದು ಶಿಕ್ಷಣ ಮುಂದುವರೆದಿದೆ ಆದರೂ ಈ ಜಾತಿಯನ್ನು ಬಿಟ್ಟು ನಾವು ಬದುಕಲಾರೆವು ಏಕೆ? ಎಂಬಂತಹ ಪ್ರಶ್ನೆ ಪ್ರತಿಯೊಬ್ಬರಲ್ಲಿಯೂ ಹುಟ್ಟುವಂತಾಗಿದೆ ೧೨ ನೇ ಶತಮಾನದಲ್ಲಿಯೇ ಈ ಜಾತಿ ಗಳ ಬಗ್ಗೆ ಅನೇಕ ಮಹನ್ ವ್ಯಕ್ತಿಗಳು ನಮಗೆ ತಿಳಿಸಿ ಹೇಳಿದ್ದುಂಟು. ಅದೇರೀತಿ "ಕುಲ ಕುಲ ಅನ್ನತೀದಿ ಕುಲಗೇಡಿ, ಕುಲದ ಖೂನ ಹೇಳು ನಿಜ ನೋಡಿ, ಕೆಳಗೆಂದು ಮೇಲೆಂದು ಹಾರಾಡತೀದಿ ನಾವೆಲ್ಲರೂ ಒಂದರಿತಿಳಿಗೇಡಿ ನೀ" ಮಡಿವಾಳಪ್ಪ.

೧. ನಂಬಿಕೆ ಮತ್ತು ಮೂಡನಂಬಿಕೆ ಲೇಖಕರು ನರಸಿಂಹಯ್ಯಾ ಪಾರು ಪ್ರಕಾಶನ ಗದಗ ಪುಟ ೯೬

"ಬಂದಿದಿ ಬಾಜರ ಮಾಡಕ ಅಲ್ಲಿರುವುದು ನಮ್ಮನೆ ಇಲ್ಲಿರುವುದು ಸುಮ್ಮನೆ[೧]" ಎಂಬ ನುಡಿಯಂತೆ ಬದಕಬೇಕೆಂಬುದು ಮೂರು ದಿನದ ಸಂತಿ ಅದನ್ನು ಮುಗಿಸಿಕೊಂಡು ಮತ್ತೆ ನಮ್ಮೂರಿಗೆ ಹೋಗ ಲೇಬೆಕು. ಅದು ಗೊತ್ತಿದ್ದೂ ಈ ಕುಲ ಜಾತಿ ಎಂಬ ಭೂತದ ಬೆನ್ನು ಹತ್ತಿದ್ದಾನೆ ಎಂತಹ ಮೂರ್ಖಮನುಜ ಆಶಯದಂತೆ ಈ ಪುರಂದರದಾಸರ ಕೀರ್ತನೆಯಲ್ಲೂ ಆದರ್ಶ ಮೌಲ್ಯಗ ಳನ್ನುಜನರಿಗೆ ತಿಳಿಸಿ ಹೇಳಿದ್ದು ಅತ್ಯವಶ್ಯಕವಾಗಿದೆ.

<u>೧.೩ ನಿಜಗುಣ ಶಿವಯೋಗಿಗಳ ಕೈವಲ್ಯಗಳು:</u> ಇವರಿಗೆ ನಿಜಗುಣಾರಾಧ್ಯರೆಂಬ ಹೆಸರು ಇದೆ. ಇವರು ಶಂಭುಲಿಂಗನ ಬೆಟ್ಟದ ಸುತ್ತಲಿನ ನಾಡಿಗೆ ಅರಸರಾಗಿ ಆಮೇಲೆ ವಿರಕ್ತರಾದರು.

"ಸಿಟ್ಟು ತನ್ನ ವೈರಿ ಶಾಂತಿ ಪರರ ವೈರಿ" ಎಂಬಂತೆ ನಮ್ಮ ಕೋಪ ನಮ್ಮನ್ನು ಬಲಿ ತೆಗೆದುಕೊಳ್ಳುತ್ತಿರುವುದನ್ನು ಅರಿಯಬೇಕು ಇನ್ನೊಬ್ಬರನ್ನು ನಿಂದಿಸದೇ ತನ್ನ ಮನಸ್ಸನ್ನು ತಿದ್ದಿ ನುಣುಪುಗೊಳಿಸಿ ಪೂಜ್ಯನೆನಸಿಕೊಳ್ಳಬೇಕು. ಅದೇ ರೀತಿ ಜನನ ಮರಣ ಇವು ಜಗತ್ತಿನ ಯಾರನ್ನು ಬಿಟ್ಟಿಲ್ಲ. ಆದ್ದರಿಂದ ಇರುವುದರೊಳಗೆ ಮಾನವ ಕಾಲಹರಣಮಾಡದೇ ಮುಂದಿನ ಪೀಳಿಗೆಗೆ ಸೂಕ್ತ ಸಲಹೆ, ಸೂಚನೆ ಮಾರ್ಗದರ್ಶನಗಳನ್ನು ನೀಡಿ ಹೋಗುವದು ಒಳ್ಳೆಯದು.

ಈ ನಿಜಗುಣ ಶಿವಯೋಗಿಗಳ ಸಮಕಾಲೀನವರಾದ ಹದಿನೈದನೇ ಶತಮಾನದಲ್ಲಿ ಮುಪ್ಪಿನ ಷಡಕ್ಷರಿಯವರು ಡಿಂಬದೊಳಗೆ ಒಂದು ಪ್ರಾಣವೆಂಬ ತತ್ವಪದದಲ್ಲಿ ಹುಟ್ಟಿದ ವ್ಯಕ್ತಿ ಸಾಯುವದು ನಿಶ್ಚಿತ ಎಂಬುದು ಗೊತ್ತಿದ್ದು "ಹೊನ್ನ, ಹೆಣ್ಣು, ಮಣ್ಣಿಗಾಗಿ ಈ ಮನುಷ್ಯಪ್ರಾಣಿ ಅನವರತ ಬಡದಾಡಿ ತಾನೂ ಅನುಭವಿಸದೆ ಇನ್ನೊಬ್ಬರಿಗೂ ಕೊಡದೆ ಕೊನೆಗೊಂದು ದಿನ ಮಣ್ಣಾಗಿ ಹೋಗುವ ಈ ಮನುಜನಿಗೆ ಯಾವಾಗ ಜ್ಞಾನೋದಯವಾಗುವುದೋ[೨]" ಎಂಬಂತೆ ಈ ಶಿವಯೋಗಿಗಳ ಮಾತು ಇದಕ್ಕೆ ಪೂರಕವಾಗಿದೆ. ತನುಮನ ದಂಡಿಸಿ ಸಮಾಜಕ್ಕೆ ಏನಾದರೂ ಮೌಲ್ಯಗಳನ್ನು ನೀಡಬೇಕೆಂದು ಹೇಳುವುದು ಅರ್ಥಪೂರ್ಣವಾಗಿದೆ ಇದು ಮಹತ್ವಪೂರ್ಣವಾದ ಮಾತಾಗಿದೆ.

<u>೧.೪ ಸರ್ಪಭೂಷಣ ಶಿವಯೋಗಿಗಳ ಕೈವಲ್ಯಗಳು :</u> ನಿಜಗುಣರ ಸಮಕಾಲೀನನಾದ ಮುಪ್ಪಿನ ಷಡಕ್ಷರಿಯ ತರುವಾಯ ಸರ್ಪಭೂಷಣ/ಮುಪ್ಪಿನ ಷಡಕ್ಷರಿಗಳಂತೆ ಉದಾತ್ತ ಮನೋಧರ್ಮದ ಮತ್ತು ಅನುಭಾವದಾಳವುಳ್ಳ ಹಾಡುಗಾರನು ಆಗಿದ್ದನು.ಇವರು ಬರೆದ ಹಾಡುಗಳೆಲ್ಲಾ ಕೈವಲ್ಯ ಕಲ್ಪವಲ್ಲರಿಯಲ್ಲಿ ಸಂಕಲಿತವಾಗಿವೆ.

ಹುಟ್ಟುವಾಗ ಒಬ್ಬನೆ ಹೋಗುವಾಗಲೂ ನಿನೊಬ್ಬನೆ ಅದನ್ನರಿತು ನಡೆಯಬೇಕು ಎಂದು ಮಾನವನಿಗೆ ಕರೆ ಕೊಟ್ಟಂತಾಗಿದೆ. ಆದರೆ ಹುಟ್ಟು ಸಾವು ಯಾರನ್ನು ಬಿಟ್ಟಿಲ್ಲ ನಟ್ಟನಡುವೆ ಏಕೆ? ಈ ನಾಲ್ಕು ದಿವಸಕ್ಕೆ ಯಾಕೆ? ಬಡಿದಾಡ್ತಿ ತಮ್ಮ, ಎನ್ನುವ ಮಾತು ಇಂದಿನ ಯುವ ಜನತೆಗೆ ಪೂರಕವಾಗಿದೆ.

೧ ಕಾವ್ಯಸಂಗಮ ಸಂ.ಚಂದ್ರಗೌಡಡ ಕಲಕರ್ಣಿ,ಶ್ರೀಮತಿ ದೇವಿಕಾ.ಡಿ.ನಗರಕರ ಪ್ರಸಾರಂಗ-ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಪ್ರಕಾಶನ ೨೦೧೦ ಪು.ಸಂ.೩೫

೨ ಕಾವ್ಯಸಂಗಮ ಸಂ.ಚಂದ್ರಗೌಡಡ ಕಲಕರ್ಣಿ,ಶ್ರೀಮತಿ ದೇವಿಕಾ.ಡಿ.ನಗರಕರ ಪ್ರಸಾರಂಗ-ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಪ್ರಕಾಶನ ೨೦೧೦ ಪು.ಸಂ.೮

"ಹೆಂಡತಿ,ಮಕ್ಕಳು,ಅಣ್ಣ,ತಮ್ಮ,ಅಕ್ಕ,ತಂಗಿ ಎಲ್ಲರೂ ಇರುವುದು ಎಲ್ಲಿತನಕ-ಇದ್ರೆ ತಿಂಬೊತನಕ-ಸತ್ತಾಗ ಬರುವರು ತಮ್ಮ ಕುಣಿತನಕಾ ಮಣ್ಣು ಮುಚ್ಚೊತನಕಾ೦" ಈ ಮಾತು ಅಜ್ಞಾತ ಕವಿಗಳ ಪದ ಇಂದು ಅರಿತು ನಡೆಯಬೆಕಾಗಿದೆ. ಇದರ ತಾತ್ಪರ್ಯ ಇಷ್ಟೇ 'ಸಕ್ಕರೆ ಇದ್ದಲ್ಲಿ ಮಾತ್ರ ಇರುವೆ ಇರುತ್ತವೆ ಖಾಲಿ ಆದ ನಂತರ ಇರೋದಿಲ್ಲ' ಎಂಬುದು ಇಲ್ಲಿ ತಿಳಿಯಬೇಕಾಗಿದೆ.ಮರಣಹೊಂದಿದ ಮೇಲೆ ಎಲ್ಲವನ್ನು ಬಿಟ್ಟುಹೋಗಬೇಕಾಗುತ್ತದೆ.ಯಾರೂ ಅದನ್ನು ಗಂಟುಕಟ್ಟಿ ತಲೆಮೇಲೆ ಇಟ್ಟುಕೊಂಡು ಹೋಗುವುದಿಲ್ಲ.ಕೊಟ್ಟು ಕಳುಹಿಸುವುದಿಲ್ಲಾ. ಆದ್ದರಿಂದ ನಾವು ಇರುವುದರೊಳಗೆ, ಸಮಾಜಕ್ಕೆ ನಮ್ಮ ಕಾಣಿಕೆಯನ್ನು ಸಲ್ಲಿಸಿ ಮುಂದಿನ ಪೀಳಿಗೆಗೆ ಅನೂಕೂಲವಾಗುವಂತಹ ಕೆಲಸ ಕಾರ್ಯ ಮಾಡಬೇಕು. ಇದೊಂದೇ ನಮ್ಮ ಜೊತೆಗೆಬರುವುದು ಬೇರೆ ಯಾವ ಆಸ್ತಿ ಅಂತಸ್ತು ಬರುವುದಿಲ್ಲ.

ಒಬ್ಬ ಮಹಿಳೆ ತಾಯಿಯಾಗಿ, ಸತಿಯಾಗಿ, ಶತಜನ್ಮಗಳಿಗೆ ಹೊಣೆಯಾಗಿ ನಿಂತರೂ ಈ ಜಗತ್ತಿನಲ್ಲಿ ಸ್ತ್ರೀಗೆ ಸುಖವಿಲ್ಲ. ಇದು ಹೆಣ್ಣಿನ ಅನಿವಾರ್ಯ ಸ್ಥಿತಿಯಂತಾಗಿದೆ. ಇಂತಹ ಶಿವಯೋಗಿಗಳ ಮಹತ್ವದ ಭಜನೆ ಹಾಡುಗಳನ್ನು ಸಂಪಾದನೆ ಮಾಡಿ ಜನರಿಗೆ ಮನವರಿಕೆ ಮಾಡಿದ್ದು ಮಹತ್ವಪೂರ್ಣವಾಗಿದೆ.

<u>೧.೫ ಶಿಶುನಾಳ ಶರೀಫರ ತತ್ವಪದಗಳು</u>: ಧಾರವಾಡ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಶಿಶುನಾಳ ಗ್ರಾಮದ ಇಮಾಮ ಸಾಹೇಬ ಮತ್ತು ಹಜ್ಜೂಮಾ ದಂಪತಿಗಳಿಗೆ ೧೮೧೯ ರಲ್ಲಿ ಮಹಮ್ಮದ್ ಶರೀಪ್ ಜನಿಸಿದ.

ಹಲವಾರು ಭಜನೆಯ ಕವಿಗಳ ಹಾಡುಗಳ ಮೇಲೆ ಇವರ ಪ್ರಭಾವ ಗಾಡವಾದದ್ದು. ಇದು ಇವರ ಸ್ಥಾನ ಮಾನ, ಗೌರವ, ಮೌಲ್ಯ ಹೆಚ್ಚಿಸುವಂತಹದ್ದು. ಇಬ್ರಾಹಿಂ ಸುತಾರ ಹಿರೇಮಠ. ಶಿಶುನಾಳ ಶರೀಫರ ಭಜನೆ ಹಾಡುಗಳು ತುಂಬಾ ಮಹತ್ವ ಪೂರ್ಣವಾದವುಗಳು. ಸಮಾಜದಲ್ಲಿ ಅದು ಹೆಣ್ಣು ಮಕ್ಕಳಿಗೆ ಬಹಳ ಒತ್ತುಕೊಟ್ಟು ಹೇಳಿದಂತಹ ಭಜನೆ ಹಾಡುಗಳಿವೆ. ದುಡ್ಡಿನ ಮಹತ್ವ ಎಂತದ್ದು ಎನ್ನುವುದು ತುಂಬಾ ಸೊಗಸಾಗಿ ಹೇಳಿದ್ದಾರೆ.

ದುಡ್ಡೇ ದೊಡ್ಡಪ್ಪ ಅಂದಾನಮ್ಮಪ್ಪ ಎಂಬಂತೆ ದುಡ್ಡು ಜೀವನದಲ್ಲಿ ಎಲ್ಲದಕ್ಕೂ ಪರಿಹಾರ ಎಂಬಂತೆ ತಿಳಿದು ಬರುತ್ತದೆ. ಹಣ ಒಳ್ಳೆಯದು ಮಾಡಬಹುದು ಕೆಟ್ಟದನ್ನು ಮಾಡಬಹುದು. "ದುಡ್ಡು ಇದ್ದವರಿಗೆ ಸೊಕ್ಕು ಬಾಳಂತ. "ಇದೂ ಕೂಡ ಹಿಂದಿನ ದಿನಮಾನದಲ್ಲಿ ಎದ್ದು ಕಾಣುವಂತಹದು. ತಮ್ಮ ಜೀವನದಲ್ಲಿ ಕೆಟ್ಟ ಗಳಿಗೆ ಬಂದಾಗ ಅವರು ಅಲ್ಲಿಯೇ ಒಂದು ಹಾಡನ್ನು ಹಾಡಿದ್ದು ಅರ್ಥಪೂರ್ಣ ಮಹತ್ವ ಪಡೆದುಕೊಂಡಿವೆ.

"ಮೋಹದ ಹೆಂಡತಿ ತೀರಿದ ಬಳಿಕ ಮಾವನ ಮನೆಯ ಹಂಗಿನ್ಯಾತಕೊ೨" ಎಂಬಂತಹ ಕವನಗಳು ಇಂದಿನ ಜನರಿಗೆ ದಾರಿಯ ಬೆಳಕಾಗಿ-ಬಾಳಿನ ಬುತ್ತಿಯಾಗಿ ಎಲ್ಲರ ಮನವನ್ನೂ ಸೂರೆಗೊಂಡಿರುತ್ತವೆ. ಶಿಶುನಾಳ ಶರೀಫ ತನಗೆ ಬೇಕಾದ ಗಂಡನನ್ನು (ಗುರುವನ್ನು) ಆಯ್ದುಕೊಂಡು ನಡೆದದ್ದು ಇಂದಿನ ವಿದ್ಯಾವಂತರಿಗೆ ದಾರಿದೀಪವಾಗಿದೆ.

೧ ನೂರು ತತ್ವಪದಗಳು ಸಂಪಾದನೆ ಬೈಲೂರಬಸವಲಿಂಗಯ್ಯ ಪ್ರಕಾಶನ ಜಾನಪದ ಸಂಶೂಧನಾ ಕೇಂದ್ರ ಪ್ರಕಟನೆ ೨೦೧೦ ಪುಟ ೯೭

೨ ಶಿಶುನಾಳ ಶರೀಫರ ತತ್ವ ಪದಗಳು - ಸಂಕ್ಷೀಪ್ತ ಜೀವನ ಚರಿತ್ರೆ ಪುಟ ೮ ಪ್ರಕಾಶಕರು ಶಾಬಾದಿ ಮಠ ಪ್ರಿಟಿಂಗ್ ಪ್ರೆಸ್ ಗದಗ ಮುದ್ರಣ ೨೦೧೦

ಇಲ್ಲಿ ಮನೆಯನ್ನು ದೇಹಕ್ಕೆ ಹೋಲಿಸಿದಾಗ " ಒಂದು ಮನೆ ಸುಸಜ್ಜಿತ ಸುಂದರವಾಗಿರಬೇಕಾದರೆ ಅದನ್ನು ನೋಡಿಕೊಳ್ಳುವ ಒಬ್ಬ ಯಜಮಾನ ಬೇಕು. ಇರದಿದ್ದರೆ ಮನೆ ಅಂದಗೆಡುತ್ತದೆ. ಮಳೆ ಬಂದಾಗ ಮನೆ ಸೋರುತ್ತದೆ. ಇದು ಲೋಕರೂಢಿ [೧]". ಶಿಶುನಾಳ ಶರೀಫ ಅದರಂತೆ ಈ ದೇಹವೆಂಬ ಮನೆಯಲ್ಲಿ ಅರಿಷಡ್ವರ್ಗಗಳು, ಪಂಚೇಂದ್ರಿಯಗಳು ಎಂಬ ಕಸ ಬೆಳೆದು ಅಜ್ಞಾನವೆಂಬ ಕತ್ತಲೆಗೆ ಸಿಕ್ಕು ಒದ್ದಾಡುವವರಿಗೆ ಶಿಶುನಾಳ ಶರೀಫರ ಇಂತಹ ಮಾತುಗಳ ಅವಶ್ಯಕತೆ ಇದೆ. ಎಲ್ಲರ ಬಾಯಲ್ಲಿರುವ ಭಜನೆಯಲ್ಲಿ ಮೇಲಿಂದ ಮೇಲೆ ಹಾಡಲಾಗಿರುವ ಕೆಲವೇ ಕೆಲವು ತತ್ವ ಪದಗಳನ್ನು ಡಾ. ಸಿ.ಕೆ.ನಾವಲಗಿ ಅವರು ಸಂಪಾದಿಸಿದ್ದಾರೆ. ಶಿಶುನಾಳ ಶರೀಫರ ತತ್ವಪದಗಳು ತುಂಬಾ ಮಹತ್ವ ಪಡೆದು ಕೊಂಡಿದ್ದರಿಂದ ಇಂದಿನ ಆಧುನಿಕ ಜಗತ್ತಿನಲ್ಲಿ ಇನ್ನೂ ಕೆಲವು ಮಹತ್ವದ ತತ್ವಗಳ ಸಂಪಾದನೆ ಮಾಡುವ ಅವಶ್ಯಕತೆ ಇತ್ತು. ಇವರ ೧೦೫ ಕ್ಕೂ ಹೆಚ್ಚು ತತ್ವ ಪದಗಳು ಅವರ ಸಂಕ್ಷಿಪ್ತ ಜೀವನ ಚರಿತ್ರೆಯಲ್ಲಿ ಲಭ್ಯ.

೧.೬ ಕಡಕೋಳ ಮಡಿವಾಳಪ್ಪನವರ ತತ್ವಪದಗಳು: ಕಲಬುರ್ಗಿ ಜಿಲ್ಲೆಯ ಅಪಜಲಪುರ ತಾಲೂಕಿನ ಚಿಣಮಗೇರಿ ಚೌಡದಾನಪುರದ ಬಿದನೂರಿನಲ್ಲಿ ಈ ಹಾಜ್ಞಾನಿ ಜನಿಸಿದರು. ಗುರುಹಿರಿ ಯರನ್ನು ಗೌರವಾದರಗಳಿಂದ ನೋಡಿಕೊಳ್ಳುವುದು ಇಂದಿನ ಯುವಜನತೆಯ ಕಣ್ಣುತೆರೆಸಿ ದಂತಿದೆ. ಆಧುನಿಕ ಯುಗದತ್ತ ಹೆಜ್ಜೆ ಹಾಕಿದರೂ, ಇಂದು ನಮ್ಮ ತನ್ನತನ, ಅಹಂ ನಿಂದ ಬಿಟ್ಟು ದೂರಬಿಟ್ಟು ದೂರ ಹೋಗಿಲ್ಲ ಎಂಬುದು ವಿಷಾದಕರ ಸಂಗತಿಯಾಗಿದೆ. ಹೊನ್ನು, ಹೆಣ್ಣು, ಮಣ್ಣು ಇವುಗಳ ಬೆನ್ನು ಹತ್ತಿದವನು ನರಕಯಾತನೆ ಅನುಭವಿಸುತ್ತಾನೆ. ಮಾನವನಾದ ಮೇಲೆ ಪರಧನ, ಪರಸ್ತ್ರೀಯರಿಗೆ ಕೈ ಹಾಕದೆ, ಸತ್ಯ ಮಾರ್ಗದಿಂದ ನಡಯಬೇಕೆಂದು ಇದರಿಂದ ತಿಳಿದು ಬರುತ್ತದೆ. 'ಮಾನಗೇಡಿ ಮಂದಿ' ಎಂಬ ಭಜನೆಯಲ್ಲಿ ಸ್ವತಃ ಮಡಿವಾಳಪ್ಪನವರೇ ಹೇಳಿದಂತೆ "ಬಡವನ ಹೆಂಡ್ತಿ ಚೆಲುವಿ ಇದ್ದರ ಬಡ್ಡಿ ಕೊಡುವರೋ [೨]" ಎಂಬುದು ಪರಸ್ತ್ರೀಯರಿಗೆ ಅನ್ಯಾಯ ಎಸಗಿದಂತಿದೆ. ಇಂತಹ ಗೋಮುಖ ವಾಘ್ರರ ಬಗ್ಗೆ ಕಿಡಿಕಾರುತ್ತಾರೆ. ಸಭ್ಯತೆಯ ಸೋಗಿನಲ್ಲಿ ಮೋಸ ಮಾಡುವವರನ್ನು ಕಂಡು ಬಯಲಿಗಳೆಯುತ್ತಾನೆ. ಇಂತಹ ವಿಚಾರಗಳು ದುಡ್ಡಿದ್ದವರಿಗೆ, ವಾಮಮಾರ್ಗಿಗಳಿಗೆ ಇಂದು ಅನ್ವಯಿಸುತ್ತದೆ. ಮಡಿವಾಳಪ್ಪನವರ ತತ್ವಪದಗಳ ಸಂಪಾದನೆ ಇಂದು ಪ್ರಾಮುಖ್ಯತೆ ಪಡೆದುಕೊಂಡಿವೆ.

'ಶ್ರೀಮಂತರು ಮನೆಗೆ ಬಂದರೆ ಒಳಗೆ ಕರೆದು ಹಾಸಿಗೆ ಹಾಸುತ್ತೇವೆ. ಅದೇ ಬಡಜನರು ಮನೆಗೆ ಬಂದರೆ ಬಾಗಿಲಲ್ಲೇ ನಿಂತು ಮಾತಾಡಿಸುತ್ತೇವೆ'. ಇಂದು ಇಂದಿನ ಮಾನವನ ಕೆಟ್ಟ ಗುಣವನ್ನು ಎತ್ತಿ ತೋರಿಸುತ್ತದೆ. ಇಂದಿನ ಯುವಜನತೆ ಇದನ್ನು ಅರಿತು ನಡೆಯಬೇಕಿದೆ.ಇಂದು ಸ್ವಾತಂತ್ರ್ಯ ಬಂದು ಎಷ್ಟೋ ಶತಕಗಳು ದಾಟಿದರೂ ಹೆಣ್ಣು-ನಾಲ್ಕು ಗೋಡೆಗಳ ಮಧ್ಯೆ ಇರುವಂತಾಗಿದೆ. ಸ್ತ್ರೀ ಇಂದು ಏನೇ ಮಾಡಿದರೂ, ಎಷ್ಟೇ ಸುಶಿಕ್ಷಿತಳಾದರೂ ಅವಳು ಸಮಾಜದಲ್ಲಿ ತಲೆಬಾಗಿ ನಡೆಯಲೇಬೇಕು.

೧ ಕಾವ್ಯ ಸಂಗಮ - ಸಂ ಚಂದ್ರೇಗೌಡ ಕುಲಕರ್ಣಿ ದೇವಿಕಾ ಡಿ ನಗರಕರ ಪ್ರಸಾರ ರಂಗ ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ

೨ ಕಾವ್ಯ ಸಂಗಮ - ಸಂ ಚಂದ್ರೇಗೌಡ ಕುಲಕರ್ಣಿ ದೇವಿಕಾ ಡಿ ನಗರಕರ ಪ್ರಸಾರ ರಂಗ ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ ಪ್ರಕಾಶನ ೨೦೧೦ ಪು.ಸಂ.೧೦

ಇದು ಇಂದಿನ ಪರಿಸ್ಥಿತಿಗೆ ಅನುಗುಣವಾಗಿದೆ."ಕೊಟ್ಟಿದು ತನಗೆ-ಬಚ್ಚಿಟ್ಟಿದ್ದುಪರರಿಗೆ" ಎಂಬಂತೆ ಮಾನವ ಸಹಾಯ ಸಹಕಾರ ಮಾಡುವುದನ್ನು ಕಲಿಯಬೇಕು.

೧.೬ ನಿಜಲಿಂಗಪ್ಪ ಭದ್ರೇಶ್ವರ ಅನುಭಾವ ಪದಗಳು: ಬೀದರ ಜಿಲ್ಲೆಯ ನಿಡವಂಚಿ ಗ್ರಾಮದವರು. ಸಿದ್ದಯ್ಯ ರುದ್ರಮ್ಮಾ ದಂಪತಿಗಳಿಗೆ ೧೮೩೨ ರಲ್ಲಿ ಜನಿಸಿದರು. ನಾವು ಮಾಡುವ ಕಾಯಕದಲ್ಲೇ ದೇವರನ್ನು ಕಾಣಬೇಕು. ದೇವರನ್ನು ಕಲ್ಲು, ಮಣ್ಣು, ಗುಡಿಯೊಳಗೆ ಹುಡುಕಿದರೆ ಸಿಗಲಾರರು. ಸ್ತ್ರೀ ಕೂಡಾ ದೇವತಾ ಸ್ಥಾನದಲ್ಲಿದ್ದಾಳೆ. ಎಲ್ಲ ದೇವತಾ ಶಕ್ತಿಗಿಂತಲೂ ಹೆಣ್ಣು ದೇವರ ಶಕ್ತಿ ಶ್ರೇಷ್ಠವಾದುದು. ಸ್ತ್ರೀ ಅವತಾರದಿಂದಲೇ ದೇವಿಮಹಾತ್ಮೆ ಎನಿಸಿಕೊಂಡಿದ್ದಾಳೆ. ಮೋಸ ಮಾಡಲು ಪುಂಡಾಟ ತೋರಿಸಿದರೆ, ಅವರ ರುಂಡ ಉಳಿದೀತೆ? ಪವಾಡ ಶಕ್ತಿ ತುಂಬಿರುತ್ತದೆ. ಚೆಂಡಾಟದಂತೆ ರುಂಡ ಹಾರಿಸುವ ಶಕ್ತಿ ಇದೆ. ಅದಕ್ಕೆ ಹೇಳಿರುವುದು "ಎಲ್ಲ ಶಕ್ತಿಗಿಂತ ಮಿಗಿಲಾದ ಶಕ್ತಿ" ಸ್ತ್ರೀ ದೇವತೆಗಿದೆ.

ಜೀವನದಲ್ಲಿ ಸತ್ಯ-ಮಿಥ್ಯ ಎಲ್ಲವನ್ನು ಅರಿತು ನಡೆಯುವವನೇ ನಿಜವಾದ ತತ್ವಜ್ಞಾನಿ. ಶ್ರೇಷ್ಠ ಮನಸ್ಸಿನಿಂದ ದೇವರನ್ನು ನೆನೆಯಬೇಕು. ಸಮಾಜದಲ್ಲಿ ಅಜ್ಞಾನಿಗಳಿಗೆ ಅರಿವು ಮೂಡಿಸಿದ ಗುರುವಿನ ಸ್ಥಾನ ಮಹತ್ತರವಾದದು. ಧ್ಯಾನ, ದೇವರ ದರ್ಶನ ಅಧ್ಬುತವಾದುದು. ದುಷ್ಟಬುದ್ಧಿ ಗಳನ್ನು ಬಿಟ್ಟು ನಡೆಯಬೇಕಾಗುತ್ತದೆ. ಅಂದಾಗ ನಮ್ಮ ಜನ್ಮ ಪಾವನವಾಗುತ್ತದೆ. ಇಂದಿನ ದಿನಮಾನಗಳಲ್ಲಿ ಅನಡತೆ, ನಿಯಮ ಉಲ್ಲಂಘನೆಯಿಂದ ಕಾಲಕೆಟ್ಟು ಹೋಗಿದೆ.

"ಅಮ್ಮಾ ಎಂದು ಗುಮ್ಮಾಡುವರು
ಅಕ್ಕಾ ಎಂದು ಹೊಕ್ಕಾಡುವರು
ತಂಗಿ ಎಂದು ದೆಂಗ್ಯಾಡುವರಮ್ಮ ಏನು ಹೇಳಲಮ್ಮ"

'ಮಾಡಿದ್ದಣ್ಣೋ ಮಾರಾಯಾ' ಎಂಬಂತೆ ನಾವು ಮಾಡಿದ್ದನ್ನು ನಾವೇ ಉಣ್ಣಬೇಕೆಂಬುದು ಮಹತ್ತರ ಸಂಗತಿಯಾಗಿದೆ. 'ಬಿತ್ತಿದಂತೆ ಬೆಳೆ' ಜೀವನದಲ್ಲಿ ಏನೇ ಕಾರ್ಯಮಾಡಿದರೂ ಅದಕ್ಕೆ ತನ್ನದೇ ಆದ ಗುರಿ ಹೊಂದಿರಬೇಕು. ಒಳಗೆಲ್ಲಾ ಕೊಳೆ ಇಟ್ಟುಕೊಂಡು ಮೇಲ್ನೋಟಕ್ಕೆ ದೇವರನ್ನು ನೆನೆಸಿದರೆ ಏನಾದಿತು. ಮೊದಲು ಮನಸ್ಸಿನ ಕೊಳೆಯನ್ನು ತೊಳೆದುಕೊಳ್ಳಬೇಕು.

ಭದ್ರೇಶ್ವರರು ಜಾತಿಯ ಬಗ್ಗೆ ಸಮಾಜಕ್ಕೆ ಅರಿವು ಮೂಡಿಸಿದ್ದಾರೆ.

"ಕುಲ ಕುಲ ಕುಲ ಕುಲ ಅಂತೀರಿ
ನಿಮದ್ಯಾವ ಕುಲ ನಮಗ ಹೇಳಿರಿ
ಎಲುಬಿನ ಪಂಜರ ಮಾಡ್ಯಾನರಿ
ಹೊಲಸು ಮಾಂಸ ಒಳಗ ತುಂಬ್ಯಾನರಿ
ಚರ್ಮದ ಮುಚ್ಚಕಿ ಮಾಡ್ಯಾನರಿ
ಇದಕ್ಯಾವ ಕುಲ ಅನಬೇಕರಿ"

ಎಂದು ಭದ್ರೇಶ್ವರ ಪ್ರಶ್ನಿಸಿದ್ದಾರೆ. ಅಂದರೆ ಇವರ ಹೇಳಿಕೆಯ ತಾತ್ಪರ್ಯ ಇಷ್ಟೇ ದೇಹ ಮತ್ತು ಆತ್ಮಗಳಿಗೆ ಕುಲದ ಗುರುತಿಲ್ಲ. ಮಾಡುವ ತೊಡುವ ವೇಷಗಳಿಂದ ಕುಲವನ್ನು ಗುರುತಿಸುವ ಬಗ್ಗೆ ವಿಷಾದಿಸಿದ್ದು ಇಂದಿನ ಸಮಾಜಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಇನ್ನೊಬ್ಬರ ಹೊಟ್ಟೆಯ ಮೇಲೆ ಬರೆ ಎಳೆದು ಸಂಪತ್ತು ಗಳಿಸಿದರೆ ಅದು ಪ್ರಯೋಜನವಿಲ್ಲ. ಅದೇ ರೀತಿ ಪತಿವ್ರತಾ ಸ್ಥಾನ ಸ್ತ್ರೀಯರಿಗೆ ಹಿಂದೆಯೂ ಇತ್ತು. ಈಗಲೂ ಇದೆ. ಮುಂದೆಯೂ ಇರುತ್ತದೆ. ಆದರೆ ಅದನ್ನುಳಿಸಿಕೊಂಡು ಹೋಗುವ ಕರ್ತವ್ಯ ನಾವಿಂದು ಮಾಡಬೇಕಿದೆ. "ಪತಿಯೇ ದೇವರು, ಪತಿಯೇ ಸರ್ವಸ್ವ" ಎನ್ನುವುದು ಅರಿಯಬೇಕಿದೆ.

ಮಾನವ ಸಾಕಿದ ನಾಯಿಯಂತೆ ಜೀವಿಸಬಾರದು. ಸ್ವತಃ ತನ್ನತನದಿಂದ ಬದುಕಬೇಕಾದರೆ ಮಾನವ 'ಅಹಂ' ಎಂಬ ಅಹಂಕಾರ ತ್ಯಜಿಸಬೇಕು. ಭದ್ರೇಶ್ವರರು ಇದಷ್ಟೇ ಅಲ್ಲ ಹೆಣ್ಣಿನ ಸೌಂದರ್ಯವನ್ನು ಹೊಗಳಿದ್ದಾರೆ.

"ಮೂಗಿನಲ್ಲಿ ಮೂಗುತಿ ಚೆಂದ

ಕಾಲಿಗೆ ಕಾಲ್ಗೆಜ್ಜೆ ಚೆಂದ"

'ಹಿರಿಯರು ಹಾಕಿದ ಗೆರೆ, ದಾಟಬಾರದು' ಎನ್ನುವ ಮಾತು ಇಂದಿನ ಯುವಜನತೆಗೆ ಹೇಳಿ ಮಾಡಿಸಿದಂತಹ ಮಾತು. 'ತಾಯಿ' ನೂರು ದೇವತೆಗಳಿಗೆ ಸಮ ಎಂದು ಹೇಳುವುದು ತಾಯಿಯ ಮಹತ್ವ ಸಾರುತ್ತದೆ. ಸಹನೆ, ತಾಳ್ಮೆ, ಎಲ್ಲವೂ ತಾಯಿಯಲ್ಲಿದೆ. ಅದಕ್ಕಾಗಿ ಆಕೆಯನ್ನು ದೇವತೆಗೆ ಹೋಲಿಸಲಾಗುತ್ತದೆ. ಉತ್ತಮವಾದ ಸಂಸಾರವೆಂದರೆ, 'ಒಂದು ಚಕ್ಕಡಿ ಇದ್ದಂತೆ' ಚಕ್ಕಡಿಯ ಎರಡು ಗಾಲಿಗಳಲ್ಲಿ ಒಂದು ಗಾಲಿ ಮುರಿದರೆ ಸಂಸಾರ ಹಾಳಾದಂತೆಯೇ ಎಂಬುದು ಇಲ್ಲಿ ಅರಿಯಬೇಕಾಗಿದೆ. "ತೊಟ್ಟಿಲ ತೂಗುವ ಕೈ ಜಗತ್ತನ್ನೇ ತೂಗಬಲ್ಲದು" ಎಂಬುದು ಇವರ ಭಜನೆ ಹಾಡುಗಳಿಂದ ತಿಳಿದುಬಂದಿದ್ದು ತುಂಬಾ ಮಹತ್ವಾದ್ದಾಗಿದೆ. ಎಲುಬು ಇಲ್ಲದ ನಾಲಿಗೆ ಅಂತ ಹಿಂದಿನ ಹಿರಿಯರು ಹೇಳಿದ್ದು ನಿಜ. ನಮ್ಮ ಮಾತು ಮಾಣಿಕ್ಯದ ದೀಪ್ತಿಯಂತಿರಬೇಕೆಂಬುದು ಇದರ ಮಹತ್ವ. "ಜೀವನವೆನ್ನುವುದು ಚೆಂಡಿನಾಟವಿದ್ದಂತೆ" ಬಾಹ್ಯ ವ್ಯಕ್ತಿಗಿಂತ ಅಂತರಂಗದ ಶುದ್ಧತೆಯ ಭಕ್ತಿಗೆ ಹೆಚ್ಚಿನ ಮಹತ್ವ ಇರುವುದನ್ನು ಅರಿಯಬೇಕು.

ಇಂದಿನ ಆಧುನಿಕ ತಂತ್ರಜ್ಞಾನದ ಜೊತೆ-ಜೊತೆಗೆ ಇಂದಿನ ಯುವಜನತೆ ಮುಂದುವರೆದಿದೆ ಎಂದರೂ ಅವರು ಹಿರಿಯರಿಗಿಂತ ಮುಂದೆ ಹೋಗಿಲ್ಲ. ಇದು ಹಿರಿಯರ ಹಿರಿಮೆ ಮೆಚ್ಚುಗೆ ವ್ಯಕ್ತ ಪಡಿಸುವಂತದ್ದು.

"ನೂಲಿನಂತೆ ಸೀರೆ

ತಾಯಿಯಂತೆ ಮಗಳು"

ಎಂಬ ಮಾತು ಇವರ ಭಜನೆ ಹಾಡುಗಳಿಂದ ತುಂಬಾ ಮಹತ್ವ ಪಡೆದಿದೆ. ಇಂದಿನ ಯುವ ಜನತೆಗೆ 'ತಲೆಬಾಗಿ ನಡೆ' ಎಂಬ ನೀತಿಯ ಮಹತ್ವ ತಿಳಿಸಿಕೊಡುವ ಕಾರ್ಯ ಮಹತ್ತರವಾದುದು.

೧.೮ ಚನ್ನಮಲ್ಲಯ್ಯನ ಭಜನೆ ಹಾಡುಗಳು: ಬೆಳಗಾವಿ ತಾಲೂಕಿನ ಒಂದು ಚಿಕ್ಕ ಗ್ರಾಮ ಕುಕುಡೊಳ್ಳಿಯ ಚನ್ನಬಸಯ್ಯ ರುದ್ರಮ್ಮರ ಉದರದಿಂದ ಕ್ರಿ.ಶ.ಸುಮಾರು ೧೮೮೫ ರಲ್ಲಿ ಹುಟ್ಟಿದರು. ಎಲ್ಲ ಭಜನೆ ಹಾಡುಗಳಲ್ಲಿರುವಂತೆ ಇವರು ಹಾಡುಗಳಲ್ಲಿಯೂ ಹಲವಾರು ಅಂಶಗಳನ್ನು ಒತ್ತಿ ಹೇಳಿದ್ದಾರೆ. ಮಾನವ ತನ್ನನ್ನು ತಾ ಅರಿಯಬೇಕು. ಅದೇ ರೀತಿ 'ಚಿಂತೆ ಏಕೆ ಮಾನವ' ಎಂಬಂತೆ. 'ಚಿತೆ ಸತ್ತ ದೇಹವನ್ನು ಸುಟ್ಟರೆ ಚಿಂತೆ ಜೀವಂತ ಮನುಷ್ಯನನ್ನು ಸುಡುತ್ತದೆ ಎಂಬುದು ಇವರ ಭಜನೆಯ ಹಾಡುಗಳು ಮಹತ್ವದ್ದಾಗಿವೆ. 'ಗುರುವನ್ನು ನಂಬಿ ಕೆಟ್ಟವನಿಲ್ಲ' ಎಂಬ ಮಾತು ಮಾಣಿಕ್ಯದಂತಿದೆ.

'ತಾಯಿಯ ಉದರದಲ್ಲಿ ಜನಿಸಿದಿರಿ

ಅಲ್ಲಿ ಯಾವ ಕುಲ ಇತ್ತು ಹೇಳಿರಿ'

ಎಂಬ ನಿಜಲಿಂಗ ಭದ್ರೇಶ್ವರರಂತೆ ಇವರು ಕೂಡಾ ಅದನ್ನೇ ಹೇಳಿದ್ದಾರೆ. ಕುಲದ ಬಗ್ಗೆ ಹೆಚ್ಚಿನ ಒತ್ತು ಕೊಟ್ಟು ಜನರಿಗೆ ತಿಳಿಹೇಳಲು ಶ್ರಮಿಸಿದ್ದಾರೆ. ಆದರೂ ಇವರಿಗಿಂತ ಮುಂಚೆಯೇ ೧೨ ನೇ ಶತಮಾನದಲ್ಲಿ ಜಾತಿ, ಕುಲದ ಬಗ್ಗೆ ಬಸವಣ್ಣನವರು ಹೇಳಿದ್ದುಂಟು ಮಾಡಿ ತೋರಿಸಿದ್ದುಂಟು.

'ಜಾತಿ ವಿಜಾತಿ ಎನಬೇಡ

ಶಿವನೊಲಿದಾತನೇ ಜಾತ ಸರ್ವಜ್ಞ'

ಎಂಬಂತೆ ಹಲವು ಬಾರಿ ಒತ್ತಿ-ಒತ್ತಿ ಹೇಳಿದರೂ ನಮಗೆ ಅದರ ಅರಿವಾಗಬಲ್ಲದು. ಈ ಮಾನವನ ಜನ್ಮ ಹೇಸಿ ಜನ್ಮ ಎಂದು ತೆಗಳಿದ್ದಾರೆ. ಅಲ್ಲದೇ ವರ್ಷಕ್ಕೊಮ್ಮೆ ಬರುವ ಹಬ್ಬದ ಆಚರಣೆಯು ಮಹತ್ವದ ಸ್ಥಾನ ಪಡೆದುಕೊಂಡಿರುವುದನ್ನು ಅರಿಯಬೇಕಿದೆ. ಎಲ್ಲ ಪ್ರೀತಿಗಿಂತಲೂ ಮಿಗಿಲಾದ ಪ್ರೀತಿ ಅಣ್ಣ-ತಂಗಿ-ಪ್ರೀತಿ ಆಕಾಶದೆತ್ತರಕ್ಕೆ ಉಕ್ಕಿ ಹರಿದಿದೆ. ಅರಿವಿನ ಜನ್ಮ ತಿಳಿಯಬೇಕಾದರೆ 'ಗುರು'ವೆಂಬ ಎರಡಕ್ಷರ ಶಿವಾಯನಮಃ ಎಂಬ ಐದಕ್ಷರ ಮಹತ್ವ ಪೂರ್ಣವಾದವುಗಳೆಂಬುದು ತಿಳಿಯಬೇಕಿದೆ. "ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ" ಎಂಬ ಮಾತು ತುಂಬಾ ಮಾರ್ಮಿಕವಾಗಿದೆ. ಇಂತಹ ಭಜನೆ ಹಾಡುಗಳು ಹಿಂದಿನ,ಇಂದಿನ, ಮುಂದೆಯೂ ಇವು ತಮ್ಮದೇ ಆದ ಘನತೆ ಗೌರವಗಳನ್ನು ಹೆಚ್ಚಿಸಿಕೊಳ್ಳುತ್ತಾ ಯುವಜನತೆಗೆ ನಡೆ-ನುಡಿ ಆಚಾರ-ವಿಚಾರ ಸುಖ-ದುಃಖ ಇವೆಲ್ಲವುಗಳನ್ನು ಕಲಿತು ಆಚರಿಸಲು, ಸರಿಪಡಿಸಲು ಹಿತನುಡಿಗಳನ್ನು ಹೇಳಿ ಮಾಡಿಸಿದಂತಿವೆ.

೧.೯ ಬಂಡೆಪ್ಪ ಕವಿಯ ಭಜನೆ ಹಾಡುಗಳು :ಕಲಬುರ್ಗಿ ತಾಲ್ಲೂಕಿನ ಒಂದು ಚಿಕ್ಕಹಳ್ಳಿ ಸಿರಗಾಪುರದ ವೀರಭದ್ರದೇವರ ಪರಮಭಕ್ತ ಬಂಡೆಪ್ಪ ಕವಿ.

ಪ್ರತಿಯೊಬ್ಬ ಮಾನವ 'ಶಿವಸ್ಮರಣೆ' ಮಾಡಬೇಕೆಂಬುದು ಇವರ ಭಜನೆ ಹಾಡುಗಳ ತಾತ್ಪರ್ಯ. ಇಲ್ಲದಿದ್ದರೆ 'ಹಾಳು ದೇಗುಲವಿದ್ದಂತೆ' ಎಂದಿದ್ದಾರೆ. ಅದೇ ರೀತಿ ಆದರ್ಶ ವ್ಯಕ್ತಿ ಬಸವಣ್ಣನಂತವರ ಆದರ್ಶಗಳನ್ನು ಇಂದಿನ ಯುವಜನತೆ ಅಳವಡಿಸಿಕೊಳ್ಳಬೇಕು 'ದೇವರ

ಆಟಬಲ್ಲವರ್ಯಾರು' ಇದು ಹಿಂದೆಯೂ ಇಂದಿಗೂ ಅನ್ವಯಿಸುವಂತದ್ದು. ಇಂದಿನ ಆಧುನಿಕ ತಂತ್ರಜ್ಞಾನದ ಪ್ರಭಾವ ಮಾನವನ ಮೇಲಷ್ಟೇ ಅಲ್ಲ 'ಉಪಕರಣ'ಗಳ ಮೇಲೂ ಆಗಿದೆ. ಅಡುಗೆ ಸಲಕರಣೆಗಳಲ್ಲಿ ಒಂದಾದ ಪ್ರಾಚೀನ ಕಾಲದಲ್ಲಿ 'ಮಣ್ಣಿನ ಗಡಿಗೆ' ಮಹತ್ವ ಸ್ಥಾನ ಹೊಂದಿತ್ತು ಇಂದು ನೋಡಲಿಕ್ಕೂ ಅದರ ಗುರತು ಅಡುಗೆ ಮನೆಯಲ್ಲಿ ಇಲ್ಲ.

ಇವರೂ ಕೂಡಾ ಚನ್ನಮಲ್ಲಯನವರು ಹೇಳುವಂತೆ 'ಚಿಂತೆ' ಏನೆಲ್ಲಾ ಹಾಳು ಮಾಡುತ್ತದೆ ಎಂದಿದ್ದಾರೆ. 'ಕಷ್ಟಕ್ಕೆ ಕರಿಬೇಡಿ ಊಟಕ್ಕೆ ಮರಿಬೇಡಿ' ಎಂಬ ನಾಣ್ಣುಡಿಯಂತೆ ಮಾನವ ಸುಖ ಮಾತ್ರ ಬಯಸುತ್ತಾನೆ. ಆದರೆ, ಜೀವನವೆಂದರೆ, ಸುಖ-ಕಷ್ಟಗಳ ಸಮ್ಮಿಶ್ರಣ ಎಂಬುದನ್ನು ಅರಿತು ನಡೆಯಬೇಕು. ಕಷ್ಟ ಬಂದಾಗ ದೇವರನ್ನು ನೆನೆಯುವುದು ಏಕೆ? ಎಂದು ಬಂಡೆಪ್ಪ ಕವಿಯ ಭಜನೆಯಲ್ಲಿ ಬಹು ಮಾರ್ಮಿಕವಾಗಿ ವ್ಯಕ್ತವಾಗಿದೆ.

'ಭಗ್ನ ಪ್ರೇಮ್ಕಕಿಂತ ಭಕ್ತ ಪ್ರೇಮಿ ಶ್ರೇಷ್ಠ' ಎನ್ನುವುದು ಭಕ್ತಿ ಮಹಿಮೆ ಸಾರುತ್ತದೆ. ದುಷ್ಟತನದಿಂದ ದೂರವಿರಬೇಕೆಂಬುದು ಮಾನವನ ಶರೀರದ ಬಗ್ಗೆ ಕಾಳಜಿ ವ್ಯಕ್ತಪಡಿಸಿದ್ದು ಇಂದು ಇವರ ಭಜನೆ ಹಾಡುಗಳು ತುಂಬಾ ಪ್ರಾಮುಖ್ಯವೆನಿಸಿವೆ.

'ಹೆಣ್ಣಿನ ಮನಸ್ಸು ಚಂಚಲ' ಇದು ಚಕಮಕ ಚೀಲವಿದ್ದಂತೆ ಎಂಬುದು ನಿಜವಾಗಿದೆ. ಅರ್ಥಪೂರ್ಣವಾಗದೆ ಯಾವುದೇ 'ಸಂಪ್ರದಾಯ' ಇಂದು ತನ್ನದೇ ಆದ ಮಹತ್ವ ಪಡೆದು ಕೊಂಡಿದೆ.

ಉದಾ:-ಕಾರಹುಣ್ಣಿಮೆ ಇಲ್ಲಿ ಎತ್ತುಗಳು ತಮ್ಮದೇ ಆದ ಸಾಮರ್ಥ್ಯವನ್ನು ತೋರಿಸಿ ಕೊಳ್ಳುತ್ತವೆ, ದೇವರಿಗೆ 'ಕಪಲ' ಬಿಡುವುದು. ಮಾನವನ ಮನಸ್ಸು ಕಪಿ ಇದ್ದ ಹಾಗೆ ಎಂದು ಹೇಳುವುದು ಇಂದು ಮನಸ್ಸನ್ನು ಯಾವ ರೀತಿ ನಾವು ನಮ್ಮ ಹಿಡಿತದಲ್ಲಿಟ್ಟುಕೊಂಡರೆ ಸೂಕ್ತ ವಾಗುತ್ತದೆ. ಇಲ್ಲದಿದ್ದರೆ ಹಾನಿ ಎಂಬುದು ತಿಳಿಯಲಾಗಿದೆ. ಹೆಣ್ಣು, ಹೊನ್ನು, ಮಣ್ಣು ಇವುಗಳ ಬೆನ್ನು ಹಿಂದೆ ಬಿದ್ದು ಹಾಳಾಗುವರೇ ಹೊರತು ಉದ್ಧಾರವಾಗುವುದಿಲ್ಲವೆಂಬ ಮಾತು ಸರ್ವ ಕಾಲಕ್ಕೂ ಸತ್ಯವಾಗಿದೆ. ತನ್ನಂತೆಯೇ ಪರರು ತಾನು ಉತ್ತಮವಾಗಿರಬೇಕಾದರೆ ನಮ್ಮ ನೆರೆಹೊರೆಯವರು ಮೊದಲು ಚೆನ್ನಾಗಿರಬೇಕು.

ಉದಾ:- ಜಾನಪದ ಹಾಡಿನಂತೆ " ನಿನ್ನ ಮನವನ್ನು ಕಡು ಶುದ್ಧವಾಗಿರಸದೇ ಬರಿ ತನುವನ್ನು ಮಡಿ ಮಾಡಿ ಏನು ಫಲ" ಎಂಬಂತೆ ಭಕ್ತಿ ಆಂತರಿಕ ಭಾವದಿಂದ ಹುಟ್ಟಿಕೊಳ್ಳಬೇಕು.

ಅದೇ ರೀತಿ : **"ಹೆತ್ತ ತಂದೆ-ತಾಯಿಗಳ ಚಿತ್ತವನೋಯಿಸಿ**

ನಿತ್ಯ ಧ್ಯಾನವ ಮಾಡಿ ಫಲವೇನು

ಸತ್ಯ ಸದಾಚಾರ ಇಲ್ಲದವನು ಜಪ

ಹತ್ತು ಸಾವಿರ ಮಾಡಿ ಫಲವೇನು"

ಎಂಬಂತೆ ಏನೇ ಮಾಡಿದರೂ ನಮ್ಮ ಮನಸ್ಸು ಶುದ್ಧತನದಿಂದ ಕೂಡಿದರೆ ಮಾತ್ರ ಭಕ್ತನಿಗೆ ಭಕ್ತಿ ಒಲಿಯುತ್ತದೆ ಎಂಬುವುದು ತಿಳಿಯಬೇಕು. ಯಾವುದೆ ವಿಷಯ ತಿಳಿಯದೇ ಮಾತನಾಡಬಾರದು ಎಂಬುವುದಕ್ಕೆ **ಉದಾ:-** 'ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಿ' ಎಂಬಂತೆ ಜ್ಞಾನಿಯಾದವನಿಗೆ ಮಾತ್ರ ಸ್ವರ್ಗದನುಭವ ಗೊತ್ತು.

ಮಾನವ ಅತ್ಯಂತ ಕೆಟ್ಟ ಪ್ರಾಣಿಯೂ ಹೌದು, ಒಳ್ಳೆಯ ಪ್ರಾಣಿಯೂ ಹೌದು. ದೇವರು ಬುದ್ಧಿಯನ್ನು, ತಿಳುವಳಿಕೆಯನ್ನು ಕೊಟ್ಟರೂ ಇಂದು ಕ್ರೂರ ಪ್ರಾಣಿಯಂತೆ ಮಾನವ ಬದುಕುತ್ತಿದ್ದಾನೆ. 'ಬೀಜದಂತೆ ಬೆಳೆ' ಬೀಜದಿಂದ ಬಂದ (ಮಾನವ) ಬೆಲೆ ಇಲ್ಲದ ನರಮನುಜನಾಗಿದ್ದಾನೆ. ಆತನ ಬೆಲೆ ಆಧುನಿಕ ಯುಗದಲ್ಲಿ ಆಧುನಿಕರಾಗಿ ಬೆಲೆ ಹೆಚ್ಚಿಸಿಕೊಳ್ಳದೇ ಇಂದು ಆತನ ಬೆಲೆ ಕಳೆದುಕೊಳ್ಳುತ್ತಾ ನಡೆದಿದ್ದಾನೆ. ಇದರ ತಾತ್ಪರ್ಯ ಇಷ್ಟೇ ಮಾನವ ಮಾನವನಂತೆ ಬದುಕಬೇಕು.

'ಕಾಯಕವೇ ಕೈಲಾಸ' ವೆಂಬುದು ಅರಿತು ನಡೆಯಬೇಕು. 'ಮಾನವ ಹಮ್ಮೆಂಬೊ ಹೈರಾಣ ಸಂತೆ' ಬೇಡ ಎಂದು ಮಾನವನಿಗೆ ತಿಳಿ ಹೇಳಿದ್ದಂತು. ಇಂದು ಬಲು ಉಪಯುಕ್ತ ವಾಗಿದೆ. ಸುಳ್ಳನ್ನು ಬಚ್ಚಿಡಬಹುದು, ಆದರೆ ಸತ್ಯ ಎಂದಿಗಾದರೂ ಹೊರಗೆ ಬಂದೇ ಬರುತ್ತದೆ ಎಂಬುದು ಬಂಡೆಪ್ಪ ಕವಿ ಇಂದಿನ ಜನರಿಗೆ 'ನ್ಯಾಯದ' ಅರಿವು ಮೂಡಿಸುವ ಪ್ರಯತ್ನ ಮಾಡಿದ್ದು ಸತ್ವ ಪೂರ್ಣವಾಗಿದೆ. ಮಾನವ ಜನ್ಮಕ್ಕೆ ಸಾರ್ಥಕ ಹೊಂದಬೇಕಾದರೆ ಮಾನವೀಯ ಗುಣಗಳು ಅತ್ಯಾವಶ್ಯಕ. ಕರುಣೆ, ಎಲ್ಲರಲ್ಲೂ ಇರಬೇಕು. 'ಮಾನವ-ಮಾನವನಿಗಾಗಬೇಕು' ಇಲ್ಲದಿದ್ದರೆ ಆತನ ಜೀವನ ನಿರರ್ಥಕ.

"ದಾಹವೆಂದು ನೀರು ಕೇಳಿದವನ ಜೀವಾ ಉಳಿಸದೇ,

ಶವಕೆ ಅಮೃತವು ಸುರಿವಿದರೆ ಏನು ಫಲ"

ಮಾನವ ತನ್ನಲ್ಲಿರುವುದನ್ನು ಬಿಟ್ಟು ಪರವಸ್ತುವಿಗೆ ಆಸೆ ಪಡುವುದು ಎಷ್ಟು ನ್ಯಾಯವೇ? ಅದನ್ನರಿಯಬೇಕು ಮಾನವ ಯಾವುದೇ ಕೆಲಸ-ಕಾರ್ಯ ನಿಯತ್ತಿನಿಂದ ಕೂಡಿರಬೇಕು. 'ಮನಸ್ಸಿದ್ದೆಡೆ ಮಾರ್ಗ' ಎಂಬಂತೆ ಯಾವುದೂ ಅಸಾಧ್ಯವಲ್ಲ. "ಆಡುವುದಕ್ಕಿಂತ ಮಾಡುವುದು ಲೇಸು" ಎಂಬ ನಾಣ್ಣುಡಿ ಇವರ ಭಜನೆ ಹಾಡುಗಳಿಂದ ಮಹತ್ವಪೂರ್ಣವೆನಿಸಿದೆ. ಮಾನವ 'ತೊಗಲಿನ ಅಂಗಿ' ಇದ್ದಂತೆ. ಏನೇ ಮಾಡಿದರೂ ಆತನ ಕೆಲಸ ಕಾರ್ಯಕ್ಕೆ ಬೆಲೆ ಬರಬೇಕು. ಮೌಲ್ಯಯುತ ಗೌರವಯುತ ಸ್ಥಾನ. ಘನತೆ ಹೆಚ್ಚಿಸುವಂತಿರಬೇಕು. ಸಮಾಜಕ್ಕೆ ಅದು ಆದರ್ಶಪ್ರಾಯವಾಗಿರಬೇಕು.

"ಊರಿಗೊಂದು ಶಾಲೆ ಮನೆಗೊಂದು ಮರ" ಇದು ಪ್ರಕೃತಿಯ ಮಹತ್ವ ಸಾರುತ್ತದೆ. ಮರಗಳ ಸಂರಕ್ಷಣೆ ಪ್ರತಿಯೊಬ್ಬ ಮನುಷ್ಯನ ಕರ್ತವ್ಯವೆಂಬುದು ಇವರ ಭಜನೆ ಹಾಡುಗಳು ಇಂದು ತುಂಬಾ ಉಪಯುಕ್ತವೆನಿಸಿದೆ. ಅದೇ ರೀತಿ ಇಂತಹ ಭಜನೆ ಹಾಡುಗಳ ಸಂಗ್ರಹ ಸಂಪಾದನೆ ತುಂಬಾ ಮಾರ್ಮಿಕವೆನಿಸಿದೆ.

೧.೧೦ ಪರಮಹಂಸ ಸದ್ಗುರು ಶಾಮಾನಂದರ ಕೈವಲ್ಯಾಮೃತ: ಗೋಕಾಕದ ಶ್ರೀಮತ್ ಪರಮಹಂಸ ಸದ್ಗುರು ಶಾಮಾನಂದರು. ಪ್ರಾಚೀನ ಕಾಲದಲ್ಲಿ ಸಾಧು ಸಂತರು ಭಜಿಸಿ ಹಾಡುಗಳನ್ನು ಹಾಡುತ್ತಿದ್ದುದ್ದನ್ನು ನೋಡಿದರೆ ಭಜನೆ ಹಾಡುಗಳ ಹಿಂದೆಯೂ ಮಹತ್ವ ಪಡೆದುಕೊಂಡಿದ್ದವು ಎಂಬುದು ತಿಳಿದುಬರುತ್ತದೆ. 'ಹೆಣ್ಣಿಗೆ ಹೆಣ್ಣೇ ಶತ್ರು' ಎಂಬ ಮಾತಿನಂತೆ ಇಂದು 'ಮನುಷ್ಯನಿಗೆ ಮನುಷ್ಯನೇ ಶತ್ರು'ವಾಗಿ ಪರಿಣಮಿಸಿದ್ದು ಉಚಿತವಲ್ಲ ಎಂದು ಶಾಮಾನಂದರು ಇಂದಿನವರಿಗೆ ತಿಳಿಸಿ ಹೇಳಿದ್ದು ಉಪಯುಕ್ತವಾಗಿದೆ. ಇದನ್ನು ನೋಡಿದರೆ ಮಾನವ ನಾಯಿಗೆ ಸಮ ಎನಿಸುತ್ತದೆ. ಏಕೆಂದರೆ, ನಾಯಿಯಂತೆ ಕಚ್ಯಾಡಿ ಸಾಯುವುದು ಬೇಡ ಎಂದಿದ್ದಾರೆ.

ಗುರುವೆ ಸಾಕ್ಷಾತ್ ದೈವ ಎಂದಿದ್ದಾರೆ. ಇಂದಿಗೂ ನಾವು ಭಜಿಸುವಾಗ ಆರಂಭದಲ್ಲಿ 'ಗುರುಬ್ರಹ್ಮ-ಗುರುವಿಷ್ಣು, ಗುರುದೇವೋ ಮಹೇಶ್ವರಾ' ಎಂದು ಹೇಳುತ್ತವೆ.

"ಹಿಂದೆ ಗುರು ಇರಬೇಕು ಮುಂದೆ ಗುರಿ ಇರಬೇಕು" ಎಂಬುದು ಗುರುವಿನ ಮಹತ್ವವನ್ನು ಸಾರುತ್ತದೆ. ಸ್ತ್ರೀಯರನ್ನು ದೇವತೆಗೆ ಹೋಲಿಸುವುದುಂಟು ಏಕೆಂದರೆ, ಅವಳಿಗೆ ಇರುವಷ್ಟು ಸಹನೆ, ತಾಳ್ಮೆ, ಶಕ್ತಿ, ಸಾಮರ್ಥ್ಯ, ಗೌರವ, ಸ್ಥಾನಮಾನಗಳು ಬೇರೆ ಯಾರಿಗೂ ಇಲ್ಲ ಎಂಬುವುದು ಮಹತ್ವದ ಸಂಗತಿಯಾಗಿದೆ. ಇಲ್ಲಿ ತಾಯಿಯ ಸ್ಥಾನವನ್ನು ಕೊಂಡಾಡಿದ್ದು ಅತಿಶಯೋಕ್ತಿ ಎಂದೆನಿಸಲಾರದು. ತಂದೆಗಿಂತಲೂ-ತಾಯಿಯ ಸ್ಥಾನ ದೊಡ್ಡದು. ಎಲ್ಲ ಹಿಂದೆ ಹೇಳಿದ ಭಜನೆಗಾರರಂತೆಯೇ ಈ ಕವಿಯೂ ಕೂಡಾ ಗುರುವಿನ ಮಹಿಮೆ ಕೊಂಡಾಡಿದ್ದಾರೆ. ಪವಿತ್ರತಾ ಸ್ಥಾನ ಶ್ರೇಷ್ಠವಾದದ್ದು. ಭಕ್ತಿ ಶ್ರೇಷ್ಠತೆಯ ಅಮೂಲ್ಯವಾದುದು. ಭಜನೆ ದೈವ ಆರಾಧನೆಯ ಮಹತ್ವದ ಸಾಧನವಾಗಿದೆ. 'ಎಲ್ಲ ಪ್ರೀತಿಗಿಂತಲೂ ತಾಯಿ ಪ್ರೀತಿ ದೊಡ್ಡದು' ಎಂಬುದು ಇಂದಿನ ಜನರಿಗೆ ಮನವರಿಕೆ ಮೂಡಿಸಲು ಪ್ರೇರಣೆಯಾಗಿದೆ. ಇಂತಹ ಭಜನೆ ಹಾಡುಗಳು ಸಮಾಜದ ಒಳತಿಗೆ, ಮುನ್ನಡೆಗೆ ಅತ್ಯವಶ್ಯಕವಾಗಿವೆ.

೧.೧೧ ಸಿದ್ಧಗಿರಿ ಸ್ವಾಮಿ ಮಠಪತಿಯವರ "ಗಿರೀಶ ಗೀತೆ ಶತಕ": ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಮದರಖಂಡಿ ಗ್ರಾಮದಲ್ಲಿ ೧೯೨೦ ರಲ್ಲಿ ಜನಿಸಿದರು ಇವರ ಮೂವತ್ತು ಭಜನೆ ಹಾಡುಗಳು ದೇವರ ಭಕ್ತಿಗೆ ಸಂಬಂಧಿಸಿದವುಗಳಾಗಿವೆ. ಸಂಸಾರವೆಂಬ ಜಂಜಾಟದಲ್ಲಿ ಸಿಲುಕಿ ಪರಿಹಾರ ಕಾಣದೇ ಒದ್ದಾಡುವ ಭಕ್ತರಿಗೆ ನೀನು ಸದ್ಗುರುವಾಗಿ ನಮಗೆ ಕರುಣಿಸಬೇಕು ಎಂದು ಬೇಡಿಕೊಳ್ಳುವ ಭಕ್ತ ಗುರುವಿನ ಮಹತ್ವ ಸಾರುವಂತಿದೆ. 'ಛಡಿ ಛಂ ಛಂ ವಿದ್ಯಾ ಘಂ ಘಂ' ಇಲ್ಲಿ ಶಿಕ್ಷಣದ ಸಾರ ಮಹತ್ವದ್ದಾಗಿದೆ. ದಿವ್ಯವಾದಂತಹ ಮಂತ್ರ ಜಪಿಸಿ ಇದರಿಂದ ಭವ್ಯವಾದಂತಹ ಮುಕ್ತಿಯನ್ನು ಪಡೆಯುವಂತಾಗಿದೆ. ನಾನು 'ನನ್ನ ಮೋಹ' ದಲ್ಲಿ ಭಕ್ತಿಯಿಂದ ಗುರುವನ್ನು ಕೇಳಿಕೊಳ್ಳುತ್ತಾನೆ.

ಇಂದಿಗೂ ಕೂಡಾ ಗುರುವಿನ ಸೌಖ್ಯ ಸಿಗಲಿ ಎಂದು ಭಕ್ತ ಶಿವನನ್ನು ನೆನೆಯುವುದು ಆತನ ಲಕ್ಷಣವಾಗಿದೆ. ಆತನ ಸಗುಣ ತೋರಿಸುತ್ತದೆ. ಈ ಭೂತಾಯಿ ಗರ್ಭದಲ್ಲಿ ಜನಿಸಿ ನಾನಿಂದು ಮಹಾಪಾಪಿಯಾಗಿದ್ದೇನೆ ಎಲ್ಲ ಪಾಪವನ್ನು ನೀನೇ ಸುಟ್ಟುಬಿಟು ಎಂಬಂತಹ

ಮಾನವನ ಮಾತು ಅರಿವಿನ ತಿಳುವಳಿಕೆಯ ಮಾತಾಗಿದೆ. ಮಾನವನು ಗುರುವಿನ ಮೇಲೆ ಇಟ್ಟ ನಂಬಿಕೆಯನ್ನು ತಿಳಿಸುತ್ತದೆ. ಧ್ಯಾನಗಳಲ್ಲಿ ಶಿವಧ್ಯಾನ ಶ್ರೇಷ್ಠ ಇನ್ನುಳಿದ ಆರು ಭಜನೆಗಳು 'ಜ್ಞಾನಕ್ಕೆ' ಸಂಬಂಧಿಸಿದವುಗಳಾಗಿವೆ. ಯಾವುದೇ ಮುಕ್ತಿ ಪಡೆಯಲು ಜ್ಞಾನದ ಬಲ ಬೇಕು ಎಂಬುದು ಸತ್ಯವಾಗಿದೆ. ಮುಕ್ತಿಪಡೆಯಲು ಜ್ಞಾನ ಸಾಕ್ಷಿಯಾದರೆ ಅದಕ್ಕೆ ಕರ್ಮ ಬೇಕಾಗುತ್ತದೆ. ಅದೇ ರೀತಿ ವಸ್ತು ಸದ್ರೂಪ ಲಕ್ಷಣ ಬೇಡಿಕೊಳ್ಳುವ ಭಕ್ತನ ಧ್ವನಿ ಹಂಸಧ್ವನಿಯಂತೆ ಕಾಣುತ್ತದೆ. ಅದರಂತೆ ಚಿತ್ತ, ಧ್ಯಾನ ಮಹತ್ವದ್ದು. ಅರಿವು ಆನಂದ, ಪರಮಾನಂದ ಇವೆಲ್ಲ ಸಿಗಬೇಕಾದರೆ ಅರಿವು ಆಗಬೇಕು. ಸಗುಣ ಹೊಂದಿದ ಮಾನವ ಬಾಹ್ಯವಿಡಂಬವಬೇಡ ಯೋಗ್ಯನಾಗಿರಬೇಕು. ಜೀವನದಲ್ಲಿ ಮುಕ್ತಿ ಸಿಗಬೇಕಾದರೆ, ನಿಜವಾಗಿ ಬದುಕಬೇಕು. ಕೀಳು ಮನಸ್ಸನ್ನು ತೊರೆದು ತನ್ನ ತನದಲಿ ತಾನೇ ಸ್ಥಿರಗೊಳ್ಳಬೇಕು. ಅಂದಾಗ ಗುರುವಿನ ಒಲುಮೆ ಭಕ್ತನಿಗೆ ಒಲಿಯುವುದು. ಹೀಗೆ ಇವರ ಒಟ್ಟಾರೆ ಭಜನೆಗಳು ಭಕ್ತಿ, ಜ್ಞಾನಕ್ಕೆ ಸಂಬಂಧಪಟ್ಟಿದ್ದು ಇವೂ ಕೂಡಾ ಸಮಾಜದ ಕಣ್ಣು ತೆರೆಸಿವೆ.

<u>೧.೧೨ ಶ್ರೀಮುದ್ದಯ್ಯ ಹಿರೇಮಠ ಅವರ ಭಜನಾ ಪದಗಳು:</u> ಇವರು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಬುದ್ನಿ ಗ್ರಾಮದ ದುಂಡಯ್ಯ ನಾಗವ್ವ ದಂಪತಿಗಳಿಗೆ ೧೯೩೯ರಲ್ಲಿ ಜನಿಸಿದರು. ಹುಟ್ಟಿದ ಸ್ವಗ್ರಾಮ ಬುದ್ನಿ. ಹಾಗಾಗಿ ಇವರ ಕೆಲವು ಭಜನೆ ಹಾಡುಗಳು ಬುದುನಿ-ಶಿವ 'ಲಿಂಗೇಶ' ಎಂಬ ಮುದ್ರಿಕೆಯಿಂದ ಇವರು ಭಜನಾ ಪದಗಳನ್ನು ಬರೆದದ್ದು ವಿಶೇಷ.

ಇವರ ಹಾಡುಗಳ ಮೇಲೆ ನಿಜಗುಣ ಶರೀಫರ ಮುಂತಾದವರ ಪ್ರಭಾವವೂ ಇದೆ. ಇವರ ಹಾಡುಗಳು ಬೇಗನೆ ಅರ್ಥವಾಗುವಂತವು ತುಂಬಾ ಸರಳವಾಗಿವೆ. ಅದೇ ರೀತಿ ಇವರ ೫ ಹಾಡುಗಳು ವಸ್ತು ವೈವಿಧ್ಯತೆಯಿಂದ ಕೂಡಿದಂತಹವುಗಳಾಗಿವೆ. ಸುಮಾರು ನಾಲ್ಕು ದಶಕಗಳಿಂದ ಜನಪದ ಸೇವೆ ಕೈಗೊಂಡ ಇವರು ಮೂಲತಃ ಆಶುಕವಿಗಳು ಹಾಗೂ ಹಾಡುಗಾರರಾದ್ದರಿಂದ ತುಂಬಾ ಪ್ರಾಮುಖ್ಯವೆನಿಸಿದ ಹಾಡುಗಳನ್ನು ಆರಿಸಿ ಬರೆದಂತಿದೆ. ಅದೇ ರೀತಿ ಸಂಪಾದನಾ ಕಾರ್ಯವೂ ಅಷ್ಟೇ ಸೂಕ್ಷ್ಮವಾದದ್ದು ಗಮನಿಸಬೇಕಾಗಿರುವಂತವುಗಳು.

ಉದಾ:-ಶ್ರೀ ಕೃಷ್ಣ ಪಾರಿಜಾತದಲ್ಲಿ 'ಭಾಗವತ' ಪಾತ್ರ ನಿರ್ವಹಿಸುತ್ತಾ ಬಂದಿರುವ ಇವರು ಏಕಾಏಕಿಯಾಗಿ ಭಜನೆ, ಜಾನಪದ ಹಾಡುಗಳನ್ನು ಬರೆಯುವುದು ಸುಲಭವಾಗಿದೆ. 'ಗಂಡ-ಹೆಂಡಿರ ಜಗಳದೊಳಗೆ ಕೂಸು ಬಡವಾದಂತೆ' ಎಲ್ಲಿತನ ನೋಡಿದರಾ ಪ್ರಭು ಎನ್ನುವ ಭಜನೆ ತುಂಬಾ ಶ್ರೇಷ್ಠತೆಯನ್ನೊಳಗೊಂಡಿದೆ. ಜೀವನದಲ್ಲಿ ಇರುವಾಗ ಸಮಾಜಕ್ಕೆ ಒಳ್ಳೆಯದನ್ನು ಮಾಡಬೇಕು. 'ಅನ್ನವು ತನ್ನಲ್ಲಿರುವ ತನಕ ಎಲ್ಲರೂ ನಮ್ಮವರು ತೀರಿದ ಬಳಿಕ ನನ್ನವರ್ಯಾರು ಅಲ್ಲ'. ಇದು ಇಂದಿನ ದಿನಮಾನಗಳಲ್ಲಿ ಹೇಳಿ ಮಾಡಿಸಿದ ಮಾತಿನಂತಿದೆ. ಇವರ ಭಜನೆ ಹಾಡುಗಳು ಶ್ರೇಷ್ಠವಾದವುಗಳಾಗಿವೆ.

೧.೧೩ ಇಬ್ರಾಹೀಮನ ಸುತಾರ ಅವರ 'ಪರಮಾರ್ಥಲಹರಿ': ಇವರು ಬಾಗಲಕೋಟೆ ಜಿಲ್ಲೆ ಮಹಾಲಿಂಗಪೂರದಲ್ಲಿ ೧೯೪೦ ರಲ್ಲಿ ಅಮೀನಾಬಿ ನಬೀ ಸಾಹೇಬ ದಂಪತಿಗಳ ಉದರದಲ್ಲಿ ಜನಿಸಿದರು. ಗುರುವಿನ ಕರುಣೆ ಆಗಬೇಕಾದರೆ 'ಗರ್ವ' ಬಿಟ್ಟು ನಡೆಯಬೇಕೆಂಬುದು ಮಹತ್ತರವಾದ ಮಾತು 'ಮಂತ್ರ' ಪ್ರಾರ್ಥನೆ ಮಾಡುತ್ತಾ ಅನುದಿನ ಭಜನೆಯ ಸ್ಮರಣೆಯಲ್ಲಿ ತೊಡಗಿ ಅದರಲ್ಲೂ ಶಿವನನ್ನು ಸತ್ಯನಾರಯಣನನ್ನು ನೆನೆಯುತ್ತಾ ಪ್ರಭು ನಿನ್ನ ಧ್ಯಾನ ಸದಾ ಮಾಡುವಂತಿರಬೇಕು. ವೈಯ್ಯಾರ ಅಳಿಸಿ ವ್ಯರಾಗ್ಯ ಬದಲಿಸಬೇಕು.

ಜೀವನದಲ್ಲಿ ಸಫಲತೆ ಪಡೆಯಬೇಕಾದರೆ, ಸ್ವಾರ್ಥ ತ್ಯಜಿಸಿ ಬಸವಣ್ಣನಂತಹ ಆದರ್ಶಗಳು ನಾವಿಂದು ಮರೆಯಬೇಕಾಗಿದೆ. ಇಲ್ಲಿ ಹೇಳಿಕೆಗಿಂತ ಮಾಡುವುದಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದು ಮಹತ್ವಪೂರ್ಣವಾಗಿದೆ. ಶರಣರಂತೆ ಸತ್ಯ ನಡೆಯುವುದು. ಅಧಿಕಾರಿಯಾದರೂ 'ತನ್ನತನ' ವನ್ನು ಮರೆತು ನಡೆಯಬೇಕು ಶರಣು ತಲೆಬಾಗಿ ನಡೆ ಎನ್ನುವುದು ಇಂದಿನವರೆಗೆ ಆದರ್ಶಪ್ರಾಯವಾಗಿದೆ. ಜನ ನಮ್ಮನ್ನು ಏನು ಬೇಕಾದರೂ ಮಾಡಲಿ, ಕರೆಯಲಿ ಆದರೆ ನಿನ್ನ ನಾಮವೊಂದು ನನಗೆ ಆಧಾರವಾಗಲಿ ಎನ್ನುವ ಮನೋಭಾವ ದೇವರ ಮೇಲಿನ ಭಕ್ತಿಯನ್ನು ತೋರಿಸುತ್ತದೆ.

ಜೀವಿಸಲು ಮಾನವನಿಗೆ ಹಣ ಎಷ್ಟು ಮುಖ್ಯವೋ ಅಷ್ಟೇ 'ಗುಣ'ವೂ ಮುಖ್ಯ ನಾಸ್ತಿಕ ಆಸ್ತಿಕರ ವಿಮರ್ಶೆ ಭಕ್ತಿ ಶ್ರೇಷ್ಠತೆ ಮೆಚ್ಚುಂತದ್ದು. ಈ ಜಗತ್ತು ಒಂದು ಧರ್ಮಶಾಲೆ ಇದ್ದಂತಾಗಿದೆ. 'ಜಾತಿ' ಎಂಬ ಅಭಿಮಾನ ಬಿಟ್ಟು ನಡೆಯಬೇಕು. ಮಾನವನಾದ ಮೇಲೆ ಸತ್ಯದಿಂದ ಉತ್ತಮ ನಡತೆಯಿಂದ ನಡೆಯುವುದನ್ನು ಕಲಿಯಬೇಕು, ಮನಸ್ಸಿಗೆ ಬಂದಂತೆ ನಡೆಯುವುದಲ್ಲ. ಮಾನವ ಕೆಟ್ಟ ಮನಸ್ಸು ಜಗವೆಲ್ಲಾ ನಾವೆಂದಿತು. ಇದರ ಮಹತ್ವ ಸುತಾರವರು ಬಲು ಸೊಗಸಾಗಿ ಹೇಳಿದ್ದಾರೆ.

೧.೧೪ ಶ್ರೀ ಬಾಳೇಶ ಚಿಕ್ಕಣ್ಣವರ ಅವರ ಕೈವಾಲ್ಯ ಕಾಮಧೇನು: ಬೆಳಗಾವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಮಮದಾಪುರ ಗ್ರಾಮದ ಹಾಲುಮತದ ದಂಪತಿಗಳಾದ ಸಿದ್ದಪ್ಪ ಸತ್ಯೆಮ್ಮನವರ ಉದರದಲ್ಲಿ ೧೯೪೨ ರಲ್ಲಿ ಜನಿಸಿದರು. ಇವರು ನಿಜಗುಣರ ಕೈವಲ್ಯಗಳನ್ನು ಓದಿ ಮನನ ಮಾಡಿಕೊಂಡಿದ್ದಾರೆ. ಅದೇ ರೀತಿ ಇವರು ಶರಣ ಸಂಸ್ಕೃತಿಯನ್ನು ಅಳವಡಿಸಿಕೊಂಡು ಶ್ರೀ ಸಿದ್ಧಾರೂಢ ತತ್ವಕ್ಕೆ ಬದ್ಧರಾಗಿ ಜೀವನತತ್ವ ಆಧ್ಯಾತ್ಮ ತತ್ವ, ಹಾಗೂ ಸಾಹಿತ್ಯ ತತ್ವಗಳನ್ನುಳ್ಳ 'ಕೈವಲ್ಯ ಕಾಮಧೇನು' ಎಂಬ ಗ್ರಂಥ ಮಹತ್ವದ್ದಾಗಿದೆ. ಇವರ ಭಜನೆಗಳಲ್ಲಿ ಮಹಾಮಹಿಮೆರನ್ನು ಕುರಿತು, ಪರಮಾತ್ಮನನ್ನು ಕುರಿತು ಭಕ್ತಿಭಾವದಿಂದ ಅನೇಕ ಭಜನಾ ಪದಗಳನ್ನು ಬರೆದದ್ದು ವಿಶೇಷವಾಗಿದೆ. 'ಮಾನವ ಧರ್ಮವನ್ನರಿತು ತಿಳಿಯಬೇಕು ತಮ್ಮಾ' ಅನ್ನುವ ವಿಚಾರ ಇಂದು ಮಹತ್ವಪೂರ್ಣವಾಗಿದೆ. ಬರುವಾಗ ಹೋಗುವಾಗ ಒಬ್ಬನಿರುವಾಗ ನಡುವೆ ಬಂದ ಜನರು. **ಉದಾ:-** ಪತ್ನಿ ಮಕ್ಕಳು ಇವರೆಲ್ಲಾ ಹೋಗುವಾಗ ಬರುವುದಿಲ್ಲ ಎನ್ನುವ ಮಾತು ಸಮಾಜಕ್ಕೆ ಬದುಕುವ ಬಗೆಯನ್ನು ತಿಳಿಸಿದ್ದು ತುಂಬಾ ಪ್ರಯೋಜಕವಾಗಿದೆ.

<u>೧.೧೫ ಶ್ರೀ ಶಂಕರಾನಂದಸ್ವಾಮಿ ಯರಗಲ್ ಮಠ ಅವರ ಕಾವ್ಯ ಲಹರಿ:</u> ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಯರಗಲ್ ಗ್ರಾಮದಲ್ಲಿ ಜೀವಂತ ಸಮಾಧಿ ಹೊಂದಿ ಜೀವನ ಮುಕ್ತರಾದವರು. ಇವರ ಒಟ್ಟು ಆನೆ ಹಾಡುಗಳು ಹೆಚ್ಚಾಗಿ ಭಕ್ತಿಪೂರ್ಣ ಪದ್ಯಗಳಾಗಿವೆ. ಶ್ರೀ ಸಿದ್ಧಶಂಕರನ ಮಹಿಮೆಯನ್ನು ಕೊಂಡಿದಿದ್ದು ಅವರ ಘನತೆ ಹೆಚ್ಚಿಸಿದೆ. ನಂಬಿದ ಭಕ್ತನಿಗೆ ದೇವರು ಒಲಿಯುತ್ತಾನೆ. ಅದರಲ್ಲೂ ಗಣೇಶನನ್ನು ಸ್ಮರಿಸಿಕೊಂಡಿದ್ದು ಸರಸ್ವತಿದೇವಿ, ಗುರುವಿನ ಮಹಿಮೆ ದೊಡ್ಡದೆಂದು ಇವರು ಹೆಚ್ಚೆಚ್ಚು ದೇವರ ಬಗ್ಗೆ ಬರೆದಂತಹ ಹಾಡುಗಳು ಭಕ್ತಿಪೂರ್ವಕಗಳಾಗಿವೆ. ಆದ್ದರಿಂದ ಇವರ ಭಜನೆಗಳು ಜನಾನುರಾಗಿಯಾಗಿವೆ ಎನ್ನಲು ಅಡ್ಡಿಯಿಲ್ಲ.

<u>೧.೧೬ ಶ್ರೀ ನಿಜಗುಣದೇವರ "ಕೈವಲ್ಯ ಕಲ್ಪತರು"</u>: ಶ್ರೀ ನಿಜಗುಣದೇವರ ಇವರು ಜಮಖಂಡಿ ತಾಲ್ಲೂಕಿನ ಮದರಖಂಡಿಯ ಸಿದ್ಧಲಿಗೇಶ್ವರಮಠದ ಉತ್ತರಾಧಿಕಾರಿ. ಇವರ ಭಜನೆ ಹಾಡುಗಳ ಮೇಲೆ ನಿಜಗುಣ ಶಿವಯೋಗಿ ಸರ್ಪಭೂಷಣ ಶಿವಯೋಗಿ, ಶರೀಫ್, ಕನಕದಾಸ, ಪುರಂದರ ದಾಸರ ಅನುಭವ ಪದಗಳ ಪ್ರಭಾವದಿಂದ ಕೈವಲ್ಯ ಕಲ್ಪತರು ಗ್ರಂಥದ ಹಾಡುಗಳನ್ನು ಬರೆದಿದ್ದಾರೆ. ಇವರು ಅನುಭವದ ಆಧಾರದ ಮೇಲೆ ಭಜನೆ ಹಾಡುಗಳನ್ನು ಬರೆದಿದ್ದು ವಿಶೇಷವಾಗಿದೆ. ಇವರು ಸಂಸ್ಕೃತವನ್ನು ಅಭ್ಯಸಿಸಿದ್ದರಿಂದ ಹಾಗೂ ಪುರಾಣ ಪ್ರವಚನ ಕಾರ್ಯ ಕ್ರಮಗಳಲ್ಲಿ ತೊಡಗಿಸಿಕೊಂಡು ಅನುಭವ ವಿಸ್ತರಿಸಿಕೊಂಡು ಬರೆದಿದ್ದಾರೆ. ಇವರ ಭಜನೆಗಳು ರಾಗ-ತಾಳದಿಂದ ಕೂಡಿವೆ. ಇವರು ಜಮಖಂಡಿಯ ಮದರಬಂಡಿಯ ಸಿದ್ದಲಿಂಗೇಶ್ವರ ಮಠದ ಉತ್ತರಾಧಿಕಾರಿಯಾಗಿದ್ದರಿಂದ ಇವೆಲ್ಲ ತತ್ವಪ್ರಧಾನ ಪದಗಳೇ ಆಗಿವೆ. 'ಸಿದ್ಧಲಿಂಗ' ಎಂಬುದು ಇವರ ಹಾಡುಗಳ ಅಂಕಿತವಾಗಿ ಮೂಡಿಬಂದಿದೆ. ಪಾರ್ವತಿ ಪರಮೇಶ್ವರಾ ಶಂಭುಲಿಂಗ ಇತ್ಯಾದಿ ದೇವರ ಸ್ಮರಣೆ ಇವರ ಭಜನೆಗಳಲ್ಲಿ ಭವ್ಯವಾಗಿ ಕಾಣುವಂತಾಗಿದೆ.

ಇನ್ನೊಬ್ಬರನ್ನು ನಿಂದಿಸಬಾರದು, ನಂಬಿ ಕೆಡಬಾರದು, ಕೆಟ್ಟ ಪ್ರಪಂಚಕ್ಕೆ ಮೋಸ ಹೋಗದಿರು, ಮಾನವ ಜನ್ಮ ಶ್ರೇಷ್ಠವಾದುದು ಅದನ್ನು ತಿಳಿದು ಸುಖಿಯಾಗಿರಬೇಕು. ಈ ಜೀವನ ಪಾವನವಾದುದು ಇರುವುದರೊಳಗೆ ಜೀವನದಲ್ಲಿ ಸುಖ ಅನುಭವಿಸಬೇಕು. ಹೀಗೆ ಸಮಾಜಕ್ಕೆ ಆದರ್ಶ ಮೌಲ್ಯಗಳ ಕೊಡುಗೆಯನ್ನು ನೀಡಿದ್ದಾರೆ.

<u>೧.೧೭ ಇನ್ನಷ್ಟು ಭಜನೆ ಹಾಡುಗಳು</u> : ಎಲ್ಲರೂ ಮುಕ್ತಿ ಬೇಡುವುದು ಸಹಜ. ಗುರುವಿನ ಧ್ಯಾನ ಮಾಡಿದರೆ ಜೀವನದಲ್ಲಿ ಸುಖ ಸಿಗುವುದು. ಮಾನವನಿಗೆ ಮದ, ಸೊಕ್ಕು, ಇರಬಾರದು, ಚಿಂತಿಸಿ ಫಲವಿಲ್ಲ. ಬೀದರ ಜಿಲ್ಲೆಯ ಹಾರಕೂಡವನ್ನು ತಮ್ಮ ಭಜನೆಯಲ್ಲಿ ಸ್ಮರಿಸಿದ್ದಾರೆ. 'ಸಾಧು' ಇವರ ಸ್ಥಾನ ಶ್ರೇಷ್ಠವಾದುದು. 'ಅಹಂ'ನ್ನು ಬಿಟ್ಟು ಬದುಕಬೇಕು. ಗುರುವಿನಲೀಲಾ ಬಲ್ಲವರ್ಯಾರು. ಜ್ಯೋತಿಗಳಲ್ಲೆ ಪರಂಜ್ಯೋತಿ ಶ್ರೇಷ್ಠವಾಗಿದೆ. ಜನ್ಮಪಾವನವಾದುದು. ಗುರುವಿನ ಗುಲಾಮನಾಗಿ ನಡದರೆ ಸಾರ್ಥಕ. ಗುರುವನ್ನು ನೆನೆಯಲಿಕ್ಕೆ ಬೇಸರ ಪಟ್ಟುಕೊಳ್ಳಬಾರದು. ಮಾನವನಿಗೆ ಅನುಭಾವ ಶ್ರೇಷ್ಠವಾದದ್ದು. 'ಸಾವಿಲ್ಲದ ಗಂಡು ಎನ್ನುವ ಮಾತಿನಲ್ಲಿ ಗುರುವಿನ ಪಾದ ಶ್ರೇಷ್ಠವಾದದ್ದು' ಅವರ ಸ್ಮರಣೆ ಸದಾ ಇದ್ದರೆ ನಮ್ಮ ಸಂಸಾರಕ್ಕೆ ಕೊರತೆ ಇಲ್ಲ ಎನ್ನುವ ಭಜನೆ ಹಾಡುಗಳು ತುಂಬಾ ಶ್ರೇಷ್ಠತೆಯನ್ನು ಪಡೆದುಕೊಂಡಿವೆ.

ಹೀಗೆ ಇಂದಿನ ಯುವಪೀಳಿಗೆಯ ಕಣ್ಣು ತೆರೆಸುವ ಕಾರ್ಯ ಈ ಭಜನೆ ಹಾಡುಗಳಲ್ಲಿವೆ. ಆದ್ದರಿಂದ ಇಂತಹ ಭಜನೆಗಳ ಸಂಪಾದನೆ ತುಂಬಾ ಪ್ರಾಮುಖ್ಯತೆ ಪಡೆದುಕೊಂಡಿವೆ. ಇವುಗಳನ್ನೆಲ್ಲಾ ನೋಡಿದೆರೆ ನಮ್ಮ ಇಂದಿನ ಆಧುನಿಕ ಯುಗದತ್ತ ಸಾಗುತ್ತಿದ್ದ ಮಾನವರ ಬದುಕಿಗೆ ಇವು ಪೂರಕವಾಗಿ ಇರುವಂತೆ ಮಾಡಿ, ಶ್ರಮಿಸಿದ ಡಾ. ಸಿ.ಕೆ.ನಾವಲಗಿ ಅವರ ಶ್ರಮ ಅಪಾರವಾದುದು. ಇಂದಿನ ಯುವಜನತೆ ಇಂತಹ ಆದರ್ಶ ಮೌಲ್ಯಗಳನ್ನು ಪಡೆಯಬೇಕಾಗಿದೆ. ಆದ್ದರಿಂದ ಇಂತಹ ಭಜನೆ ಹಾಡುಗಳು ಇಂದಿನ ಸಮಾಜಕ್ಕೆ ಅತ್ಯವಶ್ಯಕವಾಗಿವೆ.

೩.೨ ಸೋಮಲಿಂಗ ಕವಿಯ ಲಾವಣಿಗಳು

ಡಾ.ಸಿ.ಕೆ. ನಾವಲಗಿ ಅವರು ಸೋಮಲಿಂಗ ಕವಿಯ ಒಂದುನೂರಾ ಹತ್ತು ಲಾವಣಿ ಪದಗಳನ್ನು ಸಂಪಾದಿಸಿದ್ದಾರೆ. ಆನಂದ ಪ್ರಕಾಶನ ಬೈಲಹೊಂಗಲ. ಈ ಪುಸ್ತಕದ ಬೆಲೆ ೧೫೦. ಪುಟಗಳ ಒಟ್ಟು ಸಂಖ್ಯೆ ೧೭೦. ಶ್ರೀ ಸಿದ್ಧರಾಮ ಸ್ವಾಮಿಗಳು ರುದ್ರಾಕ್ಷಿ ಮಠ ನಾಗನೂರ, ಬೆಳಗಾವಿ. ಇವರು ಶುಭ ಸಂದೇಶ ನೀಡಿದ್ದಾರೆ ಪ್ರಸ್ತಾವಣೆ ಕೃತಜ್ಞತೆ ಕೊನೆಯ ಮಾತು ಡಾ.ಸಿ.ಕೆ.ನಾವಲಗಿ ಅವರೇ ಬರೆದಿದ್ದಾರೆ. ಸೋಮಲಿಂಗ ಕವಿಗಳ ಎರಡು-ಮೂರು ವರ್ಷಗಳ ಹಿಂದಿನ ಫೋಟೋ ಇದೆ. ಅವರ ಪತ್ನಿ ಜೊತೆಗಿನ ಫೋಟೋಇದೆ. ಲಾವಣಿ ಮೇಳಗಳಲ್ಲಿನ ಹಾಗೂ ಮಕ್ಕಳು-ಮೊಮ್ಮಕ್ಕಳು ಮರಿಮಕ್ಕಳೊಂದಿಗಿನ ಫೋಟೋ ಒಳಗೊಂಡಿದೆ.

ಶತಾಯುಷಿ ಹಿರಿಯ ಸ್ವಾತಂತ್ರ್ಯಯೋಧ ಹಾಗೂ ಜಾನಪದ ಕವಿ ಸೋಮಲಿಂಗ ಪ್ಪನವರಿಗೆ ಕರ್ನಾಟಕ ಜಾನಪದ ಪರಿಷತ್ ೨೦೧೨ ಫೆಬ್ರುವರಿ ೧೨ ರಂದು ರಾಜ್ಯ 'ಜಾನಪದ ಲೋಕ ಪ್ರಶಸ್ತಿ'ಯನ್ನು ಕರ್ನಾಟಕ ಜಾನಪದ ರಾಜ್ಯಾಧ್ಯಕ್ಷ ಶ್ರೀ ಟಿ.ತಿಮ್ಮೇಗೌಡ(ಐ.ಎ.ಎಸ್) ಪ್ರಧಾನ ಮಾಡುತ್ತಿರುವ ಫೋಟೋ ಇದೆ. ಉತ್ತರ ಪ್ರದೇಶದಲ್ಲಿ ಸನ್ಮಾನಿಸಿದಂತಹ ಫೋಟೋ ಇದೆ. ಹಾಗೂ ಕೇಂದ್ರ-ರಾಜ್ಯ ಸರ್ಕಾರಗಳು ಇತರ ಅನೇಕ ಸಂಘ ಸಂಸ್ಥೆಗಳು ಕೊಡಮಾಡಿದಂತಹ ಸನ್ಮಾನ ಹಾಗೂ ಪ್ರಶಸ್ತಿಗಳೊಂದಿಗೆ ಕಾಣಿಸಿಕೊಂಡಿದ್ದಾರೆ. ಪರಿವಿಡಿ ೪ ಪುಟ ಒಳಗೊಂಡಿದೆ. ಅವರು ಈಗಲೂ ಆರಾಮವಾಗಿ ಕಾಲಕಳೆಯುತ್ತಿದ್ದಾರೆ.

ಸೋಮಲಿಂಗ ಕವಿಯ ಲಾವಣಿಗಳ ಬಗ್ಗೆ ಹೇಳಬೇಕಾದರೆ 'ಹೇಳುವುದಕ್ಕಿಂತ ಮಾಡಿ ತೋರಿಸಬೇಕು' ಎಂಬಂತೆ ಹಾಡುವುದಕ್ಕಿಂತ ಅದರ ಸಂಪಾದನೆ ಮುಖ್ಯ. ಏಕೆಂದರೆ, ಗ್ರಾಮೀಣ ಜನರನ್ನು ಅಥವಾ ಹಿಂದುಳಿದ ಜನರನ್ನು ನಾವು ಮೇಲೆಕ್ಕೆತ್ತುವುದು ಬಹಳ ಮುಖ್ಯ. ಹೀಗೆ 'ಎಲೆಮರೆಯ ಕಾಯಿಯಂತೆ' ಎಲ್ಲೋ ಇದ್ದ ಈ ಸೋಮಲಿಂಗ ಕವಿಯನ್ನು ರಾಜ್ಯಮಟ್ಟದವರೆಗೂ ಪರಿಚಯಿಸಿದ ಕೀರ್ತಿ ಡಾ. ಸಿ.ಕೆ. ನಾವಲಗಿ ಅವರಿಗೆ ಸಲ್ಲುತ್ತದೆ.

ಈ ನೂರಾಹತ್ತು ಲಾವಣಿಗಳನ್ನು ಭಕ್ತಿ ಭಾವ ಐತಿಹಾಸಿಕ ಪೌರಾಣಿಕ ನಾಡು ರಾಷ್ಟ್ರ ಸಾಮಾಜಿಕ ಸಂಕೀರ್ಣ ಹೀಗೆ ವರ್ಗೀಕರಿಸಿಕೊಂಡು ಅದ್ಯಯನ ಮಾಡಲಾಗಿದೆ. ಈ ಎಲ್ಲ ಲಾವಣಿಗಳು ವೈವಿದ್ಯತೆಯಿಂದ ಕೂಡಿವೆ.ಇವುಗಳನ್ನು ಗಮನಿಸಿದಾಗ ಲಾವಣಿಗಳ ಸೊಗಸು

ಸೊಡಗು ಮಹತ್ವ ತಿಳಿದುಬರುತ್ತದೆ. ಡಾ.ಸಿ.ಕೆ.ನಾವಲಗಿ ಅವರು ಸೋಮಲಿಂಗ ಕವಿಯ ಲಾವಣಿಗಳನ್ನು ವರ್ಗೀಕರಣ ಮಾಡಿದ್ದರೆ ಮುಂದಿನ ಸಂಶೋಧನಾಕಾರರಿಗೆ ಅಧ್ಯಯನ ಕೈಗೊಳ್ಳಲು ಸುಲಭವಾಗುತ್ತಿತ್ತು.

ಹಲವಾರು ಜನ ಇವರಿಗಿಂತ ಹಿಂದೆ ಲಾವಣಿಗಳ ಸಂಗ್ರಹ, ಸಂಪಾದನೆ ಮಾಡಿದ್ದಾರೆ. ಆದರೆ, ಅವರಿಗಿಂತಲೂ ಡಾ. ಸಿ.ಕೆ.ನಾವಲಗಿ ಅವರ ಸಂಪಾದನೆ ವಿಶೇಷವೆಂದರೆ, ತಪ್ಪೇನಿಲ್ಲ. ಏಕೆಂದರೆ, ಒಬ್ಬನೇ ಒಬ್ಬನಿಂದ ೧೧೦ ಲಾವಣಿಗಳನ್ನು ಎರಡು-ಮೂರು ಸಲ ಹಾಡಿಸಿ ಸಂಗ್ರಹಿಸಿ ಕೈಯಿಂದ ಬರೆದುಕೊಂಡು ಮತ್ತೆ ತಿದ್ದಿ ಅವುಗಳನ್ನು ಸಂಪಾದನೆ ಮಾಡಿದ್ದು ಬೆಳಗಾವಿ ಜಿಲ್ಲೆಯಲ್ಲಿಯೇ ಮೊಟ್ಟಮೊದಲು ಎಂಬ ಹೆಗ್ಗಳಿಕೆಗೆ ಡಾ. ಸಿ.ಕೆ. ನಾವಲಗಿ ಅವರು ಪಾತ್ರರಾಗಿದ್ದಾರೆ. ಅಂದರೆ, ಇದರ ತಾತ್ಪರ್ಯ ಇಷ್ಟೇ- ಬೆಳೆದವರನ್ನು ಬೆಳೆಸುವುದು ದೊಡ್ಡದಲ್ಲ. ಹಿಂದುಳಿದವರನ್ನು ಮೇಲ್ಮಟ್ಟಕ್ಕೆ ತರುವುದು ಮಹಾಕೆಲಸ, ಇಂತಹ ಕೆಲಸವನ್ನು ನಮ್ಮ ಡಾ. ಸಿ.ಕೆ. ನಾವಲಗಿ ಅವರು ಮಾಡಿದ್ದಾರೆ. "ಏನೇ ಮಾಡಿದ್ದರೂ ಅದು 'ಹೊಸತನದಿಂದ' ಕೂಡಿರಬೇಕು ಎನ್ನುವ ಛಲ ಅವರಲ್ಲಿದೆ. ಹಾಡಿದ್ದ ಹಾಡು ಕಿಸಬಾಯಿದಾಸ" ಎಂಬಂತೆ ಆಗಬಾರದೆನ್ನುವುದು ಇವರ ಆಸೆ. "ಹಳ್ಳಿಯ ಬದುಕಿನ ಎದೆಯಿಂದ ಹೊಮ್ಮಿದ ಪದಗಳ ಒಂದು ಮೆದೆ ಈ ಲಾವಣಿ ಸಂಗ್ರಹ.[೧]" ಒಂದು ಕಾಲದಲ್ಲಿ ಸಮಾಜ ಶಿಕ್ಷಣದ ಒಂದು ಪ್ರಭಾವೀ ಮಾಧ್ಯಮವಾಗಿದ್ದ ಲಾವಣಿ ಪ್ರಕಾರ ಇಂದು ಅಧುನೀಕರಣದ ದಾಳಿಗೆ ಸಿಲುಕಿ ಗಾಳಿಗೋಪುರವಾಗುವ ಸನ್ನಿವೇಶದಲ್ಲೂ ಅದನ್ನು ಜೀವಂತ ವಾಗಿಟ್ಟಿರುವ ಕಲಾವಿದ ಬೈಲಹೊಂಗಲದ ಸೋಮಲಿಂಗಪ್ಪ ದೊಡವಾಡವರಾದರೆ ಜೀವಂತವಾಗಿದೆ. ಎಂದು ಸಾಕ್ಷಾಧಾರಗಳ ಮೂಲಕ ಜನಮನಕ್ಕೆಲ್ಲಾ ತೋರಿಸಿಕೊಟ್ಟ ಕೀರ್ತಿ ಕಿತ್ತೂರ ನಾಡಿನ ಜಾನಪದ ತಜ್ಞ ಡಾ.ಸಿ.ಕೆ.ನಾವಲಗಿ ಅವರು ನಮ್ಮ ಜಾನಪದ ಭಂಡಾರಕ್ಕೆ ಬೆಲೆಬಾಳುವ ಕಾಣಿಕೆ ಸಲ್ಲಿಸಿದ್ದು ಅರ್ಥಪೂರ್ಣ ವಾಗಿದೆ. ಆಗಾಧ ಲೋಕಾನುಭವ ಮತ್ತು ಅಸಾಧಾರಣ ಕವಿ ಪ್ರತಿಭೆಯ ಸೋಮಲಿಂಗಪ್ಪ ದೊಡವಾಡ ಅವರು ನಿಜಕ್ಕೂ ಹಾಡಿನ ಹಗೇವು ಆ ಹಗೇವು ಹೊಗೆಗೆ ಮುಸುಕಾಗಿ ಕಣ್ಮರೆಯಾಗದಂತೆ ಜನರತ್ತ ಕರೆದೊಯ್ದು ಕೀರ್ತಿ, ಹಾಗೂ ತಾನೊಬ್ಬನೇ ಬೆಳೆಯುವುದಕ್ಕಿಂತ ಇನ್ನೊಬ್ಬರನ್ನು ಬೆಳೆಸಿದ ಕೀರ್ತಿ ಡಾ.ಸಿ.ಕೆ.ನಾವಲಗಿ ಅವರಿಗೆ ಸಲ್ಲುತ್ತದೆ.ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಪಾಲುಗೊಂಡಿರುವ ಈ ಜನಪದ ಕವಿ ಸ್ವತಂತ್ರ್ಯ ಬಂದಾಗ ಜನಪದ ಗೀತ ದಿನನಿತ್ಯ ಬರೆದು ಹಳ್ಳಿ ಹಳ್ಳಿಗೆ ಪ್ರಚಾರ ಮಾಡಿ, ಕನ್ನಡ ನಾಡು ನುಣ್ಣಗೆ ತಿರುಗಿದ ನನ್ನ ಸೇವೆಯು ಸಫಲವಾಯಿತು ಎಂದಿರುವ ಈ ಸೋಮಲಿಂಗಪ್ಪ ನವರ ಹಾಡು ಲಾವಣಿ ಸಂಗ್ರಹ, ಸಂಪಾದನೆಯನ್ನು ಡಾ.ಸಿ.ಕೆ.ನಾವಲಗಿ ಅವರು ಮಾಡದಿದ್ದರೆ, ಎಷ್ಟೋ ಇಂದಿನ ಯುವಜನತೆಗೆ ಸ್ವಾತಂತ್ರ್ಯ ಹೋರಾಟದ ವಿಷಯದ ಅರಿವು ಆಗದೇ ಹೋಗುತ್ತಿತ್ತು , ಕಣ್ಮರೆಯಾಗುತ್ತಿತ್ತು.

೧ ಸೋಮಲಿಂಗ ಕವಿಯ ಲಾವಣಿಗಳು ಸಂ.ಡಾ.ಸಿ.ಕೆ.ನಾವಲಗಿ ಪ್ರ.ಆನಂದ ಪ್ರಕಾಶನ ಬೈಲಹೊಂಗಲ ಪ್ರ.೨೦೧೨ ಬೆನ್ನುಡಿ

ಇವರ ಹಾಡುಗಳನ್ನು ಕೇಳಿಯೇ, ಓದಿಯೇ ನನ್ನಂತಹ ಹಲವಾರು ಜನರ ಎದೆ ತಲ್ಲಣಗೊಳಿಸುತ್ತವೆ. ಇಷ್ಟೊಂದು ಮೈ-ರೋಮಾಂಚನಗೊಳ್ಳುವಂತಹ ಸನ್ನಿವೇಶಗಳೂ ಓದಿನ ಮುಖಾಂತರ ನಮ್ಮ ರೋಮುಗಳನ್ನು ನವಿರೇಳಿಸುತ್ತವೆ. ಇಂತಹ ವಿಷಯಗಳನ್ನು ಜನರಿಗೆ ಮನವರಿಕೆ ಮಾಡಿಕೊಟ್ಟಂತಹ ಕಾರ್ಯ ಡಾ. ಸಿ.ಕೆ. ನಾವಲಗಿ ಅವರ ಶ್ರಮ ಅಪಾರವಾದುದು ನಿಜಕ್ಕೂ ಡಾ.ಸಿ.ಕೆ.ನಾವಲಗಿ ಅವರ ಸಂಪಾದನೆ ಅವಿಸ್ಮರಣೀಯವಾದುದು. ಇವರ ಭಜನೆ ಹಾಡುಗಳು ತುಂಬಾ ಅರ್ಥಗರ್ಭಿತವಾದವುಗಳು. ಹೇಗೆಂದರೆ, ಪೌರಾಣಿಕ ಕತೆಗಳನ್ನು ಕಟ್ಟಬಲ್ಲರು, ಭಕ್ತಿ ಸ್ತ್ರೋತ್ರಗಳನ್ನು ಬರೆಯಬಲ್ಲರು, ಸ್ವಾತಂತ್ರ್ಯ ಗೀತೆಗಳನ್ನು ಮೊಳಗಿಸಬಲ್ಲರು. ಅವರ ರಚನೆಗಳ ಹಾಸು ವಿಸ್ತಾರ, ನುಡಿ ಸೊಗಡಿನ ಬೀಡು ಮನೋಹರ! ಅದೇ ರೀತಿ ಇಂದಿನ ಯುವ ಜನತೆಗೆ ತಕ್ಕ ಸಂಸಾರ ನೀತಿಯನ್ನು ಹೇಳಬಲ್ಲರು. ಆಧುನಿಕ ಅಗತ್ಯವನ್ನು ತಿಳಿಸಬಲ್ಲರು. ಇಂತಹ ಮಹಾನ್ ವ್ಯಕ್ತಿಗಳ ಬಗ್ಗೆ ಸಂಗ್ರಹ ಸಂಪಾದನೆಯಲ್ಲದೇ ಅರ್ಥಪೂರ್ಣವಾದ ರೀತಿಯಲ್ಲಿ ತಿದ್ದಿ ತೀಡಿ ಪ್ರಕಟಿಸಿರುವ ಕೀರ್ತಿ ಈ ಡಾ.ಸಿ.ಕೆ.ನಾವಲಗಿ ಅವರಿಗೆ ಸಲ್ಲುತ್ತದೆ. ಪ್ರತಿಯೊಂದನ್ನು ಅರ್ಥೈಸಿ ಹಿಂದೆ-ಮುಂದೆ ಆದದ್ದನ್ನು ಸರಿಪಡಿಸಿದರೆ, ಹಾಡಿನ ಲಯ ಕ್ರಮಬದ್ಧವಗಿರಬೇಕು. ಅದನ್ನು ವ್ಯಾಕರಣ ಬದ್ಧವಾಗಿ ಅದಕ್ಕೊಂದು ಸ್ಪಷ್ಟವಾದ ಶಾಸ್ತ್ರ ಚೌಕಟ್ಟು ಕೊಡುವ ಕೆಲಸ ಮಾಡಿದ್ದಾರೆ. ಡಾ.ಸಿ.ಕೆ.ನಾವಲಗಿ ಅವರ ಸಂಪಾದನೆ ಅರ್ಥಪೂರ್ಣವಾಗಿದೆ ಏಕೆಂದರೆ, ಡಾ.ಸಿ.ಕೆ.ನಾವಲಗಿ ಅವರು ಎಲ್ಲವನ್ನು ಸಂಗ್ರಹಿಸಿ, ಸಂಪಾದಿಸಿ, ಅದಕ್ಕೊಂದು ಶಾಸ್ತ್ರ ಚೌಕಟ್ಟು ನಿಡೀದ್ದಾರೆ.

ಈ ಭಜನೆ ಹಾಡುಗಳನ್ನು ಸಾಮಾಜಿಕ, ಸಾಂಸ್ಕೃತಿಕ, ಪೌರಾಣಿಕ ಹೀಗೆ ಬೇರೆ-ಬೇರೆ ಗುಂಪುಗಳಾಗಿ ವಿಂಗಡಿಸಿದ್ದರೆ ಓದಲಿಕ್ಕೆ ಅನುಕೂಲವಾಗುತ್ತಿತ್ತು. ಬೆಳಗಾವಿ ಜಿಲ್ಲೆಯೊಳಗೆ ಸೋಮಲಿಂಗ ಕವಿಗೆ ಮಾತ್ರ ೨೦೧೨ ಫೆ ೧೨ ರಂದು 'ಜಾನಪದಲೋಕ ಪ್ರಶಸ್ತಿ' ಸಿಕ್ಕಿದೆ. ಇವರನ್ನು ರಾಜ್ಯಮಟ್ಟದವರೆಗೂ ಪರಿಚಯಿಸಿದ ಕೀರ್ತಿ ಡಾ.ಸಿ.ಕೆ.ನಾವಲಗಿ ಅವರಿಗೆ ಸಲ್ಲುತ್ತದೆ ಸಂಪಾದನಾ ಶಾಸ್ತ್ರ ತಿಳಿದುಕೊಂಡು ಅವರು ಸಂಪಾದನಾ ಕಾರ್ಯ ತುಂಬಾ ಅಚ್ಚುಕಟ್ಟಾಗಿ ಮಾಡಿದ್ದಾರೆಂಬುದು ಸತ್ಯತನದಿಂದ ತಿಳಿದುಬಂದಿದೆ.ಈ ಸೋಮಲಿಂಗ ಕವಿಯನ್ನು ರಾಜ್ಯಮಟ್ಟದವರೆಗೂ ಪರಿಚಯಿಸಿದ್ದ ಡಾ.ಸಿ.ಕೆ.ನಾವಲಗಿ ಅವರ ಬಗ್ಗೆ ಹೇಳಬೇಕೆಂದರೆ "ಯಾವುದೇ ವ್ಯಕ್ತಿಯ ಸಾಧನೆಯನ್ನು ನಿರ್ಮಲ ಮನಸ್ಸಿನಿಂದ ನೋಡಬಹುದಾದ ಅರಿವು ಇದೆ. ಆ ಕಾರಣದಿಂದಾಗಿಯೇ ಜನಪದರೊಳಗೆ ಇರುವ ವ್ಯಕ್ತಿ[೧]" ಎಂದಿದ್ದಾರೆ.

<u>ಸೋಮಲಿಂಗ ಕವಿಯ ಪರಿಚಯ:</u> ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಮುರಗೋಡ ಪರಿಸರದ ಹೊಸೂರ ಗ್ರಾಮದ ದೊಡವಾಡ ಮನೆತನದ ಫಕೀರಪ್ಪನ ಮಗನೇ ಸೋಮ ಲಿಂಗಕವಿ. ದೊಡವಾಡರ ಪೂರ್ವಜರು ಬೆಳವಡಿ ಸಮೀಪದ ದೊಡವಾಡ ದವರು ಅಲ್ಲಿಂದ ಸೋಮಲಿಂಗನ ತಂದೆ ಹೊಸೂರಿಗೆ ಬಂದು ನೆಲೆಸಿದರು. ೧೪-೦೨-೧೯೧೧ ರಲ್ಲಿ ಸೋಮಲಿಂಗ ಇಲ್ಲಿಯೇ ಜನಿಸಿದರು. ಸೋಮಲಿಂಗ ಕವಿ ಈಗ ಬೈಲಹೊಂಗಲದಲ್ಲಿ ವಾಸಿಯಾಗಿದ್ದಾರೆ.

೧. ಜನಪದ ಕಥನ ಗೀತ ಸಂಚಯ ಡಾ.ಸಿ.ಕೆ.ನಾವಲಗಿ ಪ್ರ.ಕನಕ ಸಾಹಿತ್ಯ ಪ್ರತಿಷ್ಠಾನ(ರಿ) ಬೆಂಗಳೂರು ಪುಟ ೫೨

ಸೋಮಲಿಂಗಪ್ಪನಂಥ ನೂರಾರು ಜನಪದ ಹಾಡುಗಾರರು, ಕೋಟಿ-ಕೋಟಿ ಸ್ವಾತಂತ್ರ್ಯ ಯೋಧರ ಹೋರಾಟದ ಪ್ರತಿಫಲವಾಗಿ, ಗಾಂಧೀಜಿಯವರ ಮುಖಂಡತ್ವದಲ್ಲಿ ೧೯೪೭ ರಲ್ಲಿ ಭಾರತದೇಶ ಸ್ವತಂತ್ರವಾಯಿತು. ಸ್ವತಂತ್ರವಾದ ನಂತರದ ಸಂದರ್ಭದಲ್ಲಿ ಮತ್ತು ಅದಕ್ಕಿಂತ ಮುಂಚೆ ನಡೆದ ಹಲವಾರು ಅಹಿತಕರ ಘಟನೆಗಳು, ಸಮಾಜಕ್ಕೆ ತಿಳುವಳಿಕೆ ನೀಡುವ, ಬ್ರಿಟಿಷರಿಂದ ನಡೆದ ಮೋಸ, ವಂಚನೆ, ವಸೂಲಿ, ತೆರಿಗೆ, ಲಂಚ, ಹೀಗೆ ಹತ್ತ ಹಲವಾರು ಅವರ ಕಾರ್ಯಚಟುವಟಿಕೆಗಳನ್ನು ಅಚ್ಚಳಿಯದಂತೆ ಬರೆದು ಸಮಾಜದ ಕಣ್ಣು ತೆರೆಸಿದ್ದಾರೆ. ಸ್ವಾತಂತ್ರಕ್ಕಾಗಿ ಹಲವಾರು ಭಾರತೀಯ ಪ್ರಾಣತೆತ್ತಿದ್ದನ್ನು ಮರೆಯುವಂತಿಲ್ಲ. ಡಪ್ಪು ಬಾರಿಸುತ್ತಾ ಹಾಡುವ ಗೀ ಗೀ ಮೇಳದ ಮುಂದಾಳು ಸೋಮಲಿಂಗಪ್ಪನೇ, ಜೊತೆಗೆ ಪದಗಳನ್ನು ರಚನೆ ಮಾಡುತ್ತಿದ್ದ. ಇನ್ನೂರಕ್ಕೂ ಮಿಕ್ಕಿ ಗೀ-ಗೀ ಲಾವಣಿ ಜಾನಪದ ಹಾಡುಗಳನ್ನು ರಚಿಸಿದ್ದಾರೆ. ಹಲವಾರು ಗೀ-ಗೀ ಹಾಡುಗಾರ ಶಿಷ್ಯರ ಹುಟ್ಟಿಗೂ ಕಾರಣರಾದ ಇವರನ್ನು ಜನ ಸಹಜವಾಗಿ "ಗೀ-ಗೀ ಮಾಸ್ತರ" ಎಂದು ಕರೆಯುವುದುಂಟು.

ಶ್ರೀ ಬಿ.ಡಿ. ಜತ್ತಿ ಹಾಗೂ ಎಸ್.ನಿಜಲಿಂಗಪ್ಪನವರಂತಹ ಗಣ್ಯರೊಂದಿಗೆ ಬಸವ ಸಮಿತಿಯವರ ಜೊತೆಗೂಡಿ ೨೫ ದಿನಗಳ ಪಾದಯಾತ್ರೆಯಲ್ಲಿ ಹಂಪಿಯಿಂದ ಬಸವ ಕಲ್ಯಾಣದವರೆಗೆ ಪ್ರಯಾಣ ಕೈಗೊಂಡಾಗ ಉದ್ದಕ್ಕೂ ಸಂಗೀತ ಸೇವೆಗೈದು ಎಲ್ಲರ ಆಯಾಸ ನಿವಾರಿಸಿ ತಂಪು ನೀಡಿದವರು ಹೊಸೂರು ಸೋಮಲಿಂಗಪ್ಪನವರು ಸರಕರದ ವತಿಯಿಂದ ಅಖಿಲ ಭಾರತ ಪ್ರವಾಸ ಕೂಡಾ ಮಾಡಿದ್ದಾರೆ. ಈ ಕಾರ್ಯಕ್ರಮಕ್ಕೆ ಕರ್ನಾಟಕ ಸರಕಾರ ಆರಿಸಿದ ಹತ್ತು ಜನ ಕಲಾವಿದರಲ್ಲಿ ಬೆಳಗಾವಿ ಜಿಲ್ಲೆಯನ್ನು ಪ್ರತಿನಿಧಿಸಿದ ಏಕಮೇವ ವ್ಯಕ್ತಿ ಸೋಮಲಿಂಗ ಕವಿ ಆಗಿದ್ದಾರೆಂಬುದು ಗಮನಾರ್ಹ. ಸೋಮಲಿಂಗಪ್ಪ ನೂರರ ಸಮೀಪ ಬಂದರೂ ಕಣ್ಣು ಮಂಜಾಗಿಲ್ಲ, ಹಲ್ಲು ಉದರಿಲ್ಲ, ಸೊಂಟ ಬಾಗಿಲ್ಲ, ಎಂದಿನಂತೆ ಹೊಲ-ಮನೆಗೆ ಓಡಾಡುತ್ತಾರೆ. ಜನಪದ ಗೀತೆಗಳನ್ನು ಈಗಲೂ ರಚಿಸುತ್ತಾರೆ. ಮೂಲ ಧಾಟಿಯಲ್ಲಿ ಹಾಡುತ್ತಾರೆ. ಸ್ವಾತಂತ್ರ್ಯ ಸಮರದ ಗತ ಇತಿಹಾಸವೆಲ್ಲ ಇವರ ನಾಲಿಗೆಯ ಮೇಲೆ ನಲಿಯುತ್ತದೆ. ಜ್ಞಾಪಕ ಶಕ್ತಿ ಉಡುಗಿಲ್ಲ. ಎತ್ತರದ ಕೆಂಪು ದೇಹದ ಈ ವ್ಯಕ್ತಿ ಗಾಂಧಿ ಟೊಪ್ಪಿಗೆ, ಖಾದಿ ಅಂಗಿ, ಖಾದಿ ದೋತರದಲ್ಲಿ ನಮ್ಮ ಹಳ್ಳಿಯ ಸಂಸ್ಕೃತಿಯ ಪ್ರತಿನಿಧಿಯಂತಿದ್ದಾರೆ.

ಸೋಮಲಿಂಗ ಕವಿ ಧರ್ಮಪತ್ನಿ ಬಸವಣ್ಣೆವ್ವನ ಸೇವೆ, ಸಹಾಯ ಸಹಕಾರಗಳೇ ಇವರ ಉತ್ತಮ ಆರೋಗ್ಯಕ್ಕೆ ಜನಪದ ಕಲೆಯ ಬೆಳವಣಿಗೆಗೆ ಕಾರಣ. ಮೂರು ಜನ ಗಂಡು ಮಕ್ಕಳು (ಮಡಿವಾಳಪ್ಪ, ಈರಪ್ಪ ಹಾಗೂ ಫಕೀರಪ್ಪ) ಇಬ್ಬರು ಹೆಣ್ಣು ಮಕ್ಕಳು ಹಾಗೂ ಎಂಟು ಜನ ಮೊಮ್ಮಕ್ಕಳು ಚಹಾ, ಕಾಫಿ, ಈಗಲೂ ಮುಟ್ಟುವುದಿಲ್ಲವರು. ಚಳುವಳಿಯ ಸಂದರ್ಭದಲ್ಲಿ ಚಹ ಕುಡಿಯುವುದನ್ನು ಬಿಡಿಸಲು ಒಂದು ಸರಳ ಪದ್ಯವನ್ನೇ ಬರೆದು ಹಾಡಿದವರು. ಅದು ಹೀಗೆ ಶುರುವಾಗುತ್ತದೆ.

"ಶರಣು ಶರಣು ಚಾದುರ್ಗಿ

ಭೆಟ್ಟಿಯಾದಿ ಎಲ್ಲರಿಗಿ"

ಸೋಮಲಿಂಗಪ್ಪನವರು ಚಳುವಳಿಯಲ್ಲಿ ಬರೆದ ಮೊದಲ ಹಾಡಿದು. ಇಂತಹ ಹಲವಾರು ಲಾವಣಿ, ಗೀಗೀ ಸಂಪ್ರದಾಯದ ಗೀತೆಗಳನ್ನು ಬರೆದಿದ್ದಾರೆ, ಹಾಡಿದ್ದಾರೆ. ಮೇಳದಲ್ಲಿ ಹಾಡಿಸಿದ್ದಾರೆ. ಆದರೆ, ಅನುಭವದ ನೆಲೆಯಲ್ಲಿ ತೋಚಿದಂತೆ ಗೀಚಿದ ಗೀಗಿ ಪದ ರಚನೆಗಳನ್ನು ಕಾಯ್ದಿಟ್ಟಿಲ್ಲ. ಗಾಳಿಗೆ ತೂರಿ ಬಿಟ್ಟಿದ್ದಾರೆ. ತೂರಿದ ಕೆಲವು ಮಾತ್ರ ಮನೆ ಸೇರಿವೆ. ಅವುಗಳನ್ನು ಮೊಮ್ಮಕ್ಕಳ ಕೈಯಿಂದ ಪುನಃ ನಕಲು ಮಾಡಿಸುತ್ತಿದ್ದಾರೆ. ಕೆಲವೊಂದು ನೆನಪಿನಾಳದಿಂದ ಪುನರ್ರಚಿಸುತ್ತಿದ್ದಾರೆ. ಆದರೆ, ಬಹಳಷ್ಟು ಕಳೆದುಕೊಂಡಿದ್ದಾರೆ.

ಒಂದೆಡೆ ಎಲ್ಲವನ್ನು ಸಂಗ್ರಹಿಸಿಟ್ಟಿದ್ದರೆ ಲಾವಣಿ ಗೀಗಿ ಸಂಪ್ರದಾಯಕ್ಕೆ ಸೋಮಲಿಂಗಪ್ಪನವರದು ಬಹುದೊಡ್ಡ ಕೊಡುಗೆಯಾಗುತ್ತಿತ್ತು. ಆದರೆ ಅಳಿದುಳಿದ ಗೀತೆಗಳನ್ನಾದರೂ ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸಬೇಕೆಂದು ಅವರ ಮಗ ಡಾ. ಫಕೀರಪ್ಪನವರ ಆಲೋಚಿಸಿದ್ದಾರಂತೆ. ಅವರು ಆಲೋಚಿಸಿದಂತೆಯೇ ಆದರೆ ಸೋಮಲಿಂಗಪ್ಪನವರ ಕೊಡುಗೆ ಮರೆಯಲಾರದಂತದ್ದು. ಈಗಲಾದರೂ ಸೋಮಲಿಂಗ ಕವಿಯ ಲಾವಣಿ ಹಾಡುಗಳು ಸಮಾಜಕ್ಕೆ ಕೊಟ್ಟ ಮಹತ್ವದ ಕೊಡುಗೆಗಳಾಗಿವೆ

೨.೧ ಭಕ್ತಿ-ಭಾವ

"ಮೊದಲಿಗ ಸ್ತೋತ್ರ ಚಂದ

ಸಭೆಯೊಳಗೆ ಮಂದಿ ಚೆಂದ"

ಎಂಬಂತೆ ಸೋಮಲಿಂಗ ಕವಿಗಳ ಭಜನೆ ಹಾಡುಗಳು ಪ್ರಮುಖವಾಗಿವೆ. ಸೋಮಲಿಂಗ ಕವಿ ಅವರು ಇಂದಿರಾಗಾಂಧಿ ಎದುರಿಗೆ ಕನ್ನಡಮ್ಮನ ಸ್ತೋತ್ರ ಹೇಳಿ ಅವರ ಮೆಚ್ಚುಗೆಗೆ ಪಾತ್ರರಾಗಿ ಹದಿನೈದು ಸಾವಿರ ನಗದು ಬಹುಮಾನ ಪಡೆದದ್ದು ನಮ್ಮ ಕನ್ನಡಮ್ಮನ ಕೀರ್ತಿ ಪತಾಕೆ ಹೆಚ್ಚಿದೆ. 'ಹೆಣ್ಣು ಭ್ರೂಣ ಹತ್ಯೆ' ಇದು ಕಾನೂನು ಬಾಹಿರವಾದರೂ ಇಂತಹ ಕೃತ್ಯಗಳನ್ನು ಎಸಗಬಾರದೆಂದು ಇಂದಿನ ಜನತೆಗೆ ಇದು ಪೂರಕವಾಗಿದ. ಒಬ್ಬ ಕುರಿ ಕಾಯುವ ವ್ಯಕ್ತಿಯಾದರೂ ಆತನ ಭಕ್ತಿ, ಅಭಿಮಾನ ಮೆಚ್ಚುವಂತದ್ದು, ಅಂದರೆ ಇಲ್ಲಿ ಮಾನವನ ಭಾವ ಭಕ್ತಿಗೆ ಏನೂ ಕಡಿಮೆ ಇಲ್ಲ. ಸತ್ಯ ನಿಷ್ಠೆ ಎಲ್ಲೆ ಇದ್ದರೂ ದೇವರು ಒಲಿಯುತ್ತಾನೆ. ಅಕ್ಕಮಹಾದೇವಿಯನ್ನು ನಾವು ಇಂದು ಆಧುನಿಕ ಮಹಿಳೆಗೆ ಹೋಲಿಸಿ ನೋಡಿದಾಗ ಪೂರಕವಾಗಿರುವಂತಹ ಮಾತು ಕಂಡು ಬರುತ್ತದೆ. "ಹುಟ್ಟಿ ಸಾಯುವ ಗಂಡನನ್ನು ಒಪ್ಪಲಾರೆ" ಎಂಬುದು ಇವಳು ಮಲ್ಲಿಕಾರ್ಜುನನಲ್ಲಿ ಇಟ್ಟ ಭಕ್ತಿ ಎದ್ದು ಕಾಣುತ್ತದೆ. ಇಲ್ಲಿ ಭಕ್ತಿಗೆ ಹೆಚ್ಚಿನ ಪ್ರಧಾನವಿದೆ. ಮಾನವನ ಆಸೆಗೆ ಮಿತಿ ಇಲ್ಲವೇ ಇಲ್ಲ ಆದ್ದರಿಂದ 'ಕಾಯಕವೇ ಕೈಲಾಸ' ಎಂಬ ನಂಬಿಕೆಯಿಂದ ದುಡಿಯಬೇಕು. ದೇವರು ನಾವು ಮಾಡುವ ಕಾಯಕದಲ್ಲಿ ಇರುವುದನ್ನು

ಮನಗಾನಬೇಕು. ಚೆನ್ನಮ್ಮ, ಬೆಳವಡಿಮಲ್ಲಮ್ಮ ಇವರು ಇಂದಿನ ಸ್ತ್ರೀಯರಿಗೆ ಆದರ್ಶಪ್ರಿಯರಾಗಿದ್ದಾರೆ. "ತೊಟ್ಟಿಲ ತೂಗುವ ಕೈ ಜಗತ್ತನ್ನೇ ತೂಗಬಲ್ಲಳು" ಎಂಬುವುದಕ್ಕೆ ಇವರೇ ಸಾಕ್ಷಿ. ಬ್ರಿಟಿಷರ್ ವಿರುದ್ಧ ಹೋರಾಡಿ ಮರಣ ಹೊಂದಿದ ಚೆನ್ನಮ್ಮ ಹರಹರ ಮಹಾದೇವ ಘೋಷಣೆಯಿಂದ ರೊಚ್ಚಿಗೆದ್ದು, ಬ್ರಿಟಿಷರನ್ನು ರಾಕ್ಷಸರಂತೆ ಚೆಂಡಾಡಿದಳು. ಅದೇ ರೀತಿ ಜೈ 'ವೀರಭದ್ರ' ಎಂಬ ಘೋಷಣೆಯಿಂದ ಶಿವಾಜಿ ಸೈನ್ಯ ಸೋಲಿಸಿದ್ದು ಶಿವಾಜಿಯಿಂದ 'ಶಹಭಾಷ್' ಬಿರುದು ಪಡೆದ ಮಹಿಳೆ ಇವರಿಂದ ಕನ್ನಡ ನಾಡಿನ ಕೀರ್ತಿ ಪತಾಕೆ ಗಗನಕ್ಕೇರಿತು.

<u>**೨.೨ ಐತಿಹಾಸಿಕ :**</u> ನಮ್ಮ ದೇಶ ರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ಮುಡುಪಾಗಿಟ್ಟಂತಹ ಜನರನ್ನು ನಾವು ಇಂದಿನ ಪೀಳಿಗೆಯವರು ಸದಾ ಅವರ ಸ್ಮರಣೆಯಿಂಧ ತಿಳಿದುಕೊಳ್ಳಬೇಕಾಗಿದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮತ್ತು ದೇಶ ರಕ್ಷಣೆಗಾಗಿ ಹೋರಾಟದಲ್ಲಿ ಮುಳುಗಿ ಅನೇಕ ಕಷ್ಟ ನಷ್ಟ ಸಾವುಗಳ ಮಧ್ಯ ಸಿಲುಕಿ ಇಂದಿನ ಯುವಜನರಿಗೆ ಪ್ರೇರಣೆಯನ್ನು ಒದಗಿಸಿಟ್ಟಂತಹ ಮಹಾನ್ ವ್ಯಕ್ತಿಗಳ ಚರಿತ್ರೆಯನ್ನು ನಮ್ಮ ಕಣ್ಮುಂದೆ ತೆರೆದಿಟ್ಟ ಮಹಾನ್ ವ್ಯಕ್ತಿ ಈ ಶತಮಾನ ಕಂಡ ಸೋಮಲಿಂಗ ಕವಿಗಳ ಪಾತ್ರ ತುಂಬಾ ಮಹತ್ವದ್ದಾಗಿದೆ.

ಈ ಅನೇಕ ಜನರ ಹೋರಾಟ, ಪ್ರಾಣ ತ್ಯಾಗ ನಮ್ಮ ಮನ ಮೈ-ರೋಮಾಂಚನ ಗೊಳ್ಳುತ್ತದೆ. ಇಂದಿನವರು ಹಿಂದಿನವರನ್ನು ಸ್ಮರಿಸಿ, ಅವರ ಆದರ್ಶಗಳನ್ನು ಮರೆಯಬೇಕಿದೆ. ಅವರು ಬ್ರಿಟಿಷರ ವಿರುದ್ಧ ಹೋರಾಡಿ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟರು. ನಮ್ಮ ದೇಶದ ಘನತೆ, ಗೌರವ ಹೆಚ್ಚಿಸಿದ್ದಾರೆ. ಅಂತವರಲ್ಲಿ ಮಹಾತ್ಮ ಗಾಂಧಿಜೀ, ಕಿತ್ತೂರ ಚೆನ್ನಮ್ಮ, ಸುಭಾಷ ಚಂದ್ರ ಭೋಸ್ ಮುಂತಾದವರು ದವರು ಆಗಿದ್ದಾನೆ. ಅಂಬೇಡ್ಕರರು ದಲಿತರ ಬಗ್ಗೆ ಹೋರಾಡಿದ್ದು ಭಾರತದ ಸ್ವಾತಂತ್ರ್ಯಕ್ಕಾಗಿ ಹಲವಾರು ವೀರರು-ಯೋಧರು ಮರಣ ಹೊಂದಿದರು. ಅದೇ ರೀತಿ ೧೯೪೨ ಚಳುವಳಿಯಲ್ಲಿ ಹಲವಾರು ಪೋಲಿಸರ ಬಲಿ ತೆಗೆದು ಕೊಂಡಿದ್ದನ್ನು ನಾವಿಂದು ಮಣಗಾನಬೇಕಿದೆ. ಹೆಣ್ಣು ಹುಟ್ಟಿದರೆ ಕಿತ್ತೂರ ಚೆನ್ನಮ್ಮನಂತಿರಬೇಕು ಎನ್ನುತ್ತಾರೆ. ಇದು ಅವರ ಶೌರ್ಯತನದಿಂದ ಹೋರಾಡಿ ವೀರಮರಣ ಹೊಂದಿದವರ ಕೀರ್ತಿ ಹೆಚ್ಚಿಸುತ್ತದೆ. 'ಉಂಡ ಮನೆಗೆ ಎರಡು ಬಗೆಯಂತೆ' ಚನ್ನಮ್ಮನ ಕಡೆಯವರೇ ಕುತಂತ್ರದಿಂದ ಮೋಸ ಮಾಡಿದ್ದು ಎಂತಹ ಅಹಿತಕರ ಘಟನೆಗೆ ಬಲಿಯಾದಳು ಎಂಬುವುದನ್ನು ಅರಿಯಬೇಕು.

ಡಾ. ಸಿ.ಕೆ.ನಾವಲಗಿ ಅವರ 'ಚೆನ್ನವ್ವನ ಪದ' ಎಂಬ ಭಜನೆ ಹಾಡು ಈ ಕಿತ್ತೂರ ಚನ್ನಮ್ಮನ ಗುಂಪಿಗೆ ಸೇರಿದವಳು ಅಲ್ಲ. ಇವಳು ಆಧುನಿಕ ಹೆಣ್ಣು ಮಗಳು. ಇವರನ್ನು ಮುಂದಿನ ೧೮ನೇ ಶತಮಾನಕ್ಕೆ ಸೇರಿದವಳು. ಆದ್ದರಿಂದ ಇವರ ಗುಂಪಿಗೆ ಸೇರಿಸಿರುವುದು ಸರಿಯಿಲ್ಲ. ಆದರೆ ಸಿ.ಕೆ. ನಾವಲಗಿಯವರು ಅವಸರದ ಕಾರಣದಿಂದ ಏನೋ ಅವರು ಮರೆತು ಈ ಕಿತ್ತೂರ ಚೆನ್ನಮ್ಮನ ಗುಂಪಿಗೆ ಇವಳನ್ನು ಸೇರಿಸಿಕೊಂಡಿದ್ದಾರೆ. ಇದು ಅಷ್ಟೊಂದು ಸರಿಯೆನಿಸುವುದಿಲ್ಲ. ಇವಳು ಆಧುನಿಕ ಹೆಣ್ಣು ಮಗಳು.

ಗಾಂಧೀಜಿಯವರು 'ಶಾಂತಿ ಅಹಿಂಸೆ' ಮಾರ್ಗದಿಂದಲೇ ದೇಹಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದು ಮಹತ್ವದ ಸಂಗತಿಯಾಗಿದೆ. "ಸಿಟ್ಟು ನಮ್ಮ ವೈರಿ, ಶಾಂತಿ ಪರರ ವೈರಿ" ಎಂಬಂತೆ ಶಾಂತಿಯಿಂದಲೇ ನಮ್ಮ ದೇಶ ರಕ್ಷಣೆ ಮಾಡಿದ್ದು ಉತ್ತಮಕರವಾಗಿದೆ.

"ಆಡಿದಂತೆ ನಡೆ" ಎಂಬಂತೆ ಮಾನವ ಜಾತಿ ಗುಲಾಮರಾಗಿ ಬದುಕುವುದು ಒಳಿತಲ್ಲ ಎಂಬಂತೆ ಇಂಗ್ಲೀಷರಿಗೆ ೧೯೨೪ ರಲ್ಲಿ ಕರೆಕೊಟ್ಟ ತನ್ನ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಿ ನಮ್ಮನ್ನು ಇಂದು ಆನಂದದ ಬುಗ್ಗೆಯಲ್ಲಿ ಮುಳುಗಿಸಿದ್ದಾರೆ. ಒಂದು ಕ್ಷಣ ಬ್ರಿಟಿಷರ ಆಳ್ವಿಕೆಯಲ್ಲಿ ನಿಂತು ನೋಡಿದರೆ ನಾವಿಂದು ಏನಾಗಿರುತ್ತಿದ್ದೆವೋ ಏನೋ ಅದನ್ನು ನೆನೆಸಿಕೊಂಡು ಇಂದು ಜೀವಿಸಬೇಕಿದೆ.

'ಸಿಂಹವನ್ನು ಬೋನಿನಲ್ಲಿಟ್ಟರೆ ಅದು ಸಹಿಸಲು ಸಾಧ್ಯವೆ' ಹೀಗೆ ಅವರು ಬೋಸರು ಜೈಲಿನಲ್ಲಿದ್ದರೂ ಬ್ರಿಟಿಷರ ವಿರುದ್ಧ ಕಿಡಿ ಕಾರಿದ್ದು ತಾಯಿನಾಡಿನ ಸೇವೆ ಮಾಡಿ ಸಾಯುವೆ ಎಂಬ ಶಪತ ಮಾಡಿ ವೀರಮರಣ ಹೊಂದಿದವರು ಇಂತವರ ಆದರ್ಶಗಳನ್ನು ನಾವು ಇಂದು ಮರೆಯಬೇಕಾಗಿದೆ.

ದೀನ-ದಲಿತರಿಗಾಗಿ ತಮ್ಮ ಪ್ರಾಣವನ್ನು ಮುಡುಪಾಗಿಟ್ಟರು. ಆದ್ದರಿಂದಲೇ ಇಂದು ಇಷ್ಟು ಚೇತರಿಸಿಕೊಳ್ಳಲು ಕಾರಣವಾಗಿದೆ. "ದೇಶ ಸೇವೆಯೇ ಈಶ ಸೇವೆ" ಎಂಬುವುದನ್ನು ಅಂದಿನ ಜನಮನಗಾಣಿದ್ದರು. ಮಮತೆಯ ಮಕ್ಕಳಾಗಿ ಪ್ರಾಣ ಬಿಟ್ಟಂತಹ ವ್ಯಕ್ತಿಗಳನ್ನು ನೆನಪಿಸಿಕೊಟ್ಟಂತಹ ಸ್ವತಃ ಇಂತವರ ಜೊತೆಗೆ ತಾವು ಒಬ್ಬರಾಗಿ ಹೋರಾಡಿ ಜೈಲಿಗೆ ಹೋಗಿ ಸಾಕಷ್ಟು ಕಷ್ಟ ನಷ್ಟ ಅನುಭವಿಸಿಯೇ ಇಂತಹ ಮಹಾನ್ ಲಾವಣಿ ಹಾಡುಗಳನ್ನು ಕಟ್ಟಿದ್ದಾರೆ. ಇಂತಹ ಲಾವಣಿ ಪದಗಳು ಇಂದು ತುಂಬಾ ಪ್ರಯೋಜನವಾಗಿದೆ. ಅದೇ ರೀತಿ ಸಂಪಾದನಕಾರಕ ಕಾರ್ಯ, ಶ್ರಮ, ಇಲ್ಲಿ ಮನಗಾಣಬೇಕಿದೆ.

"ಶಕ್ತಿಗಿಂತ ಯುಕ್ತಿ ಮೇಲು" ಎಂಬ ತತ್ವ ಅಳವಡಿಸಿ ಸ್ವಾತಂತ್ರ್ಯ ಗಳಿಸಿದರು. ಭಾರತದ ಜನರಿಗೆ ಬಡತನ ಬಹಳ. ಹಾಗಾಗಿ ತುಂಡು ಬಟ್ಟೆ ಧರಿಸಲಿಕ್ಕೂ ಅವರಿಗೆ ಆಗದೇ, ಇದ್ದುದರಿಂದ ಗಾಂಧೀಜಿ ಅದನ್ನರಿತು ಖಾದಿ ಗ್ರಾಮೋದ್ಯೋಗ ತಯಾರಿಸಿದ್ದು ಭಾರತದಲ್ಲಿ ತಮ್ಮ ಕೆಲಸ ತಾವೇ ಮಾಡಿಕೊಳ್ಳಬೇಕೆಂದು ಕರೆಕೊಟ್ಟರು.

ಬ್ರಿಟಿಷರ ಮೋಸ, ವಂಚನೆಯಿಂದ ಬುದ್ಧಿಕಲಿತ ಚೆನ್ನಮ್ಮ "ಒಗ್ಗಟ್ಟಿನಿಂದ ನೆಲೆಸಿದರೆ ಮಾತ್ರ ನಮಗೆ ಉಳಿಗಾಲ" ಎಂಬ ತತ್ವವನ್ನರಿತು ನಡೆದಳು. "ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಅಂದಹಾಗೆ" ಇಂದಿನ ಯುಜನತೆಗೆ ಸ್ವಾತಂತ್ರ್ಯ ತಂದು ಕೊಟ್ಟರೂ ಅದರ ಸದುಪಯೋಗ ಪಡೆಯದೇ ಇದ್ದುದರಿಂದ ಇವರ ಲಾವಣಿ ಹಾಡುಗಳ ಮುಖಾಂತರ ಸೋಮಲಿಂಗ ಕವಿ ತಿಳಿಸಿ ಹೇಳಿದ್ದಾರೆ ಇದು ತುಂಬಾ ಮಹತ್ವದ್ದು. ಇಂದಿನ ಯುವಜನತೆಗೆ ಹೊಸ ನಾಡು ಕಟ್ಟುವ ಜವಾಬ್ದಾರಿ ಇಲ್ಲವೇ ಇಲ್ಲ ಎನ್ನುವ ಮಾತು ಮನವರಿಕೆಯಾಗಬೇಕಿದೆ. ರಾಷ್ಟ್ರಭದ್ರತೆ ಕಟ್ಟಬೇಕಾಗಿದೆ. ಇಂದಿನ ಪೀಳಿಗೆಯು ಹಿಂದಿನ ಆದರ್ಶಗಳನ್ನು ಪಾಲಿಸಬೇಕಿದೆ.

೨.೩ ಪೌರಾಣಿಕ : ಇಂದಿನ ಪೌರಾಣಿಕ ಕಥೆಗಳು ಕಣ್ಮರೆಯಾಗುವುದನ್ನು ನೋಡುತ್ತೇವೆ. ಇಂತಹ ಕಥಾವಸ್ತು, ಇಂದಿನ ಯುವಜನತೆ ತಿಳಿಯಬೇಕಾದದ್ದು ಅವಶ್ಯವಾಗಿದೆ. 'ದ್ರೌಪದಿ' ಪೌರಾಣಿಕ ದಲ್ಲೂ ಇಂದಿನ ಆಧುನಿಕ ಯುಗದಲ್ಲೂ ದ್ರೌಪದಿ ಹೆಸರು ಅಜರಾಮರ ಹಾಗೂ ಸದಾ ರಾರಾಜಿಸುವಂತದ್ದು ಏಕೆಂದರೆ, ಪಂಚ ಪಾಂಡವರ ಪತ್ನಿಯಾಗಿ ಅವಳು ಪಲ್ಲಕ್ಕಿಯೊಳಗೆ ಕೂಡ್ರಬೇಕಾದವಳು. ಆದರೆ ಪಂಚ ಪಾಂಡವರ ಅಘನಕಾರ್ಯದಿಂದ ಅವಳ ಮನಸ್ಸು ನುಚ್ಚು ನೂರಾಗಿಸುತ್ತದೆ. "ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ" ಎಂಬ ನಾಚಿಕೆಗೇಡಿತನದ ಸ್ವಭಾವ ಎದ್ದು ಕಾಣುತ್ತದೆ. ಇವಳು ಇಂದಿನ ಪತಿವ್ರತಾ ಸ್ತ್ರೀಯರಿಗೆ ಆದರ್ಶಪ್ರಾಯವಾಗಿದ್ದಾಳೆ. ಆದ್ದರಿಂದ ಇಂದು ಇಂತಹ ಪೌರಾಣಿಕ ಕಥೆಗಳು ಮಹತ್ವ ಪಡೆದುಕೊಂಡಿವೆ.

೨.೪ನಾಡು-ರಾಷ್ಟ್ರ: ನಮ್ಮ ನಾಡು ಜಗತ್ತಿನಲ್ಲಿಯೇ ಶ್ರೇಷ್ಠವಾದದ್ದು ಕನ್ನಡ ನಾಡು ಎಂದು ಹೇಳುವುದರಲ್ಲೇ ನಾವು 'ಅಭಿಮಾನ'ವನ್ನು ಕಾಣುತ್ತೇವೆ. ಕನ್ನಡ ನಡೆ ನುಡಿ ನಮ್ಮೆಲ್ಲರನ್ನೇ ಬೆರಗುಗೊಳಿಸುವಂತದ್ದು. ಕನ್ನಡದ ಚೆಲುವು, ಸೌಂದರ್ಯ, ಸೊಬಗು ಹೇಳಲು ವರ್ಣಿಸಲು ಅಸಾಧ್ಯವಾದುದು. 'ನಮ್ಮ ನಾಡು ಕನ್ನಡ, ನಮ್ಮ ನುಡಿಯೂ ಕನ್ನಡ' ಎಂಬಂತೆ, ಕನ್ನಡ ಕೀರ್ತಿ ಪತಾಕೆ ಇಂದಿಗೂ, ಎಂದೆಂದಿಗೂ, ಆಕಾಶದೆತ್ತೆರಕ್ಕೆ ಹಾರುವಂತದ್ದು.

ಕನ್ನಡಮ್ಮನ ಸುತರಾಗಿ ನಾವು ತಾಯಿಗೆ ಕರುಣೆ, ಪ್ರೀತಿ, ವಿದ್ವಾಂಸ ಇವುಗಳಿಂದ ಅವಳ ಮನಸ್ಸನ್ನು ಗೆಲ್ಲಬೇಕು. ಇಲ್ಲದಿದ್ದರೆ ಅವಳು ಸಹಿಸಲಾರಳು ಎಂಬುದನ್ನು ಕುರಿತು ಜೀವಿಸಬೇಕಾಗಿದೆ. ಕನ್ನಡ ನಾಡು ಪುಣ್ಯ ಭರತಭೂಮಿ. ಚೆಲುವ ಕನ್ನಡ ನಾಡು ಸಿರಿಗಂಧದ ಬೀಡು. ಪ್ರಪ್ರಥಮವಾಗಿ ನಾವು ಏನೇ ಮಾತನಾಡಬೇಕಾದರೆ ಕನ್ನಡಾಂಬೆಯ ಸ್ತೋತ್ರ ಪ್ರಾಮುಖ್ಯತೆ ಪಡೆದುಕೊಂಡಿದೆ. ಅದೇ ರೀತಿ ಇಂದು ನಾವು ಭಾಷಾಭಾಂಧವ್ಯ ಮೆರೆಯಬೇಕಿದೆ. ನಮ್ಮ ಗಡಿನಾಡು ಬೆಳಗಾವಿಯ ಮೇಲೆ ಮೊದಲಿನಿಂದಲೂ ಬೇರೆಯವರ ಕಣ್ಣುಬಿದ್ದಿದೆ. ಅದನ್ನು ನಾವು ಎಚ್ಚರದಿಂದ ನೋಡಿ ಉಳಿಸಿಕೊಳ್ಳುವ ಕಾರ್ಯ ಇಂದಿನ ಜನತೆ ಮಾಡಬೇಕಿದೆ. ಹೀಗೆ ಕನ್ನಡಾಂಬೆ, ಕನ್ನಡತಾಯಿ, ಕನ್ನಡಗಡಿ, ನಮ್ಮ ಚೆಲುವು ಕನ್ನಡ ನಾಡು ಮುಂತಾದವುಗಳನ್ನು ನಾವಿಂದು ಹೆಮ್ಮೆಯಿಂದ ಕಾಪಾಡಿಕೊಂಡು ಬರಬೇಕಿದೆ. ಕನ್ನಡ ನಾಡಿನ ಮಹಿಮೆಯನ್ನು ಎಷ್ಟು ವರ್ಣಿಸಿದರೂ ಅಸಾಧ್ಯ. ಅದು ಶ್ರೇಷ್ಠವಾದದ್ದು ಹಿಂದೆಯೂ, ಇಂದು, ಮುಂದೆಯೂ ಇದು ತನ್ನದೇ ಆದ ಮಹತ್ವವನ್ನು ಪಡೆದುಕೊಂಡು ಬರುತ್ತದೆ. ಅದನ್ನುಳಿಸಿಕೊಂಡು ಹೋಗುವ ಜಬಾಬ್ದಾರಿ ಇಂದಿನವರಿಗೆ ಇರಬೇಕಿದೆ ಎನ್ನುವುದನ್ನು ತಮ್ಮ ಲಾವಣಿಗಳ ಮುಖಾಂತರ ತಿಳಿಸಿ ಹೇಳಿದ್ದು ಮಹತ್ವಪೂರ್ಣವಾಗಿದೆ. ಅದೇ ರೀತಿ ಇಂತಹ ಸಂಪಾದನಾ ಕಾರ್ಯ ಮೆಚ್ಚುವಂತದ್ದು.

ಕರ್ನಾಟಕದಲ್ಲಿ 'ಗಡಿನಾಡು' ಎನಿಸಿಕೊಂಡ ಬೆಳಗಾವಿ ಕೀರ್ತಿ ಆಕಾಶದತ್ತೆರಕ್ಕೆ ಹಾರಿವೆ. ಈ ನಾಡಿನ ಹಿರಿಮೆ ವರ್ಣಿಸಲು ಪದಗಳೇ ಸಾಲುತ್ತಿಲ್ಲ. ಈ ನಾಡಿನ ಹಿರಿಮೆ ವರ್ಣಿಸಲು ಪದಗಳೇ ಸಾಲುತ್ತಿಲ್ಲ ಎನ್ನುವ ಭಾಸವಾಗುತ್ತದೆ. ತ್ಯಾಗವೀರರು ಜನಿಸಿದ ನಾಡು, ಧುಮುಕಿ ಹರಿಯುವ ಜಲಧಾರೆ, ಸರಿಗಮ ಸಂಗೀತದ ನಾದ, ಶಿಲಾಶಾಸನ, ಕದಂಬದೊರೆ ಮೆಟ್ಟಿದ

ನಾಡು. ಗುಡಿಗುಂಡಾರ ಮಸೀದಿ ಹತ್ತಿ ಗಿರಣಿಗಳು ಇತ್ಯಾದಿ ಮುಂತಾದವುಗಳನ್ನೆಲ್ಲದರಲ್ಲೂ ಬೆಳಗಾವಿ ನಾಡು ಕಲೆಗಳ ಬೀಡು ಎಂಬಂತೆ ಇಂದು ಇದರ ಮಹತ್ವ ಹೆಚ್ಚಿಸಿದೆ.

೨.೩ ಸಾಮಾಜಿಕ: ದುಷ್ಚಟ ಆರೋಗ್ಯಕ್ಕೆ ಹಾನಿಕರ ಎಂಬುದು ಮೊದಲಿನಿಂದಲೂ ಹಿರಿಯರು ಕಿರಿಯರಿಗೆ ಮಾರ್ಗದರ್ಶನ ಮಾಡುತ್ತಲೆ ಬಂದಿದ್ದಾರೆ. ಆದರೂ ಇಂದಿನ ಯುವಜನತೆ ಅದಕ್ಕೆ ಜೋತುಬಿದ್ದು, ತಮ್ಮ ಕಾಲ ಮೇಲೆ ತಾವೇ ಕಲ್ಲು ಚೆಲ್ಲಿಕೊಂಡಂತೆ ಆಗಿತ್ತು. ಆದರೆ ಇಂದು ಸರ್ಕಾರ ಸ್ವಲ್ಪ ಎಚ್ಚೆತ್ತುಕೊಂಡು ಪಾನಗಳನ್ನು ನಿಷೇಧಿಸಿದ್ದು ಮಹತ್ವದ ಸಂಗತಿಯಾಗಿದೆ. ಮಾನವ ನೀತಿ ನಿಯಮವನ್ನು ಅರಿಯಬೇಕು. ನಾವು ಇಂದು ಗೋಹತ್ಯೆ ಮಾಡಿ ಪಾಪದಲ್ಲಿ ಮುಳುಗುವುದನ್ನು ತಿಳಿಯಬೇಕು. ಯಾವುದೇ ಹೆಣ್ಣುಮಕ್ಕಳಿಗೆ ಎಚ್ಚರವಹಿಸಿದ ಮಾತಾಗಿದೆ "ಮೈತುಂಬ ಕಣ್ಣು" ಇರಬೇಕು ಎಂಬುದು ಇಂದಿನ ಸ್ತ್ರೀಯರಿಗೆ ಹೇಳಿಮಾಡಿಸಿದಂತಹ ಮಾತು. ನಮ್ಮ ಆರೋಗ್ಯ ಎಷ್ಟು ಮುಖ್ಯವೋ ಅಷ್ಟೇ ಮನೆ ಸ್ವಚ್ಛತೆಯ ಕಡಗೆ ಗಮನವಿದ್ದರೆ ಮನೆಯ ಎಲ್ಲವೂ ಆರೋಗ್ಯವಾದಂತೆ. ನಾವು ಮಾಡುವ ಅನ್ಯಾಯಗಳು ನಮ್ಮ ಬೆನ್ನು ಹಿಂದೆಯೇ ತಟ್ಟುತ್ತವೆ ಎನ್ನುವುದು "ಪಾಪದಿಂದ ದೀಪವುಳಿಯೋದಿಲ್ಲ ಎಂಬ ಇವರ ಲಾವಣಿ ಪದ ಶ್ರೇಷ್ಠವಾದದ್ದು. ಇಂದು ನಾವೆಲ್ಲರೂ ಅರಿಯಬೇಕಾದಂತಹ ಸಂಗತಿ ಎಲ್ಲ ದಾನಕ್ಕಿಂತ ರಕ್ತದಾನ ಶ್ರೇಷ್ಠ".

"ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಮೇಲು" ರೈತರು ರಾಷ್ಟ್ರದ ಬೆನ್ನುಲುಬು ಎಂಬುದು ಇಂದು ನಾವು ಮರೆಯಬಾರದು. ರೈತರ ಸ್ಥಿತಿ ಇಂದು ದಹನೀಯವಾಗಿದೆ. ನಾವು ಸದೃಢವಾಗಿರಬೇಕಾದರೆ ಎಲುಬಿನ ಹಂದರ ಸದೃಡವಾಗಿರಬೇಕು. ಅಂದರೆ ಇದರ ತಾತ್ಪರ್ಯ ರೈತ ಗಟ್ಟಿಯಾಗಿ ಇದ್ದರೆ ಇಂದು ನಮಗೆಲ್ಲಾ ಉಳಿಗಾಲ ರಾಷ್ಟ್ರ ಭದ್ರವಾಗಿರಲು ಇವರ ಪಾತ್ರ ಪ್ರಮುಖವಾದದ್ದು. 'ಕಸ ತಿನ್ನುವುದಕ್ಕಿಂತ ತುಸು ತಿನ್ನುವುದು ಲೇಸು' ಆರೋಗ್ಯ ಪೂರ್ಣವಾಗಿರಲು ಮಾನವ ಇವರ ಲಾವಣಿಗಳನ್ನು ಅರಿಯಬೇಕು. ಇಂದಿನ ಜನಸಂಖ್ಯಾ ಸ್ಫೋಟ ಅತೀ ಮಹತ್ವದ ವಿಚಾರ. "ಒಂದೇ ಮಗು ಇದ್ದರೆ ಸಂತೋಷ ಸಂಸಾರ" ಒಂದು ಕುಟುಂಬಕ್ಕೆ ಒಂದೇ ಸಾಕು ಬಹಳ ಮಕ್ಕಳನ್ನು ಹೆತ್ತರೆ ದಿಕ್ಕು ತಪ್ಪುವುದು ಸಂಸಾರದಲ್ಲಿ ಎಂದು ಹೇಳಿದ್ದು ನಿಜವಾಗಿದೆ.

ಇಂದಿನ ದಿನಮಾನಗಳಲ್ಲಿ ಹೊಸ ಹೊಸ ತಂತ್ರಜ್ಞಾನಗಳಿಂದ ಕುಟುಂಬ ಯೋಜನೆ ಹಾಕಿಕೊಂಡ ಆನಂದದ ಜೀವನ ನಡೆಸುವುದು ಉಚಿತ. ಹಲವಾರು ರೋಗಗಳಿಗೆ ತುತ್ತಾಗದಂತೆ ಮೊದಲೇ ರಕ್ಷಣೆ ವಹಿಸಿಕೊಳ್ಳಬೇಕು. ತಾಯಿಯಾದವಳು ಅಧುನಿಕತೆಗೆ ಮಹತ್ವಕೊಟ್ಟು ತನ್ನ ಕರುಳಬಳ್ಳಿಯನ್ನೇ ಮರೆಯುವಂತಾಗಿದೆ. ಇಂದು ಮಕ್ಕಳ ಪಾಲನೆ ಪೋಷಣೆ ಹೆಚ್ಚಾಗಿ ತಾಯಿಯ ಕೆಲಸವಾಗಿದೆ. ಅನಿವಾರ್ಯವೆಂದು ತಿಳಿಯುವದಕ್ಕಿಂತ ಅವಳ ಪಾಲಿನ ಕರ್ತವ್ಯವು ಆಗಿದೆ. ಅದೇ ರೀತಿ "ಮಕ್ಕಳನ್ನು ಹೆತ್ತರೇ ಸಾಲದು" ಅವುಗಳ ಆರೋಗ್ಯ, ಅದಕ್ಕಿಂತಲೂ ಮೊದಲು ತನ್ನ ಆರೋಗ್ಯ ಕಾಪಾಡಿಕೊಳ್ಳಬೇಕು. ಇಂದು ಸರ್ಕಾರ ಏನೆಲ್ಲಾ ಸಹಾಯ ಮಾಡಲಿಕ್ಕೆ ಮುಂದಾಗಿದೆ. ಆದರೆ ನಾವು ಅದರ ಸದುಪಯೋಗ ತೆಗೆದುಕೊಳ್ಳುವುದಿಲ್ಲ. 'ಪೋಲಿಯೋ ಹನಿ'

ಇಂದು ಪ್ರತಿಯೊಂದು ಮಗುವಿಗೆ ಕಡ್ಡಾಯವಾದ್ದರಿಂದ ಹಲವಾರು ರೋಗ – ರುಜಿನುಗಳಿಗೆ ನಾಂದಿ ಹಾಡಲಾಗಿದೆ ಇದು ಅತ್ಯಾವಶ್ಯಕವಾದುದು.

ಇಂದಿನ ಆಧುನಿಕ ಯುಗದಲ್ಲಿ ಸಜ್ಜನರನ್ನು ಕಾಣುವುದು ವಿರಳ. ಕಾಲು ಕೆಟ್ಟು ಹೋಗಿದೆ. ಆದ್ದರಿಂದ ನಮಗೆ ಸಾವಿರಕ್ಕೈದು ಮಂದಿ ಸಜ್ಜನರು ಸಿಗಬಹುದು ಎಂಬ ಮಾತು ಇಂದಿನ ಯುವಜನತೆ ಕರಾಳಮುಖವನ್ನು ತೋರಿಸುವಂತದ್ದು. ತಂತ್ರಜ್ಞಾನ ಯುಗದಲ್ಲಿ ಕೃಷಿ ಸಲಕರಣೆಗಳು ಲಭ್ಯ ಅದರ ಸದುಪಯೋಗ ತೆಗೆದುಕೊಂಡರೆ "ಆಳಾಗಿ ದುಡಿದು ಅರಸನಾಗಿ ಉಣ್ಣಬಹುದು" ಕಸದಲ್ಲಿ ರಸ ತೆಗೆಯುವ ಕೆಲಸ ಮಾಡಬೇಕಿದೆ. ಭೂಮಿ ಮಾತ್ರ ಎಷ್ಟು ಇದೆ ಅಷ್ಟೇ ಇದೆ. ಆದರೆ ಜನಸಂಖ್ಯೆ ಬೆಳೆಯುತ್ತಿದೆ. ಇದರ ಹಾನಿ ಮೊದಲೇ ಅರಿತು 'ಹತ್ತು ಹಡೆಯುವುದಕ್ಕಿಂಥ ಮುತ್ತಿನಂತಹ ಒಂದು ಮಗು ಸಾಕು' ಎಂಬುದನ್ನು ಅರಿಯಬೇಕಾಗಿದೆ. ಗರ್ಭಿಣಿ ಮಹಿಳೆಗೆ ವಿಶೇಷವಾಗಿ ಅವಳ ಆರೋಗ್ಯದ ಬಗ್ಗೆ ಕಾಳಜಿ ಮಹತ್ವದ್ದಾಗಿದೆ. ಎ-ವಿಟ್ಟಾಮಿನ್ ನಂತಹ ಆಹಾರ ಸ್ವೀಕರಿಸಬೇಕೆಂದು ಕಿವಿಮಾತು ಹೇಳಿದ್ದು ಉಪಯುಕ್ತ.

"ತಾಯಿಯ ಎದೆಹಾಲು ಅಮೃತ" ಇದಕ್ಕಿಂತ ಮಿಗಿಲಾದದ್ದು ಯಾವುದು ಇಲ್ಲವೆಂಬ ಮಾತು ಅರಿತು ಮಕ್ಕಳ ಪಾಲನೆ ಪೋಷಣೆ ನಡೆಯಬೇಕಿದೆ. ಕೆಟ್ಟ ರೋಗ ಏಡ್ಸದಂತೆಯೇ ಮತ್ತೊಂದು ಭೂತ ನಮ್ಮನ್ನು ಆವರಿಸಿಕೊಂಡಿದೆ. ವರದಕ್ಷಣಿಯ ಭೂತದಿಂದ ತಪ್ಪಿಸಿಕೊಳ್ಳಲು ಇಂದಿನ ಮಹಿಳೆಯರೆಲ್ಲಾ ಸುಶಿಕ್ಷಿತರಾಗಬೇಕಿದೆ. ಆಧುನೀಕರಣದತ್ತ ಮಾನವ ವಾಲಿದರೂ ಇಂದು ಹೆಣ್ಣು ಮಕ್ಕಳ ಕಷ್ಟ ತಪ್ಪಿಲ್ಲ.

ಹದಿನಾಲ್ಕು ವರ್ಷದ ಒಳಗಿನ ಮಕ್ಕಳನ್ನು ದುಡಿಯಲಿಕ್ಕೆ ಕಳುಹಿಸುವುದು, ದುಡಿಸಿಕೊಳ್ಳುವುದು ಮಹಾ ಅಪರಾಧ ಎನ್ನುವುದು ಗೊತ್ತಿದ್ದರೂ ಇಂದು ಮಾನವ-ಹೂವು ಅರಳುವ ಮುನ್ನವೇ ಹೊಸಕಿ ಹಾಕಿದಂತಿದೆ ಎಂದು ರವೀಂದ್ರನಾಥ ಠಾಕೂರ್ ಹೇಳಿದ್ದು ಬಾಲಕರಿಗಾದ ಅನ್ಯಾಯ ಸಾರಿ ಹೇಳಿದಂತಿದೆ.

ಇಂದಿನ ವಿದ್ಯಮಾನಗಳಲ್ಲಿ ಪತಿ-ಪತ್ನಿ ಹೊರಗೆ ಸಮನಾಗಿ ದುಡಿಯುತ್ತಿದ್ದಾರೆ. ಆದರೆ ಮನೆಯ ಕೆಲಸ ಕಾರ್ಯಗಳಲ್ಲಿ ಸಮನಾಗಿ ದುಡಿಯುವ ಅಧಿಕಾರ ಇದೆ. ಅದನ್ನು ಇಂದಿನ ಪುರುಷ ಕಲಿಯಬೇಕಾದುದು ಅವಶ್ಯ. ಇಬ್ಬರೂ ಸಮಾನತೆಯಿಂದ ದುಡಿಯುವುದು ಅನಿವಾರ್ಯವಾಗಿದೆ. ಶಿಕ್ಷಣದ ಮೂಲ ಪ್ರತಿಯೊಬ್ಬರೂ ಅರಿಯಬೇಕಾಗಿದೆ. "ಶಿಕ್ಷಣಂ ಸರ್ವತ್ರ ಸಾಧನಂ" ವಿದ್ಯೆಯೇ ಉದ್ಯೋಗದ ಮೂಲವಯ್ಯ ಎಂಬಂತೆ ಗಂಡು ಹೆಣ್ಣು ಸಮನಾಗಿ ಬೇಧವಿಲ್ಲದೇ ಶಿಕ್ಷಣ ಕಲಿತು 'ಉದ್ಯೋಗಂ ಪುರುಷ ಲಕ್ಷಣಂ' ಎಂಬುದು ಹೋಗಿ ಉದ್ಯೋಗಂ ಸರ್ವರ ಲಕ್ಷಣಂ ಎಂಬಂತೆ ನಾವೆಲ್ಲರೂ ಇಂದು ತಿಳಿಯಬೇಕಿದೆ.

ಶಿಕ್ಷಣವೇ ಶಕ್ತಿ ಶಿಕ್ಷಣವೇ ಜೀವನ ಚಿನ್ನಕ್ಕಿಂತ ಅನ್ನಲೇಸು. ಅನ್ನಕ್ಕಿಂತ ಅಕ್ಷರ ಲೇಸು. ಎಲ್ಲ ಶಕ್ತಿಗಿಂತ ಶಿಕ್ಷಣವೆಂಬ ಶಕ್ತಿ ಮೇಲು ಅದಕ್ಕೆ ಪ್ರತಿಯೊಬ್ಬರೂ ಈ ಶಕ್ತಿಯನ್ನು ಅರಿತು

ಬಾಳಬೇಕು.ಒಟ್ಟು ಎಂಟು ನವರಸಗಳಲ್ಲಿ 'ಹಾಸ್ಯರಸ' ಪ್ರಮುಖ ಸ್ಥಾನ ಪಡೆದುಕೊಂಡಿದೆ. ಏಕೆಂದರೆ, ತಾವು ನಗುವುದಕ್ಕಿಂತ ಇನ್ನೊಬ್ಬರನ್ನು ನಗಿಸುವುದು ಲೇಸು. 'ನಗು' ಎಂಬುದು ಜೀವನದ ಮಹತ್ವದ ವಿಷಯವಾಗಿದೆ ಏಕೆಂದರೆ ನಗು ನಮ್ಮ ಆಯುಷ್ಯವನ್ನು ಹೆಚ್ಚಿಸುತ್ತದೆ. "ಶೌಚಾಲಯಗಳಿಲ್ಲದ ಮನೆಗೆ ಹೆಣ್ಣು ಕೊಡುವುದಿಲ್ಲ" ಎಂಬ ಸ್ಪಷ್ಟ ನಿರ್ಧಾರ ಇಂದು ಗ್ರಾಮೀಣ ಜನರ ಸ್ವಚ್ಛತೆ ರೋಗರುಜಿನಗಳಿಂದ ಕಾಪಾಡುವುದು ಇದರ ಮಹತ್ವವಾಗಿದೆ. ರೋಗದಿಂದ ಮುಕ್ತಿ ಪಡೆಯಬೇಕಾದರೆ ಮನೆಗೊಂದು ಶೌಚಾಲಯ ಇರಲೇಬೇಕು ಇಂದಿನ ತರುಣಿಯರ ಮನಸ್ಸನ್ನು ಶತ ಆಯುಷ್ಯಗಾರರು ಬಲ್ಲರು ಎಂಬುದಕ್ಕೆ ಪ್ರತ್ಯಕ್ಷ ಸಾಕ್ಷಿ ಈ ಸೋಮಲಿಂಗ ಕವಿಗಳು ಫ್ಯಾಷನ್ ಹೆಣ್ಣಿನ ವರ್ಣನೆಯಿಂದ ತಿಳಿಯಬಹುದಾಗಿ ಇಂದಿನ ಪುರುಷ ಮಹಿಳೆಗೆ ಮರುಳಾಗಿ ಬಲಿ ಬೀಳಬಾರದೆಂದು ಹೇಳಿದ್ದು ಪುರುಷರ ಅಡ್ಡ ದಾರಿ ತಪ್ಪಿಸಿದಂತಾಗಿದೆ ಇಂದು ವಯಸ್ಸಾದ ದನಗಳು ವೃದ್ಧ ತಂದೆ ತಾಯಿಗಳಿದ್ದಂತೆ. ಅವುಗಳನ್ನು ನಾವು ರಕ್ಷಿಸಲೇಬೇಕು. ಫಲಕೊಡದೆ ಇದ್ದರೂ ಉಳಿದ ಮಕ್ಕಳಿಗೆ ತಾಯಿಯಾಗಿ ನೀತಿ ನಡೆ-ನುಡಿ ಕಲಿತಿರುವುದು ನಾವು ಹಿಂದಿನ ಹಿರಿಯರಿಂದಲೇ. ಆದ್ದರಿಂದ ಅವುಗಳ ರಕ್ಷಣೆ ಮರೆಯಬಾರದು. ಆಧುನಿಕ ಯುಗದಲ್ಲಿ ಆಧುನಿಕತೆಯತ್ತ ಹೊರಳಿದ ಹೆಣ್ಣು ಮಕ್ಕಳು ಮೈತುಂಬ ಎಚ್ಚರವಾಗಿರಬೇಕಾಗುತ್ತದೆ. ಅದಕ್ಕೆ ಹೇಳಿರುವುದು. "ಕಾಲು ಜಾರಿದರೆ ವನವಾಸ ತಂಗಿ" ಈಗಾಗಲೇ ಎಷ್ಟೋ ಹೆಣ್ಣು ಮಕ್ಕಳ ಜೀವನ ನೀರುಪಾಲಾಗಿದೆ. ಅದನ್ನರಿತು ಮುಂದಿನ ಪೀಳಿಗೆ ಹೆಜ್ಜೆ ಜಾರದಂತೆ ಮೀನಮೇಷ ಏಣಿಸಿ ಹೆಜ್ಜೆ ಇಡಬೇಕಾಗಿದೆ. ಪುರುಷನ ಹಿಂದೆ ಸ್ತ್ರೀ ಇದ್ದೇ ಇರುತ್ತಾಳೆ ಪರರ ವಸ್ತುವಿಗೆ ಆಸೆ ಪಟ್ಟರೆ "ಪರಹೆಣ್ಣು ದೂರಿನ ಹಣ್ಣು ಇದ್ದಂತೆ" ಅದು ಬೇಗನೆ ಅಷ್ಟು ಸುಲಭವಾಗಿ ನಿಲುಕಲಾರದು.

ನಾವು ಆಧುನಿಕತೆಯತ್ತ ಮುಖ ಮಾಡಿ ಆಧುನಿಕ ತಂತ್ರಜ್ಞಾನದತ್ತ ಒಲವು ತೋರಿಸಿ ತಾತ್ಕಾಲಿಕ ಜನ ನಿಯಂತ್ರಣ ತಡೆಗಟ್ಟುವ ಉಪಯುಕ್ತ ಕೆಲಸ ಮಾಡಬೇಕಿದೆ. ಸಮಾಜದಲ್ಲಿ ಜನ ಎಷ್ಟು ಕಷ್ಟ ನೋವು ಅನುಭವಿಸುತ್ತಾರೋ ಅಷ್ಟೇ ಸಂತೋಷ, ಪರಮಾನಂದವನ್ನೂ ಕಾಣುತ್ತೇವೆ. ಅದಕ್ಕೆ ಹೇಳಿರುವುದು ಜೀವನವೆಂದರೆ 'ಕಷ್ಟ-ಸುಖ ಎರಡೂ ಸಮ' ಗ್ರಾಮೀಣ ಜನತೆ ಜಾತ್ರೆ ಹಬ್ಬ ಹರಿದಿನಗಳಲ್ಲಿ ಅವರು ಮನರಂಜನೆಯಲ್ಲಿ ತೊಡಗುತ್ತಾರೆ. ಅದು ಅವರ ಪಾಲಿಗೆ ಬೆಟ್ಟದಷ್ಟು ಆನಂದ ಸುಖ ಸಾಗರದಲ್ಲಿ ಮುಳುಗುತ್ತಾರೆ. 'ದೇವದಾಸಿ' ಹೆಸರಿನಲ್ಲಿ ಇಂದು ಅನೇಕ ಹೆಣ್ಣು ಮಕ್ಕಳ ಜೀವನ ನರಕಾಗಿದೆ. ಈ ಮೂಢನಂಬಿಕೆಯಿಂದ ಜನ ಇನ್ನೂ ಎಚ್ಚೆತ್ತಗೊಂಡಿಲ್ಲ ಎಂಬುದು ಮಡಿವಾಳಜ್ಜನ ಲಾವಣಿಯು ಸಾರುತ್ತದೆ.

<u>**೨.೬ ಸಂಕೀರ್ಣ:**</u> 'ಲಂಚ' ಆಧುನಿಕತೆಯ- ಆಧುನಿಕ ವಿಷಯದಂತಾಗಿದೆ. ಲಂಚದ ವಿಷಯ ಬಿಟ್ಟರೇ ಜೀವನವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಬೆಳೆದಿದೆ. ಲಂಚ, ಭ್ರಷ್ಟಾಚಾರ ಇವೆಲ್ಲ ಇಂದು ಸಾಮಾನ್ಯವೆಂದು ಜನರು ತಿಳಿದು ಜೀವಿಸುತ್ತಾರೆ. ಆದರೆ ಇಂದು ಭ್ರಷ್ಟಾಚಾರದ ವಿರುದ್ಧ ಹೋರಾಡುವ ಭಾರತದ ಮುಖಂಡ ಅಣ್ಣಾ ಹಜಾರೆ ನೇತೃತ್ವದಲ್ಲಿ ಸಾಕಷ್ಟು ಚಳುವಳಿ ನಡೆದರೂ ನ್ಯಾಯ ಸಿಗಲಿಲ್ಲ. ಹಾಗಾಗಿ ಇಂದು ಭ್ರಷ್ಟಾಚಾರ ಎಲ್ಲಿಗೆ, ಯಾವಾಗ, ಏನು ಬೇಕಾದರೂ ಮಾಡಲಿಕ್ಕೆ ಸಿದ್ಧವಾದಂತಿದೆ. ಅದೇ ರೀತಿ "ನೀರು ಇಲ್ಲದೇ ಜೀವನವಿಲ್ಲ" ಜೀವನವಿಲ್ಲದೇ ನೀರು

ಇಲ್ಲ ಎಂಬಂತೆ ನೀರು ನಮಗೆ ಅತ್ಯವಶ್ಯಕವಾದ ವಸ್ತುವಾಗಿದೆ. ಸರ್ಕಾರ ಮಲಪ್ರಭಾ ಯೋಜನೆ ಸಾಕಷ್ಟು ಖರ್ಚು ಮಾಡಿ ನಷ್ಟ ಅನುಭವಿಸಿದೆ. ಆದರೂ ಇಂದಿನ ರೈತ ಅದರ ಸದುಪಯೋಗ ಪಡೆದರೆ– ನಷ್ಟವಾಗಿದ್ದಕ್ಕೆ ಪರಿಹಾರ ಸಿಕ್ಕಂತಾಗುತ್ತದೆ.

"ಇಲ್ಲಿ ಮೂಗುತಿಗಿಂತ ಮೂಗು ಮುಖ್ಯ" ಸತ್ಯ ಅಹಿಂಸೆ, ಶಾಂತಿ–ಸಹಬಾಳ್ವೆಯಿಂದ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮನನ್ನ (ಮೂಗು) ಮರೆತ ಅನ್ಯಾಯ, ದೌರ್ಜನ್ಯ, ಅಹಿಂಸೆ ಅಸತ್ಯದಿಂದ ನಡೆಯುವ ಜನರು ಮೂಗಿಗೆ ಬಂಗಾರದ ನತ್ತು ಮಾಡಿಸಿ ಕೊಟ್ಟವರನ್ನು ನೆನೆದರೆ ಏನು ಪ್ರಯೋಜನ ಎಂಬುದು ಇಂದಿನ ಯುವಜನತೆ ಯೋಚಿಸಿ ಮುನ್ನಡೆಯಬೇಕಿದೆ. ವಿಜ್ಞಾನ ನಿತ್ಯ ಪರಿವರ್ತನಶೀಲವಾದದ್ದು ಇದಕ್ಕೆ ಉದಾಹರಣೆ ಸಾಕಷ್ಟಿವೆ. ದಿನದಿಂದ ದಿನಕ್ಕೆ ಬದಲಾವಣೆ ಹೊಂದುವಂತದ್ದು ಕಲಿಯುಗದ ಕಾಲದಲ್ಲಿ ನಾವು ಕ್ಷಣಾರ್ಧದಲ್ಲಿಯೇ ಜಗತ್ತನ್ನು ಸುತ್ತಬಹುದು. ನಮ್ಮ ಭಾರತವೂ ಇದಕ್ಕೆ ಹೊರತಾಗಿಲ್ಲ. ಮಾನವ ಮೊದಲು ಸ್ಥಳದಿಂದ ಸ್ಥಳಕ್ಕೆ ಅಲೆದ, ಮರದಿಂದ ಮರಕ್ಕೆ ನೆಗೆದ, ನಂತರ ಮೀನಿನಂತೆ ಈಜಲು ಕಲಿತ, ಹಕ್ಕಿಯಂತೆ ಹಾರಾಡುವುದನ್ನು ಕಲಿತ. ಹೀಗೆ ವಿಜ್ಞಾನ ತಂತ್ರಜ್ಞಾನದ ಬಳಕೆಯಿಂದ ಮಾನವ ಏನೆಲ್ಲಾ ಸಾಧಿಸಬಲ್ಲ. "ಕಾಲವನ್ನು ತಡೆಯುವವರು ಯಾರೂ ಇಲ್ಲ ಎಂಬಂತೆ" ಇಂದು ತಿಳಿದುಬರುತ್ತದೆ.

ಭಾರತದ ವಿರುದ್ಧ ಪಾಕಿಸ್ತಾನ ನಡೆದುಕೊಂಡ ರೀತಿ ಮುಯ್ಯಿಗೆ ಮುಯ್ಯಿ ಎಂಬಂತೆ ಇತ್ತು. ವಿಮಾನ ಅಪಹರಣ ಕೆಲಸ ಕಾರ್ಗಿಲ್ ಯುದ್ಧದ ಸೇಡು ತೀರಿಸಿಕೊಳ್ಳಲು ಪುರುಷ ಪುರುಷರಂತೆ ಕಾರ್ಯ ಮಾಡಿ ಪುರುಷವೆನಿಸಿಕೊಳ್ಳಬೇಕು. ಷಂಡರಂತೆ ಕೆಲಸ ಮಾಡಿದ್ದು ಇಂತಹ 'ಬೆದರಿಕೆಗೆ ಬಗ್ಗಲಾರದು ಭಾರತ' ಎಂಬ ಅರಿವು ಇಲ್ಲದೇ ಮಾಡಿತು.

ಆದ್ದರಿಂದ ಸೋಮಲಿಂಗ ಕವಿಯ ಲಾವಣಿ ಹೇಳುವುದಿಷ್ಟೇ–ಯಾವಾಗಲೂ ಭಾರತದವರು ಎಚ್ಚರದಿಂದಿರಬೇಕು ಭಾರತದ ಒಂದು ಸವಾಲೇನೆಂದರೆ, "ತಪ್ಪು ಮಾಡೋದಿಲ್ಲ– ಮಾಡಿದರೆ ಬಿಡುವುದಿಲ್ಲ" ಇದು ಇದರ ಷರತ್ತಾಗಿದೆ. ಈ ಭಾರತದ ವಿಮಾನ ಅಪಹರಣ ಕೆಲಸ ಹೇಗಾಗಿತ್ತು ಎಂದರೆ, ಆನೆಗೆ ಶ್ವಾನ ಬಗಳಿದಂತೆ "ಕೈಯಿಂದ ನೀಗದಕ್ಕೆ ಮೈಯಲ್ಲಾ ಪರಚಿಕೊಂಡಂತೆ" ಮನಸ್ಸಿದ್ದೆಡೆ ಮಾರ್ಗ ಎಂಬಂತೆ ಸಾವಿರ ಹಾಡಿನ ಸರದಾರ ಎಂದು ಕರೆಯಿಸಿಕೊಂಡ ಹುಕ್ಕೇರಿ ಬಾಳಪ್ಪನವರ ಕೀರ್ತಿ ಪತಾಕೆ ಇಡೀ ಕರ್ನಾಟಕದಲ್ಲಿ ನಾಡಿನ ತುಂಬೆಲ್ಲಾ ಹರಡಿದೆ. ಇವರು ಹಾಡುತ್ತಿದ್ದುದ್ದು ನಿಜ. ಆದರೆ, ಇವರು ಸೋಮಲಿಂಗ ಕವಿಯ ಹತ್ತಿರ ಬರೆಯಿಸಿಕೊಂಡು ಅವರು ಹಾಡುತ್ತಿದ್ದರು. ಸ್ವತಃ ಬರೆದು ಹಾಡುತ್ತಿರಲಿಲ್ಲ ವೆನ್ನುವುದು ನಿಜ.

ಇಲ್ಲಿ ಹೇಳಿರುವ ಒಂದೊಂದು ಪದಗಳು ಅವರ ಅನುಭವದ ಮಾತುಗಳಾಗಿವೆ. ಇವರ ಲಾವಣಿಗಳನ್ನು ಗಮನಿಸಿದರೆ, ನಾವು ಇನ್ನೂ ಅರಿಯಬೇಕಾದದ್ದು ಬಹಳಷ್ಟಿದೆ. ಇವರ ಲಾವಣಿ ಹಾಡುಗಳಿಂದ ಇಂದಿನ ಯುವಜನತೆ ಹಾದಿ ತಪ್ಪದಂತೆ ಎಚ್ಚರ ವಹಿಸಿದ್ದು ತುಂಬಾ ಮಹತ್ವಪೂರ್ಣವಾಗಿದೆ.

ಇವರ ಎಲ್ಲ ಲಾವಣಿಗಳನ್ನು ಗಮನಿಸಿದರೆ ಇಂದಿನ ಜನರ ಎಲ್ಲ ಒಳ ಹೊರಗಳನ್ನು ಅರಿತು ಬರೆದದ್ದು. ಶತಾಯುಷಿಯಾದರೂ ಹದಿನೆಂಟರ ಹರಿಯದಂತೆ ಕಾಣುತ್ತಾರೆ. ಸಮಾಜ ಸುಧಾರಣೆ, ದೇಶರಕ್ಷಣೆ, ಕನ್ನಡ ನೆಲ ಇವೆಲ್ಲ ಅಂಶಗಳನ್ನೇ ಮತ್ತೊಮ್ಮೆ ಮುಗದೊಮ್ಮೆ ಸ್ಮರಣೆಗೆ ತಂದು ಕೊಟ್ಟ ಸೋಮಲಿಂಗ ಕವಿ ಹಾಗೂ ಸಂಪಾದನೆ ಕಾರ್ಯ ತುಂಬಾ ಮಹತ್ವದ್ದಾಗಿದೆ. ಇಲ್ಲಿ ನಾಡು ರಾಷ್ಟ್ರ, ಭಕ್ತಿ-ಭಾವ, ಸಾಮಾಜಿಕ, ಪೌರಾಣಿಕ, ಐತಿಹಾಸಿಕ, ಸಂಕೀರ್ಣ ಮುಂತಾದವುಗಳಿಗೆ ಸಂಬಂಧಿಸಿದಂತಹ ಲಾವಣಿಗಳು ಇಂದು ತುಂಬಾ ಮಹತ್ವಪೂರ್ಣವೆನಿಸಿವೆ. ಇಂತಹ ಲಾವಣಿಗಳನ್ನು ಸಂಪಾದನೆ ಮಾಡಿದ ಡಾ.ಸಿ.ಕೆ.ನಾವಲಗಿ ಅವರ ಶ್ರಮ ಅಪಾರ ವಾದದ್ದು. ಆಧುನಿಕತೆಯ ಯುವಪೀಳಿಗೆಗೆ ಸೋಮಲಿಂಗ ಕವಿ ಲಾವಣಿ ಹಾಡುಗಳು ತುಂಬಾ ಅವಶ್ಯಕ ಆಗಿವೆ. ಸಮಾಜ ಸುಧಾರಣೆಗಂತೂ ಹೇಳಿ ಮಾಡಿಸಿದ ಲಾವಣಿಯಾಗಿವೆ.

ಹಾಗಾಗಿ ಡಾ.ಸಿ.ಕೆ.ನಾವಲಗಿ ಅವರು ಇವುಗಳ ಸಂಗ್ರಹ ಕಾರ್ಯ, ಸಂಪಾದನೆ, ಶಾಸ್ತ್ರೀಯಬದ್ಧವಾಗಿ ಅಚ್ಚುಕಟ್ಟಾಗಿ ಒಂದು ಚೌಕಟ್ಟನ್ನು ನೀಡಿರುವುದು ಅರ್ಥಪೂರ್ಣವಾಗಿವೆ. ಇನ್ನು ಮುಂದೆ ಮತ್ತೆ ಇಂತಹ ಸಮಾಜ ಸುಧಾರಣೆಯ ಲಾವಣಿ ಹಾಡುಗಳ ಸಂಪಾದನೆ ಕಾರ್ಯ ನಡೆಯುವಂತಾಗಬೇಕು.ಇಂದಿನ ನಮ್ಮಂತಹ ಯುವ ಜನತೆಯ ಕಣ್ಣು ತೆರೆಸುವಂತಾಗಬೇಕು.

೩.೩ ಹತ್ತು ಮಂದ್ಯಾಗ ಹಾಡೇನ

(ಮದುವೆಯ ಹಾಡುಗಳು)

ಹತ್ತು ಮಂದ್ಯಾಗ ಹಾಡೇನ ಎಂಬ ಸಂಕಲನಗಳ ಸಂಪಾದಕರು ಐದು ಜನ. ಚೆನ್ನಬಸವ ನಾವಲಗಿ, ಶಕುಂತಲಾ ಚೆನ್ನಬಸವ, ಮಹಾದೇವ ಶಮಕನಪುರ, ಡಾ. ಯಲ್ಲಪ್ಪ, ಕೆ.ಕೆ.ಪುರ್, ಡಾ. ಶೈಲಜ ಪವಾಡಶೆಟ್ರ ಆಗಿದ್ದಾರೆ. ಅವರಲ್ಲಿ ಪ್ರಸ್ತುತ ಅಧ್ಯಯನಕ್ಕಾಗಿ ಡಾ.ಚೆನ್ನಬಸವ ನಾವಲಗಿ, ಶಕುಂತಲಾ ಚೆನ್ನಬಸವ ದಂಪತಿಗಳ ಮದುವೆಯ ಹಾಡುಗಳನ್ನು ಮಾತ್ರ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ. ಈ ಪುಸ್ತಕವು ಒಟ್ಟಾರೆ ೬೯೫ ಪುಟಗಳನ್ನು ಒಳಗೊಂಡಿದೆ. ಇದರ ಮುದ್ರಣ ೨೦೧೧ ರಲ್ಲಿ ಆಗಿದೆ. ಇದರ ಬೆಲೆ ೧೨೦ ರೂ. ಆಗಿದೆ. ಪ್ರಕಾಶಕರು ಬಿ.ಎನ್.ಪರಡ್ಡಿ ರಿಜಿಸ್ಟ್ರಾರ್ ಕರ್ನಾಟಕ ಜಾನಪದ ಅಕಾಡೆಮಿ ಕನ್ನಡ ಭವನ, ಜೆ.ಸಿ ರಸ್ತೆ ಬೆಂಗಳೂರು, ಮುದ್ರಕರು ಶ್ರೀ ನವದುರ್ಗಪ್ರಿಂಟರ್ಸ್, ಬೆಂಗಳೂರು ಇದು ಅಧ್ಯಕ್ಷರ ನಡು ಒಳಗೊಂಡಿದೆ. ಗೊ.ರು.ಚೆನ್ನಬಸಪ್ಪ ಕರ್ನಾಟಕದ ಜಾನಪದ ಅಕಾಡೆಮಿ ಅಧ್ಯಕ್ಷರ ನುಡಿ ಆಗಿದೆ. ಒಳನೋಟಗಳನ್ನು ಒಳಗೊಂಡಿದೆ. ಮದುವೆ ಹಾಡುಗಳ ಸಂಗ್ರಹಕರನ್ನು ತಿಳಿಸಲಾಗಿದೆ. ಅದೇ ರೀತಿ 'ಅರಿಕೆ'ಯನ್ನು ಚೆನ್ನಬಸವ ನಾವಲಗಿ ಮತ್ತು ಶಕುಂತಲಾ ನಾವಲಗಿ ಹೇಳಿದ್ದಾರೆ. ನಂತರ ಪ್ರಸ್ತಾವಣೆ ಹನ್ನೆರಡು ಪುಟಗಳನ್ನು ಒಳಗೊಂಡಿದ್ದು, ಅದನ್ನು ಕೂಡಾ ಈ ದಂಪತಿಗಳೇ ಬರೆದಿದ್ದಾರೆ. ಒಳನೋಟದಲ್ಲಿ ಪರಿವಿಡಿ ಎರಡು ಪುಟಗಳನ್ನು ಒಳಗೊಂಡಿದೆ. ಆದರೆ ಅವರ ಮದುವೆಯ ಹಾಡುಗಳು ೪೬ ಪುಟಗಳನ್ನು ಒಳಗೊಂಡಿದೆ. ಅಧ್ಯಯನಕ್ಕೆ ಒಳಪಡಿಸಿದ್ದು ಈ ದಂಪತಿಗಳ ಮದುವೆ ಹಾಡುಗಳನ್ನಷ್ಟೇ.

"ಡಾ.ಸಿ.ಕೆ.ನಾವಲಗಿ ಅವರ ಸಂಪಾದನೆಗಿಂತ ಮೊದಲು ಬೀಸೂಕಲ್ಲಿನ ಪದಗಳು ಮತ್ತು ಸೋಬಾನ ಪದಗಳನ್ನು ೨೦೧೦ ರಲ್ಲಿಯೇ ಸಂಪಾದನೆ ಮಾಡಿದ್ದಾರೆ. ಬೈಲೂರು ಬಸಲಿಂಗಯ್ಯ[೧]" ಆದರೂ ಡಾ.ಸಿ.ಕೆ.ನಾವಲಗಿ ಅವರು ಮದುವೆ ಪ್ರಾರಂಭದಿಂದ ಹಿಡಿದು ಮದುವೆ ಮುಕ್ತಾಯವಾಗುವರೆಗೂ ನಡೆಯುವ ಸಕಲ ಕಾರ್ಯಗಳನ್ನೆಲ್ಲಾ ಅಚ್ಚುಕಟ್ಟಾಗಿ ಶಿಸ್ತುಬದ್ಧವಾಗಿ ಅದಕ್ಕೊಂದು ಚೌಕಟ್ಟನ್ನು ನೀಡಿದ್ದಾರೆ. ಇವರ ಸಂಪಾದನಾ ಕಾರ್ಯ ಹಿಂದಿನ ಸಂಪ್ರದಾಯ, ಸಂಸ್ಕೃತಿ, ಉಳಿಸಿ ಬೆಳೆಸಿಕೊಂಡು ಬರಲು ನಮಗೆ ಅವಶ್ಯಕವಾಗಿದೆ. ಇಲ್ಲಿ ಇನ್ನೊಂದು ಆಲಿಸಬೇಕಾದಂತಹ ಸಂಗತಿ ಏನೆಂದರೆ, ಈ ಮದುವೆ ಹಾಡುಗಳ ಸಂಪಾದನಾ ಕಾರ್ಯದಲ್ಲಿ ಡಾ. ಸಿ.ಕೆ. ನಾವಲಗಿ ಅವರಿಗಿಂತಲೂ ಅವರ ಧರ್ಮಪತ್ನಿ ಶ್ರೀಮತಿ ಶಕುಂತಲಾ ಅವರ ಪಾತ್ರ ಹಿರಿದಾದುದು ಮೆಚ್ಚುವಂತದ್ದು. ಏಕೆಂದರೆ, ಇವರು ಗ್ರಾಮೀಣ ಜನರಲ್ಲಿ ಹೋಗಿ ಮಾಹಿತಿ ಸಂಗ್ರಹಿಸುವ ವಿಷಯದಲ್ಲಿ ಹಿಂಜರಿದಾಗ ಸ್ವತಃ ಅವರಿಗೆ ಪ್ರೋತ್ಸಾಹ ನೀಡುವುದರೊಂದಿಗೆ ಸಹಾಯ-ಸಹಕಾರವನ್ನು ಮಾಡಿದ್ದಾರೆ. ಅವರೇ ಮುಂದಾಗಿ ಕರೆದುಕೊಂಡು ಹೋಗಿ ನಾಲ್ಕಾರು ದಿನ ನಿಂತು ಅಲ್ಲಿ ಅವರ ಕಡೆಯಿಂದ ಹಾಡಿಸಿ.

೧ ನೂರು ಜನಪದ ಹಾಡುಗಳು ಬೈಲೂರು ಬಸವಲಿಂಗಯ್ಯಾ ಪ್ರ.ಜಾನಪದ ಸಂಶೋಧನಾ ಕೆಂದ ಧಾರವಾಡ ಪ್ರ.೨೦೧೦ ಪುಟ ೧೬

ಕೈಯಿಂದ ಬರೆದುಕೊಂಡು ಬಂದು ಅವುಗಳನ್ನು ತಪ್ಪಿದ್ದಲ್ಲಿ ತಿದ್ದಿ ಸಂಪಾದಿಸಿ ಪ್ರಕಟಿಸುವ ತನಕ ಅವರ ಶ್ರಮ ಅಪಾರವಾದುದಾಗಿದೆ.

ಹೀಗಾಗಿ ಶ್ರೀಮತಿ ಶಕುಂತಲಾ ಅವರು ಕೂಡಾ ಬೆಳಗಾವಿ ಜಿಲ್ಲೆಯ ಜಾನಪದ ತಜ್ಞೆಯಾಗಿ ಕೆಲಸ ಮಾಡುತ್ತಿರುವುದು ವಿಶೇಷವಾಗಿದೆ. ಯಾವುದೇ ಜಾನಪದ ಸಾಹಿತ್ಯ ಕತ್ತಲಲ್ಲಿ ಉಳಿಯಬಾರದೆಂದು ಅದು ಬೆಳಕಿಗೆ ಬರಬೇಕು ಎನ್ನುವ ಉದ್ದೇಶದಿಂದ ಈಗಲೂ ಈ ದಂಪತಿಗಳು ಜಾನಪದದ ತೇರನ್ನೆಳೆಯಲು ಸಿದ್ಧರಾಗಿದ್ದು ಪರಮ ಸಂತೋಷದ ವಿಷಯವಾಗಿದೆ. ಈ ಇಪ್ಪತ್ತೇಒದು ಮದುವೆ ಹಾಡುಗಳು ಇಂದು ತುಂಬಾ ಮಹತ್ವದ್ದಾಗಿವೆ.ಅದರ ಜೊತೆಗೆ ಹಾಡುಹೇಳಿದವರ ಪರಿಚಯ ಮದುವೆಯ ಕುರಿತು ಗಾದೆ ನಂಬಿಕೆಗಳನ್ನು ಹೇಳಿರುವುದು ಅಧ್ಯಯನಕ್ಕೆಪ್ರಯೋಜನಕಾರಿಯಾಗಿದೆ. ಈ ಮದುವೆ ಹಾಡುಗಳನ್ನು ಗಮನಿಸಿದಾಗ ಅದರ ವೈವಿಧ್ಯತೆ ತಿಳಿದುಬರುತ್ತದೆ. ವಿವಾಹ (Marriage) ಇದೊಂದು ಸಂಸ್ಥೆ. ಮಾನವನಷ್ಟೇ ಪ್ರಾಚೀನವಾದುದು. ಭಾರತದಲ್ಲಿ ಇದನ್ನು ಒಂದು ಧಾರ್ಮಿಕ ಸಂಸ್ಕಾರ ಎನ್ನಲಾಗಿದೆ. ವ್ಯಕ್ತಿಯ ಜೀವನದಲ್ಲಿ ಇದೊಂದು ಮುಖ್ಯ ಸಂಸ್ಕಾರ. ಇದು ದೇವರಿಂದ ನಿರ್ಮಿತವಾದ ಒಂದು ಪವಿತ್ರ ಬಂಧನ. ಮದುವೆಯಾಗದವರಿಗೆ ಮೋಕ್ಷವಿಲ್ಲ. 'ಮದುವೆ ಆಗದ ಮನುಷ್ಯನ ಜೀವನ ಪರಿಪೂರ್ಣವಾದುದಲ್ಲ' ಎನ್ನುವ ನಂಬಿಕೆಯೂ ಭಾರತೀಯರಲ್ಲಿ ಮನೆ ಮಾಡಿದೆ. ಈ ಕಾರಣಗಳಿಂದಲೂ ಭಾರತೀಯರಿಗೆ ಮದುವೆ ಅನಿವಾರ್ಯವಾದಂತೆ ತೋರುತ್ತದೆ.ಸಕಾಲದಲ್ಲಿ ಹುಡುಗಿಗೆ ಮದುವೆ ಆಗದಿದ್ದರೆ, ನರಕವೇ ಗತಿ ಎನ್ನುವ ನಂಬಿಕೆಗಳು ಪ್ರಚಲಿತದಲ್ಲಿವೆ. 'ಮದುವೆ ಆಗದ ಮನುಷ್ಯನ ಜೀವನ ಪರಿಪೂರ್ಣವಾದುದಲ್ಲ' ಎನ್ನುವ ನಂಬಿಕೆಯೂ ಭಾರತೀಯರಲ್ಲಿ ಮನೆ ಮಾಡಿದೆ. ಈ ಕಾರಣಗಳಿಂದಲೂ ಭಾರತೀಯರಿಗೆ ಮದುವೆ ಅನಿವಾರ್ಯವಾದಂತೆ ತೋರುತ್ತದೆ. ಮಾನವ ಸಮಾಜದಲ್ಲಿ ಮದುವೆ ಒಂದು ವ್ಯವಸ್ಥಿತ ಸಾಮಾಜಿಕ ಸಂಸ್ಥೆ (Social Institution) ಯಾಗಿದೆ. ಇದನ್ನು ಕುರಿತು ಮಾನವ ಶಾಸ್ತ್ರಜ್ಞರು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ.

The institution of Marriage may be regarded the central feature of all forms of human society with which we are acquainted. It stands in an especially close relation to the family using this term for this group consisting of parents and children. This social group rests absolutely on the institution of Marriage… Marriage is this foundation of family……"

ಈ ಕುಟುಂಬಕ್ಕೆ ಬುನಾದಿಯಾದ ಈ ಸಂಸ್ಥೆ ಪ್ರಾಣಿ ವರ್ಗದಲ್ಲಿ ಇಲ್ಲ. ಮನುಷ್ಯ ಪ್ರಾಣಿಯಿಂದ ಹುಟ್ಟಿದ ಈ ಸಂಸ್ಥೆ ಧರ್ಮದ ಚೌಕಟ್ಟಿನಲ್ಲಿ ಸ್ತ್ರೀ-ಪುರುಷರು ಸತಿಪತಿಯರಾಗಿ-ಸಂಸಾರ ಹೂಡಲು ಸಮ್ಮತಿಸುತ್ತದೆ. ಕುಟುಂಬ-ಕುಟುಂಬಗಳು ಕೂಡಲು ಸಹಕರಿಸುತ್ತವೆ. ಕೊನೆಗೆ ಒಂದು ಸಮಾಜ ಇನ್ನೊಂದು ಸಮಾಜದೊಂದಿಗೆ ಬೆರೆಯಲು ಬೆಸುಗೆ ಹಾಕುತ್ತದೆ.

ಮದುವೆಯ ಆರಂಭದ ಹೆಜ್ಜೆಯಿಂದ ಕೊನೆಯ ಹೆಜ್ಜೆಯವರೆಗೂ ವಿಶಿಷ್ಟವಾದ ಆಚರಣೆಗಳು ಹೆಣೆದುಕೊಂಡಿವೆ. ಅವನ್ನು ನಗು-ನಗುತ್ತ ಹುರುಪು ಉತ್ಸಾಹಗಳಿಂದ ಗ್ರಾಮೀಣ ಗರತಿಯರು ಆಚರಿಸಿಸುವುದು ನಿಜವಾಗಿಯೂ ಒಂದು ಹಬ್ಬದ ವಾತಾವರಣವನ್ನೇ ಸೃಷ್ಟಿಸಿದಂತಿರುತ್ತದೆ. ಹೀಗಾಗಿ ಅವರು ಮನೊರಂಜನೆಯಿಂದ ನಿದ್ದೆಗೆಟ್ಟರೂ ಬೇಸರಿಸದೇ ಮನೆಯ-ಓಣಿಯ ಓರಿಗೆಯವರು ಹಿರಿಯರೆಲ್ಲ ಸೇರಿ ಒಂದುಗೂಡಿ ಮದುವೆಯ ಧಾರ್ಮಿಕ ಕಾರ್ಯಗಳನ್ನು ಸಡಗರ ಸಂಭ್ರಮದಿಂದ ಮಾಡಿ ಮುಗಿಸುವರು.

ಮದುಮಗಳು-ಮದುಮಗನ ಕಡೆಯವರು ನಾ ಹೆಚ್ಚು-ತಾ ಹೆಚ್ಚು ಎಂದು ಪೈಪೋಟಿಗೆ ಇಳಿಯುವುದು ಸರ್ವೇಸಾಮಾನ್ಯ. ಇಲ್ಲಿ ಸಾಹಿತ್ಯಿಕ ಮೌಲ್ಯಕ್ಕಿಂತ ಸಾಮಾಜಿಕ & ಧಾರ್ಮಿಕ ಮೌಲ್ಯಗಳೇ ಹೆಚ್ಚೆಂದು ತೋರುತ್ತದೆ.

ಈ ಎಲ್ಲ ಮದುವೆ ಹಾಡುಗಳನ್ನು ನೋಡಿದರೆ ನಮ್ಮ ಹಿಂದಿನವರು ಆಚರಿಸಿಕೊಂಡು ಬಂದ ಆಚರಣೆಗಳು, ರೂಢಿ, ಸಂಪ್ರದಾಯಗಳು, ಪದ್ಧತಿಗಳನ್ನು ನಮ್ಮ ಗ್ರಾಮೀಣ ಜನ ನಿನ್ನೆ, ಮೊನ್ನೆಯವರೆಗೂ ಚಾಚೂ ತಪ್ಪದೇ ಇಂದಿನವರೆಗೆ ಮುಂದುವರೆಸಿಕೊಂಡು ಬಂದಿದ್ದು ವಿಶೇಷ.

ಮದುವೆಯ ಹಾಡುಗಳಲ್ಲಿ ಹೆಣ್ಣು-ಮಕ್ಕಳ ಪಾತ್ರ ಮಹತ್ವದ್ದು. ಇವರ ಈ ಮದುವೆ ಹಾಡುಗಳು ಅವರ ಮಟ್ಟಿಗೆ ಯಜ್ಞಮಂತ್ರಗಳೇ ಸರಿ. ದಾಂಪತ್ಯ ಜೀವನದ ಬಹುಮುಖ್ಯ ಭಾಗವಾಗಿರುವುದರಿಂದ ಅದು ಒಂದು ಪವಿತ್ರ ಯಜ್ಞದಂತೆ ಅವರಿಗೆ ತೋರಿದ್ದು ಆಶ್ಚರ್ಯವಲ್ಲ.

ಈ ಹಿನ್ನೆಲೆಯಲ್ಲಿ ಇವು ಕೇವಲ ಮನರಂಜನೆಯ ಹಾಡುಗಳಲ್ಲದ್ದರಿಂದ ಇವುಗಳನ್ನು ಬೇರೆ ದೃಷ್ಟಿಯಿಂದ ಓದಬೇಕು. ಆದರೆ ಇವುಗಳಲ್ಲಿ "ರಸವಿಲ್ಲವೆಂತಲ್ಲ" ಎಂಬುದು ಅತ್ಯಂತ ಸೂಕ್ತವಿಚಾರ. ಇಲ್ಲಿ ಮದುವೆ ಹಾಡುಗಳ ಸಂಗ್ರಹಣೆ ಮಾಡಿದ್ದು ಇಂದಿನ ಆಧುನಿಕ ಯುಗದ ಗಾಳಿ ಗೋಪುರಕ್ಕೆ ಸಿಲುಕಿ ನಮ್ಮ ಸಂಪ್ರದಾಯಗಳು ಹಾಳಾಗದಂತೆ ತಮಗೆ ಸಾಧ್ಯವಾದಷು ಡಾ.ಸಿ.ಕೆ.ನಾವಲಗಿ ಅವರು ಸಂಗ್ರಹಣೆ ಮಾಡಿದ್ದು ತುಂಬಾ ಮಹತ್ವದ ಕಾರ್ಯವಾಗಿದೆ.

ಒಳಕಲ್ಲು ಪೂಜೀ ಹಾಡು, ಬೀಸುಕಲ್ಲು ಹಾಡು, ಉಯ್ಯಾಲೆ ಹಾಡು, ಇದಿರುಗೊಳ್ಳುವ ಹಾಡು:
ಒಳಕಲ್ಲ ಮತ್ತು ಒನಕೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಂದನ್ನೊಂದು ಬಿಟ್ಟು ಇರಲಾರವು ಎಂಬಂತೆ. ಇವೆರಡೂ ಬೇರೆ-ಬೇರೆಯಾದರೂ ಅವು ಅಗಲಲಾರವು. ಐದು ಜನ ಮುತ್ತೈದೆಯರು ಐದು ಆರತಿಗಳನ್ನು ತಂದು ಐದು ತರಹದ ಕಾಳುಗಳನ್ನು ತಂದು ಕುಟ್ಟಿ, ಅದನ್ನು ಅಕ್ಷತೆಯೊಂದಿಗೆ ಬೆರೆಸಿ ಅಕ್ಷತಾರೋಹಣಕ್ಕೆ ಉಪಯೋಗಿಸುವುದನ್ನು ನೋಡಿದರೆ, ಇದು ಮದುವೆಗೆ ಮುಂಚಿತವಾಗಿ ಒಳಕಲ್ಲ ಪೂಜೆ ಮಾಡುವದು ಅದರ ಮಹತ್ವವನ್ನು ಹೇಳುತ್ತದೆ. ಮದುವೆಗಿಂತ ಈ ಪೂಜೆ ಪುನಸ್ಕಾರಗಳಿಗೆ ಹೆಚ್ಚಿನ ಮಹತ್ವ ಇದೆ. ಮೊದಲ ಸ್ಥಾನ ಈ ಒಳಕಲ್ಲು ಪೂಜೆಗೆ, ನಂತರದ ಸ್ಥಾನ ಮದುವೆಗೆ ಅಂದರೆ ತಪ್ಪೇನಿಲ್ಲ. ಇದರಲ್ಲಿ ಮುತ್ತೈದೆಯರು ಮತ್ತು ಅವರ ಹಾಡುಗಳು ತುಂಬಾ ಮಹತ್ವವೆನಿಸಿವೆ. ಇವೆಲ್ಲಾ ನೋಡಿದರೆ ಸಮಾಜದಲ್ಲಿ ಅದು ಮದುವೆ ಸಂದರ್ಭದಲ್ಲಂತೂ ಇವರ ಸ್ಥಾನಮಾನ ಗಣ್ಯವಾದುದು ಶ್ರೇಷ್ಠವಾದುದು. ಇಂದು ಇಂತಹ

ಹಾಡುಗಳು, ಸಂಪ್ರದಾಯಗಳು ಕಣ್ಮರೆಯಾದಂತೆ ಡಾ.ಸಿ.ಕೆ.ನಾವಲಗಿ ಅವರ ಪಾತ್ರ ತುಂಬಾ ಮಹತ್ವದ್ದಾಗಿದೆ. "ಇದಕ್ಕೂ ಮುಂಚೆ ೧೯೨೯ ರಲ್ಲಿಯೇ ಕೃಷ್ಣಶರ್ಮರವರು ಬೀಸುಕಲ್ಲಿನ ಪದಗಳನ್ನು ಕುರಿತಂತೆ ತ್ರಿಪದಿಗಳ ಸಂಗ್ರಹ ಪರಿಚಯಾತ್ಮಕ ಲೇಖನವನ್ನು ಬರೆದಿದ್ದಾರೆ[೧]" ದೇವರ ಕಾರ್ಯವನ್ನು ಕೂಡಾ ಅಷ್ಟೇ ಅದ್ದೂರಿಯಿಂದ ಕೈಗೊಳ್ಳಲಾಗುತ್ತಿದೆ. ಈ ದೇವರ ಕಾರ್ಯವು ನಮ್ಮ ಗ್ರಾಮೀಣ ಭಾಷೆಯಲ್ಲಿ "ದೆವ್ವಕಾರ್ಯ" ಎಂದೂ ಕರೆಯುವುದುಂಟು. ಮುಂದೆ ಮದುವೆ ಸಂದರ್ಭದಲ್ಲಿ ಯಾವುದೇ ಅಡೆತಡೆಗಳು ಉಂಟಾಗಬಾರದೆಂದು ಮೊದಲೇ ಊರಿನ ಎಲ್ಲ ದೇವತಾ ಪೂಜಾಕಾರ್ಯಗಳನ್ನು ಅತ್ಯಂತ ಸಂಭ್ರಮದಿಂದ ಕೈಗೊಳ್ಳಲಾಗುತ್ತದೆ.

ಈ ಬೀಸುಕಲ್ಲು ಮತ್ತು ಒಳಕಲ್ಲು ಪೂಜೀ ಮಾಡುವಾಗ ಸಾಂಪ್ರದಾಯಿಕ ಆಚರಣೆಯಂತೆ ಮುತ್ತೈದೆಯರ ಹಾಡುಗಳ ಪಾತ್ರ ಮಹತ್ವದ್ದು. ಈ ಹಾಡುಗಳ ಮುಖಾಂತರ ಮದುವೆಗೆ ಮೆರಗು ಬರುವಂತೆ ಮಾಡುತ್ತಾರೆ."ಡಾ.ಸಿ.ಕೆ.ನಾವಲಗಿ ಅವರಿಗಿಂತಲೂ ಪೂರ್ವದಲ್ಲಿ ಹಲಸಂಗಿ ಚನ್ನಮಲ್ಲಪ್ಪರವರು "ಬೀಸುಕಲ್ಲು ಹಾಡುಗಳು" ಎಂಬ ಪ್ರಬಂಧವನ್ನು ಬರೆದಿದ್ದಾರೆ[೨]" ಹೆಣ್ಣಿನ ಕಡೆಯವರು ನಿಬ್ಬಣ ಬರುವವರು ನೇರವಾಗಿ ಹಂದರಕ್ಕೆ ಬರದೇ ಅವರು ಊರಕಡೆ ಯಾವುದಾದರೂ ಗುಡಿಯೊಳಗೆ ಮನೆಯೊಳಗೆ ಇಳಿದುಕೊಂಡಿರುತ್ತಾರೆ. ಅವರು ಬಂದ ಸುದ್ದಿ ತಿಳಿದ ನಂತರ ಗಂಡ (ಮದುಮಗನ) ಕಡೆಯವರು ಆರತಿ ಎತ್ತಿಕೊಂಡು ಪೂಜಾ ಸಾಮಾನು ತೆಗೆದುಕೊಂಡು ಅವರನ್ನು ಕರೆಯಲು ವಾದ್ಯ ಮತ್ತು ಮೇಳದ ಜೊತೆಗೆ ಹೋಗುತ್ತಾರೆ. ಅಲ್ಲಿ ಹೋಗಿ ಆಕಡೆ ಐದು ಜನ ಈ ಕಡೆ ಐದು ಜನ ಎದುರು-ಬದುರು ಕುಂತು ಎಲೆ ಅಡಿಕೆ (ಪೂಜಾ ಸಾಮಾನುಗಳನ್ನು) ಹಂಚಿಕೊಂಡು ಇಬ್ಬರ ಕಡೆಯವರು ಅಣಕಿಸಿ, ಮೊದಲಿಕೆಯ ಹಾಡುಗಳನ್ನು ನಾವು ಹೆಚ್ಚು ನೀವು ಹೆಚ್ಚು ಅನ್ನುವ ರೀತಿಯಲ್ಲಿ ಹಾಡುತ್ತಾ ವಿಜೃಂಭಿಸುತ್ತಾ ಬಾರಿಸುತ್ತಾ ಊದಿಸುತ್ತಾ ಹೆಣ್ಣಿನಕಡೆ ಬೀಗರನ್ನು ಹಂದರಕ್ಕೆ ಕರೆದುಕೊಂಡು ಬರುವುದು. ನಂತರ ಆ ಮದುಮಗಳಿಗೆ ಆರತಿ ಎತ್ತಿ ದೃಷ್ಟಿ ತೆಗೆಯುತ್ತಾರೆ. ಇಲ್ಲಿಯೂ ಕೂಡಾ ಇದಿರುಗೊಳ್ಳುವ ಹಾಡುಗಳು, ಸುಮಂಗಲೆಯರು ಹಾಡುಗಳನ್ನು ಹಾಡುತ್ತಾರೆ. ಇದರಿಂದ ಮದುವೆಗೆ ಮತ್ತಷ್ಟು ಮೆರಗು ಬಂದಂತಾಗುತ್ತದೆ. ಇವೆಲ್ಲಾ ನೋಡಿದರೆ ಇಂದಿನ ಆಧುನಿಕ ದಿನಮಾನದಲ್ಲಿ ಇಂತಹ ಸಂಪ್ರದಾಯ ಆಚರಣೆಗಳು ಮಾಯವಾಗುತ್ತವೆ. ಇವುಗಳನ್ನು ಸಂಗ್ರಹಿಸಿ ಉಳಿಸಿಕೊಂಡು ಬೆಳೆಸಿಕೊಂಡು ಬರುವುದು ನಮ್ಮೆಲ್ಲರ ಕರ್ತವ್ಯವಾಗಿದೆ.ಈ ಇದಿರುಗೊಳ್ಳುವ ಹಾಡುಗಳನ್ನು ಅಣಕಿಸಿ ಹಾಡುವಾಗ ಹೆಣ್ಣಿನ ಸೀರೆ, ಕುಬಸ, ಮೂಗಿನ ನತ್ತ, ಕಿವಿಯೋಲೆ, ಬುಗುಡಿ, ಟೀಕಿ ಸರ್‌ವ, ಬಳಿ, ನಡುಪಟ್ಟಿ ಕಾಲಿನ ತೋಡೆ, ಇವೆಲ್ಲಾ ಇರಬೇಕು ಅನ್ನುವ ಮಾತನ್ನು ಕೂಡಾ ಅವರು ಹಾಡಿನಲ್ಲಿ ಹೇಳುವ ರೀತಿ ಹೆಣ್ಣಿಗೆ ಬೇಕಾದ ವಸ್ತ್ರ ಒಡವೆ, ಅದೇ ರೀತಿ ಹೆಣ್ಣಿನ ಸೊಬಗು, ಸೌಂದರ್ಯದ ಬಗ್ಗೆ ಹೇಳಿದಂತಿದೆ.

---

೧ ಹೊನ್ನಬೆಳೆ ಡಾ.ಸಿ.ಕೆ.ನಾವಲಗಿ ಪ್ರೊ. ಚಂದ್ರಶೇಖರ ಅಕ್ಕಿ ಪ್ರಕಾಶನ ಕನಕ ಸಾಹಿತ್ಯ ಪ್ರತಿಷ್ಠಾನ, ಪ್ರಕಟಣೆ-೨೦೦೪ ಪುಟ ಸಂ ೪

೨ ಕನ್ನಡ ಸಾಹಿತ್ಯ ಕೋಶ ರಾಜಪ್ಪ ದಳವಾಯಿ ಪ್ರ.ದಳವಾಯಿ ಪ್ರಕಾಶನ ಬೆಂಗಳೂರು ಪ್ರಕಟಣೆ೨೦೧೦ ಪುಟ ೫೪೧

ಆ ಹೆಣ್ಣಿಗೆ ಇವೆಲ್ಲಾ ಪ್ರಮುಖವಾದವುಗಳು ಎನ್ನುವ ರೀತಿಯಲ್ಲಿ ಹಾಡುತ್ತಿರುತ್ತಾರೆ. ಮದುವೆ ಸಂದರ್ಭದಲ್ಲಿ ಗಂಡ ಹೆಂಡತಿಯವರು ಗೊಂಬೆಯನ್ನೇ ಮಗುವಿನ ರೀತಿಯಲ್ಲಿ ಆಡಿಸುವ ಆಟಕ್ಕೆ 'ಉಯ್ಯಾಲೆ ಎನ್ನುತ್ತಾರೆ' ಈ ಹಾಡನ್ನು ಮುತ್ತೈದೆಯರು ಹಾಡುತ್ತಾರೆ. "ಅದೇ ರೀತಿ ಉತ್ತರ ಕರ್ನಾಟಕದ ಮದುವೆ ಹಾಡುಗಳನ್ನು ಪ್ರಥಮ ಬಾರಿಗೆ ಹೆಚ್ಚಿನ ಪ್ರಮಾಣದಲ್ಲಿ ಬೆಳಕಿಗೆ ತಂದವರು ಎಸ್. ಗದ್ದಗಿಮಠರವರು[೧]" ತದನಂತರ ಡಾ. ಸಿ.ಕೆ. ನಾವಲಗಿ ಅವರು ಉತ್ತರ ಕರ್ನಾಟಕದ ಮದುವೆ ಹಾಡುಗಳಾದ 'ಹತ್ತು ಮಂದ್ಯಾಗ ಹಾಡೇನ' ಎಂಬ ಸಂಕಲನವನ್ನು ಹೊರತಂದಿದ್ದು ಮಹತ್ವಪೂರ್ಣವಾಗಿದೆ.

ಹಂದರ ಶಾಂಡಿಗಿ ಕುಡಿಯುವ ಹಾಡು, ನಯ್ಯಾನ ಏರಿಸುವ ಹಾಡು, ಭುಮದ ಆರತಿ ಹಾಡು, ಗಂಡನ ಕಾಲು ತೊಳೆಯುವ ಹಾಡು ತಂಗಿ-ಅಣ್ಣನ ಕಾಲು ಹಿಡಿಯುವ ಹಾಡು, ಮಂತ್ರಕ್ಕಿ ಹಾಡು.
ಐದು ಜನ ಮುತ್ತೈದಿಯರು ಕೂಡಿ ಹಂದರಗಂಭಕ್ಕೆ ಶಾಂಡಿಗೆ, ಖರ್ಚಿಕಾಯಿ, ಹಪ್ಪಳ ಇವುಗಳನ್ನೆಲ್ಲಾ ತಯಾರಿಸಿ ಹಂದರಗಂಬಕ್ಕೆ ಮುತ್ತೈದೆಯರ ಹಾಡಿನ ಮುಖಾಂತರ ಎಡೆ ಹಿಡಿಯುತ್ತಾರೆ. ಇದೂ ಕೂಡಾ ಒಳಕಲ್ಲ, ಬೀಸುಕಲ್ಲಿನಷ್ಟೇ ಮಹತ್ವದ್ದಾಗಿದೆ. ಇಲ್ಲಿ ಮುತ್ತೈದೆಯರ ಹಾಡುಗಳು ಮದುವೆಯ ಮೈಲುಗಲ್ಲುಗಳಿದ್ದಂತೆ. ಮದುಮಗ &ಮದುಮಗಳಿಗೆ ಮುತ್ತೈದೆಯರು ದಂಟಿಗೆ ಎರಡು ವೀಳ್ಯದೆಲೆಗಳನ್ನು ತೆಗೆದುಕೊಂಡು ಕೊಬ್ಬರಿಎಣ್ಣೆಯಲ್ಲಿ ಎದ್ದಿ, ಮದುಮಕ್ಕಳ ತಲೆಗೆ ಹಚ್ಚುವ ಶಾಸ್ತ್ರ, ನಯ್ಯಾನ ಏರಿಸುವುದು ಎನ್ನುತ್ತಾರೆ. ಇದು ಮದುಮಕ್ಕಳಿಗೆ ಶೋಭೆ ತರುವಂತದ್ದು, ಈ ಎಲ್ಲ ಕೆಲಸ ಕಾರ್ಯಗಳನ್ನು ಅಂದರೆ, ಆಚರಣೆಗಳು ತುಂಬಾ ಮಹತ್ವದ್ದಾಗಿವೆ. ಮುತ್ತೈದೆಯರು ಮದುಮಕ್ಕಳ ಮೇಲೆ ಹಾಡುಗಳನ್ನು ಹಾಡುತ್ತಾ ಅವರ ಮನಸ್ಸಿಗೆ ಅಹ್ಲಾದವನ್ನುಂಟು ಮಾಡಿ ಸಂಪ್ರದಾಯದಂತೆ ಮುನ್ನಡಿಸಿಕೊಂಡು ಹೋಗುವುದು ಇಂದಿಗೂ ಕೂಡಾ ಇವರ ಮಹತ್ವ ಮರೆಯುವಂತಿಲ್ಲ.

ಭೂಮ (ಲಗ್ನಶಾಂತಿಯ ಮಹಾನೈವೇದ್ಯ) ಇದು ಕೂಡಾ ಅಷ್ಟೇ ಮಹತ್ವದ್ದಾಗಿದೆ. ಅಕ್ಷತೆ ಬಿದ್ದ ಮೇಲೆ ಮತ್ತು ಮೆರವಣಿಗೆ ಮುಗಿದ ಮೇಲೆ ಜರುಗುವ ವಿಧಾನ ಇದು, ಸರ್ವವಿಧದ ಪಕ್ವಾನಗಳನ್ನು ಮದುಮಕ್ಕಳ ಮುಂದಿಟ್ಟು, ಮುಚ್ಚಿಟ್ಟು ಮುತ್ತೈದೆಯರು ಮತ್ತು ವಿವಾಹಿತ ಪುರುಷರು ಅದನ್ನು ತೆರೆದು ಉಣ್ಣುವರು. ಏಕೆಂದರೆ, ಇದರ ತಾತ್ಪರ್ಯ ಇಷ್ಟೇ ದಂಪತಿಗಳ ಸಂಸಾರಿಕ ಜೀವನದಲ್ಲಿ ಬರತಕ್ಕಂತಹ ಸರ್ವವಿಧದ ಸಂಗತಿಗಳನ್ನು ಸ್ವೀಕರಿಸುವುದಕ್ಕೆ ದಂಪತಿಗಳು ದೀಕ್ಷೆ ತೆಗೆದುಕೊಂಡಂತೆ. ಕಷ್ಟ-ನಷ್ಟ, ಸಹಿ, ಸುಖ ಎಲ್ಲವನ್ನು ಅನುಭವಿಸಲು ಸಿದ್ಧರಿರಬೇಕು ಎನ್ನುವ ನಂಬಿಕೆ ಒಳಗೊಂಡಿದೆ. ಮಲ್ಲಿಗೆ ದಂಡಿ, ಟೀಕೆಟಿಪ್ಪಣೆ ಮುಂತಾದವುಗಳ ಮೂಲಕ ಆರತಿ ಹಾಡುಗಳನ್ನು ಮುತ್ತೈದೆಯರು ತಾಮ್ರದ ಭೂಮದ ಪರವಾಗಿ ಹಾಡು ಹೇಳುವರು. ಪತಿಯೇ ದೇವರು, ಪತಿಯೇ ಸರ್ವಸ್ವ, ಆತನೇ ನನಗೆಲ್ಲ, ಎನ್ನುವಂತೆ ಸತಿಯಾದವಳು ಪತಿಯಕಾಲು ತೊಳೆಯುವಳು ಇದು ಪತಿಯ ಮಹತ್ವವನ್ನು ತಿಳಿಸುತ್ತದೆ. ಅದೇ ರೀತಿ ಹೆಣ್ಣಿಗೆ ಪತಿಯೇ ಶ್ರೇಷ್ಠ. ಜೀವನವನ್ನು ಪಣಕ್ಕಿಟ್ಟಾದರೂ ಸರಿಯೇ ಗಂಡನೇ ಲೇಸು ಎಂಬುವುದು ಹೆಣ್ಣು-ಗಂಡಿನ ಮೇಲಿಟ್ಟ ನಂಬಿಕೆ ತಿಳಿಸುತ್ತದೆ. ಅಕ್ಕಿಕಾಳು

೧ ಕನ್ನಡ ಸಾಹಿತ್ಯಕೋಶ ಸಂಪಾದನೆ ರಾಜಪ್ಪಾ ದಲವಾಯಿ ಪ್ರ.ದಳವಾಯಿ ಪ್ರಕಾಶನ ಪ್ರ.೨೦೧೦ ಪುಟ ೫೪೨

ಬಿದ್ದನಂತರ ಗಂಡನ ಕಾಲ ತೊಳೆದು ಪೂಜುಸುವುದುಂಟು. ಈ ವೇಳೆಯಲ್ಲಿ ಮುತ್ತೈದೆಯರು ಹಾಡುವುದುಂಟು. ಆ ಹಾಡಿನಲ್ಲಿ ಹೆಣ್ಣಿನ ವರ್ಣನೆ ಮಾಡುವರು.

ಸತ್ತ ಗಂಡನ ಪ್ರಾಣವನ್ನು ಯಮನ ಹತ್ತಿರ ಹೋಗಿ ತಂದಿರುವ ಸಾವಿತ್ರಿ. ಈ ನಿನ್ನ ಸತಿ, ಬಾಳೆ ಹಣ್ಣಿನಂತವಳು. ನಿಂಬೆ ಹಣ್ಣಿನಂತವಳು ಎಂದು ಆಕೆಯನ್ನು ಹೊಗಳ ಹಾಡುತ್ತಾರೆ. ಇದು ಸತಿಯ ಮಹತ್ವವನ್ನು ಹೆಚ್ಚಿಸುತ್ತದೆ. ಅಣ್ಣ-ಅತ್ತಿಗೆ ಅಕ್ಕಿಕಾಳು ಮುಗಿದ ಮೇಲೆ ಮನೆಯ ಹೊಸ್ತಿಲ ದಾಟುವಾಗ-ತಂಗಿ-ಇವರಿಬ್ಬರ ಕಾಲು ಹಿಡಿದು ತನ್ನ ಮಗನಿಗೆ ಹೆಣ್ಣು ಕೊಡಬೇಕೆಂದು ಕೇಳಕೊಳ್ಳುತ್ತಾಳೆ. ಅವರು ಒಪ್ಪಿದ ನಂತರ ಕಾಲು ಬಿಡುವಳು. ಆಗ ಖುಷಿಯಿಂದ ಮುತ್ತೈದೆಯರು ಮತ್ತೊಂದಿಷ್ಟು ಹುರುಪಿನಿಂದ ಹಾಡುಗಳನ್ನು ಹಾಡುವರು. ಬಾಳೆಹಣ್ಣು, ಮಾವಿನಹಣ್ಣು, ಅಂಜರದ ಹಣ್ಣು, ಆನೆ, ಒಂಟೆ, ಕುದುರೆ ಎಲ್ಲವನ್ನೂ ಕೊಡುತ್ತೇನೆಂದು ಅಣ್ಣ ಹೇಳದರೂ ನೀನು ಏನೂ ಕೊಟ್ಟರೂ ಬೇಡ ನನಗೆ ನಿನ್ನ ಮಗಳನ್ನೇ ಕೊಡಬೇಕೆಂದ ಕಾಲು ಹಿಡಿದು ಕೇಳಕೊಳ್ಳುವ ಹಾಡು ತುಂಬಾ ಮಹತ್ವದ್ದು.. ಅಣ್ಣ-ತಂಗಿಯರ ಸಂಬಂಧ ಗಟ್ಟಿಗೊಳಸುವುದು ಕೂಡಾ ಆಗಿದೆ. ವಧುವರರಿಗೆ ಅಕ್ಷತೆ ಹಾಕುವಾಗ ಹಾಡುವ ಹಾಡು ಅತ್ಯಮೂಲ್ಯವಾದುದು. ಏಕೆಂದರೆ, ಎಲ್ಲಾ ದೇವರನ್ನು ನೆನೆದು ಅವರ ಬಾಳು ಉತ್ತಮವಾಗಲಿ ಎಂದು ಹಾರೈಸುತ್ತಾ ಹಾಡುವ ಹಾಡುಗಳು ಪ್ರಮುಖವಾಗಿ ಮದುವೆ ಮಹತ್ವ ತಿಳಸಿಕೊಡುತ್ತವೆ.

ನಾಗೋಲಿ ಸಮಯದ ಉಯ್ಯಾಲೆ ಹಾಡು, ಸುರಗಿ ಗಳಸುವ ಹಾಡು ಹೆಣ್ಣೊಪ್ಪಿಸುವ ಹಾಡು, ಬೀಗರ ಹಾಡು, ಕಟ್ಟುವ ಹಾಡು: ಅಕ್ಕಿಕಾಳು ಬಿದ್ದ ನಂತರ ಸತಿಪತಿಯರಿಗೆ ಮತ್ತೆ ಅರಿಷಿಣ ಹಚ್ಚಿ ಸುರಗಿ ಸುತ್ತಿ ನೀರು ಹಾಕುತ್ತಾರೆ. ಇದನ್ನು ನಾಗೋಲಿ ಸುರಗಿ ಎನ್ನುವರು. ಇದು ಕೊನೆಯ ಸುರಗಿಯೂ ಹೌದು. ಆದರೆ ಇಲ್ಲಿ ಉಯ್ಯಾಲೆ ಹಾಡು ಹಾಡುವರು. ಸಂಪಿಗೆ ಹೂ, ಮಲ್ಲಿಗೆ ಹೂವನು ಚೆಲ್ಲುತ ತೂಗೀರೆ ನೀವು ತೂಗೀರೆ, ಎಂಬ ಉಯ್ಯಾಲೆ ಹಾಡನ್ನು ಹಾಡುವರು. ಇದು ಕೂಡಾ ಮಹತ್ವದ್ದಾಗಿದೆ. ಮದುಮಗನನ್ನು ಸೋದರಮಾವ ಮದುವೆ ಮಂಟಪಕ್ಕೆ ಕರೆತರುವ ಸಂದರ್ಭದಲ್ಲಿ 'ಲಿಂಬೆಹಣ್ಣು ಬೇಕ, ಬಾಲನ ಸುರಿಗಿಗೆ ಬಾಳೆಹಣ್ಣು ಬೇಕು' ಎಂಬ ಹಾಡುಗಳು ಸುರಗಿಗಟ್ಟಿಸುವ ಹಾಡುಗಳನ್ನು ಮುತ್ತೈದೆಯರು ಹಾಡುವರು. ಇಲ್ಲಿ ಮದುವೆ ಒಬ್ಬರಿಂದಾಗುವುದಿಲ್ಲ. ಮದುವೆಗೆ ಎಲ್ಲ ಸಂಬಂಧಿಗಳು ಬೇಕಾಗುತ್ತಾರೆ. ಇಲ್ಲಿ ಸೋದರ ಮಾವನ ಪಾತ್ರ ಹಿರಿದಾದುದು ಹಾಗೂ ಹಿರಿಮೆಯನ್ನು ಹೆಚ್ಚಿಸುವಂತದ್ದು. "ಕೊಟ್ಟ ಹೆಣ್ಣು ಕುಲದ ಹೊರಗೆ" ಅಂದಹಾಗೆ ವಧುವಿನ ತಂದೆ-ತಾಯಿಗಳು ವರನ ತಂದೆ-ತಾಯಿಯವರಿಗೆ ಸರ್ವಜನ ಸಾಕ್ಷಿಯಾಗಿ ತನ್ನ ಮಗಳನ್ನು ಧಾರೆಯೆರೆದು ಕೊಡುವುದು.ಇದು ಮದುವೆ ವಿಧಾನಗಳಲ್ಲಿ ಕೊನೆಯದು. ಇಲ್ಲಿ ಎಲ್ಲರ ಸಮ್ಮುಖದಲ್ಲಿ ಹೆಣ್ಣು ಮಕ್ಕಳು ಹಾಡುವ ಹಾಡುಗಳನ್ನು ಕೇಳದರೆ ಕಣ್ಣೀರ ಖೋಡಿ ಹರಿಯ ತೊಡಗುತ್ತದೆ. ಇದರಿಂದ ಹೆಣ್ಣು ಮಕ್ಕಳು ಮದುವೆ ಆಗುವತನಕ ಅಷ್ಟೇ ನಮ್ಮ ಮಕ್ಕಳು. ನಂತರ ಅವರ ಮಕ್ಕಳು, ಬದುಕು, ಎಂದು ಹಳ್ಳಿಯಲ್ಲಿ ಹೇಳುತ್ತಾರೆ.

"ಅವಳು ನಮ್ಮ ಮಗಳಲ್ಲ. ನಿಮ್ಮ ಮಗಳೆಂದು ತಿಳಿದು ಅವಳನ್ನು ಸಾಕಿ ಸಲುಹಿರಿ" ಎನ್ನುವ ಮಾತು ಹಾಡು ಅರ್ಥಪೂರ್ಣವಾದದ್ದು.ಆಗ ತಾಯಿಯ ಕರಳು ಕೊಯ್ದಂತಾಗುತ್ತದೆ ಏಕೆಂದರೆ,

ಒಂದು ಕಡೆ ಸಂತೋಷವಾಗಿದ್ದರೆ ಮತ್ತೊಂದೆಡೆ ದುಃಖವಾಗುತ್ತದೆ. ಮದುವೆ ಆದದ್ದು ಸಂತೋಷ ಆದರೆ, ಮಗಳನ್ನು ಇನ್ನೊಬ್ಬರಿಗೆ ಒಪ್ಪಿಸುವುದು ದುಃಖವಾಗುತ್ತದೆ. ತವರ ಮನೆಯಲ್ಲಿ ರಾಣಿಯ ಹಾಗೆ ಬೆಳೆದವಳು ಈಗ "ಕಟುಕರ ಕೈಯಲ್ಲಿ ಕುರಿ ಕೊಟ್ಟಂತೆ. ಕುಂಬಳ ಕಾಯಿಗೆ ಕುಡಗೋಲ ಕೊಟ್ಟಂಗ, ಬಾಳೆಯ ಹಣ್ಣಿಗೆ ಈಳಿಗೆ ಕೊಟ್ಟಂಗ ನಮ್ಮ ಮಗಳನ್ನು ಬೀಗುತಿಗೆ ಕೊಡುತೇವು" ಎನ್ನುವ ಹಾಡು ಎಂತವರಿಗೂ ಕಣ್ಣೀರು ಬರಿಸುವಂತದ್ದು.

'ದೂರದ ಗುಡ್ಡ ಕಣ್ಣಿಗೆ ನುಣ್ಣಗೆ' ಎಂಬಂತೆ ಮಗಳನ್ನು ಕೊಡುವ ಮೊದಲು ಒಳ್ಳೆಯವರು,ಗುಣವಂತರು,ಶ್ರೀಮಂತರು ಕಾಣುತ್ತಿದ್ದರು. ಆದರೆ ನಮ್ಮ ಮಗಳನ್ನು ಕೊಟ್ಟ ಮೇಲೆ ತಿಳಿಯಿತು ಇವರ ಗುಣ ಎಂದು ಬೀಗರು ಹಾಡುತ್ತಾರೆ.

ಉದಾ:- ಮ್ಯಾಲೆಲ್ಲ ಬೆಳಕು ಒಳಗೆಲ್ಲಾ ಹುಳುಕು ಎಂಬಂತೆ ಸಾವಿರ ಸುಳ್ಳು ಹೇಳಿ ಮದುವೆ ಮಾಡ್ಸ್ಯಾರ ಎಂಬಂತೆ ಇವರ ಹುಳುಕು ಈಗ ಹೊರಬಿದ್ದಿತು ಎಂದು ಬೀಗರು ಹಾಡುತ್ತಾರೆ.

ಅಷ್ಟು ಇದೆ, ಇಷ್ಟು ಇದೆ, ಎಂದು ಸುಳ್ಳು ಹೇಳಿ ನಮ್ಮ ಮಗಳನ್ನು ತೆಗೆದುಕೊಂಡರು. ಅದೇ ನಮ್ಮ "ಮಗಳು ಮಹಾದೇವಿಯಂತಾಕಿ ಅಳಿಯ ನೋಡಿದ್ರ ಒಡ್ರಂತಾವಾ" ಎಂದು ಬೈದು ಹಾಡುವ ಹಾಡು ಬೀಗರ ಹಾಡು. ಅಳಿಯನ ಮನೆಯ ಹುಳುಕು ತಿಳಿಯುವುದು, ತಿಳಿದು ಮರಗುವುದು ಮಗಳ ಸಲುವಾಗಿ ಇವೆಲ್ಲಾ ಅವರ ಗುಟ್ಟು ರಟ್ಟಾಗಿದೆ ಎಂದರ್ಥ. ಸುಳ್ಳು ಬಹಳ ದಿನ ಬಚ್ಚಿಡಾಕ ಆಗೋದಿಲ್ಲ ಎಂಬಂತೆ ಇದರ ತಾತ್ಪರ್ಯ.

ಮರಕ ಮುತ್ತಿನ ಕಟ್ಟ ಒನಕಿಗೆ ಬಾಸಿಂಗ ಕಟ್ಟಿವನಿತ್ಯಾರು ಅಕ್ಕಿ ಕುಟ್ಟುತ್ತಲೇ ಹಾಡುವ ಹಾಡು ಕುಟ್ಟುವ ಹಾಡು ಮುತ್ತೈದೆಯರು ಒನಕೆಯಿಂದ ಕುಟ್ಟುವುದು ಮದುವೆಯ ಮಹತ್ವದ ಕಾರ್ಯಗಳಲ್ಲಿ ಇದು ಒಂದಾಗಿದೆ.

<u>ಕಂಕಣ ಕಟ್ಟುವ ಹಾಡು, ಸುರಗಿ ಕೊಡುವ ಹಾಡು, ಹಾಸಕ್ಕಿ ಹಾಡು, ಬಾಸಿಂಗ ಕಟ್ಟುವ ಹಾಡು, ಬಷ್ಟಗಿ ಹಾಡು :</u> ಕೈಗಳಿಗೆ ಕಂಕಣ ಕಟ್ಟುವುದು. ವಧು ವರರುಗೃಹಸ್ಥಾಶ್ರಮ ಸ್ವೀಕರಿಸಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್‌ವಿಧಫಲ ಪುರುಷಾರ್ಥಗಳನ್ನು ಶ್ರದ್ಧಾಭಕ್ತಿಯಿಂದ ಹೊಂದಲು ಕಂಕಣ ಬದ್ಧರಾದ ಸಂಕೇತವಾಗಿ ಕಂಕಣಧಾರಣ ಕ್ರಮ ಅನುಸರಿಸಲಾಗುತ್ತದೆ. ಇತ್ತೀಚೆಗೆ ಕಂಕಣದಾರಗಳಲ್ಲದೇ ಅದಕ್ಕೆ ಅರಿಷಿನ ಬೇರು, ವೀಳ್ಯದೆಲೆಗಳಿಂದಲೂ ಕಂಕರಣದಾರ ಸಿದ್ಧಪಡಿಸಿ ಪೂಜಿಸಿ ಕಟ್ಟುತ್ತಾರೆ. ಆಗ ಮುತ್ತೈದೆಯರು ಮದುಮಕ್ಕಳ ಮೇಲೆ ಹಾಡನ್ನು

ಹಾಡುತ್ತಾರೆ. ಕಂಕಣ ಕಟ್ಟುವಾಗಲೂ ಹಾಡುವುದನ್ನು ನೋಡಿದರೆ ಮುಂದೆ ಅವರ ಜೀವನ ಸುಖಮಯವಾಗಿರಲೆಂದು ಹಾರೈಸುತ್ತೇವೆ ಎನ್ನುತ್ತಾರೆ.

ಹೆಣ್ಣಿನ ಕಡೆಯವರು ಎಷ್ಟೇ ಬಡತನವಿದ್ದರೂ ಕೆಲವೊಂದು ಸುರಗಿ ಸಾಮಾನುಗಳನ್ನು ಕೊಡಲೇಬೇಕು. ಉದಾ:- ಕೊಡ, ಆರತಿ, ತಾಟು, ತಂಬಿಗೆ, ಕಾಲುತೊಳೆಯುವ ಹಿತ್ತಾಳೆ ಬುಟ್ಟಿ, ಕೂಡ್ರುವ ಏಣಿ ಇತ್ಯಾದಿ ಸಾಮಾನುಗಳನ್ನು ಕೊಡಲೇಬೇಕು ಏಕೆಂದರೆ, ಮಗಳ ನೂತನ ಸಂಸಾರಕ್ಕೆ ಬೇಕಾಗುವ ನಿತ್ಯ ಉಪಯೋಗಿ ಪಾತ್ರೆ, ಪಗಡೆಗಳೇ ಸುರಗಿ ಸಾಮಾನು. ಇವು ಇನ್ನೊಬ್ಬರ ಮನೆಗೆ ಹೋಗಿ ಜೀವನ ನಡೆಸಲು ಬೇಕಾದ ಸಾಮಗ್ರಿಗಳನ್ನು ಸೂಚಿಸುತ್ತದೆ. ಇದು ಸಂಪ್ರದಾಯದಂತೆ ಇಂದಿಗೂ ಕೂಡಾ ಚಾಲ್ತಿಯಲ್ಲಿದೆ. ಹೀಗೆ ಸುರಗಿ ಸಾಮಾನು ಕೊಡುವಾಗ ಊದಿಸುತ್ತಾ-ಬಾರಿಸುತ್ತಾ-ಮೆರವಣಿಗೆಯಂತೆ ಈ ಸಾಮಾನುಗಳನ್ನು ಗಂಡನ ಮನೆಕಡೆಯವರಿಗೆ ಮುಟ್ಟಿಸುತ್ತಾರೆ ಆಗಲೂ ಕೂಡಾ ಗರತಿಯವರು ರಸಪೂರ್ಣ ಹಾಡುಗಳನ್ನು ಹಾಡುತ್ತಾರೆ.

ಕರಿಕಂಬಳ ಮೇಲೆ ಅಕ್ಕಿಯಿಂದ ರಂಗೋಲಿ ಹಾಕಿ ಈ ರಂಗೋಲಿಯ ಮೇಲೆ ವಧು ವರನನ್ನು ಕುಳ್ಳರಿಸಿ ಹಾಡುವುದು ಹಾಸಕ್ಕಿ ಹಾಡು. ಹಾಸಕ್ಕಿ ಹಾಡು ಸುಮಂಗೆಲೆಯರು ಮುತ್ತೈದೆಯರು ಹಾಡುತ್ತಾರೆ. ಇದು ಮದುವೆ ಸಂದರ್ಭದಲ್ಲಿ ಇದು ಕೂಡಾ ಮಹತ್ವದ್ದಾಗಿದೆ.

ಎಲ್ಲ ಕಾರ್ಯವಿಧಾನಕ್ಕಿಂತಲೂ ಈ ಬಾಸಿಂಗ ಕಟ್ಟುವ ಹಾಡು/ವಿಧಿ ವಿಧಾನ ತುಂಬಾ ಮಹತ್ವದ್ದು. ಅದಕ್ಕೆ ಹೇಳುತ್ತಾರೆ 'ಬಾಸಿಂಗ ಬಲ' ಇರಬೇಕು ಅಂತ ಬಾಸಿಂಗ ಬಲ ಬರಬೇಕಾದರೆ ಆ ದೇವರು ನಮ್ಮ ಹಣೆಬರಹದಲ್ಲಿ ಬರೆದಿರಬೇಕು. ಅಂತಹವರಿಗೆ ಮಾತ್ರ ಆ ಬಾಸಿಂಗ ಬಲ ಕೂಡುವುದುಂಟು ಎಂದು ಗ್ರಾಮೀಣ ಭಾಷೆಯಲ್ಲಿ ಹೇಳುತ್ತಾರೆ.

"ಬಾಸಿಂಗ ಸೂರಿರಿ- ಬಾಸಿಂಗ ಇಳವಿಡಿರಿ

ಪುರುಷರ ಗತಿಯೆಂಬ ಪುಣ್ಯಾ ಸ್ತ್ರೀ ಸತಿ" ಇರುತ್ತಾಳೆ ಎಂಬುದು ಬಾಸಿಂಗ ಕಟ್ಟುವಾಗಿನ ಹಾಡು ತುಂಬಾ ಮಹತ್ವದ್ದಾಗಿದೆ.

ಮದುಮಕ್ಕಳ ಹಣೆಗೆ ಕಟ್ಟಲು ಬಾಸಿಂಗ ದಂಡೆ, ತರಲು ವಾದ್ಯ ವೈಭವದೊಂದಿಗೆ ಹೂಗಾರನ ಮನೆಗೆ ಹೋಗಿ ಆತನಿಗೆ ಮೊದಲೇ ಹೇಳಿರುತ್ತಾರೆ. ಬಾಸಿಂಗ ದಂಡಿ ಪೂಜಿಸಿ ಆರತಿ ಮಾಡಿದ ಮೇಲೆ ಹೂಗಾರನಿಗೆ ಉಲುಪೆಕೊಟ್ಟು ಬಾಸಿಂಗ ಬಲವುಳ್ಳವನಿಂದ ಅಂದರೆ ದೇವಗುಣ (ಗುರುಬಲವಿದ್ದ) ಪುರುಷನಿಗೆ ಬಾಸಿಂಗ ತೆಗೆದುಕೊಂಡುಬರುವ, ಕಟ್ಟುವ ಮದುವೆ ನಂತರ ಕಟ್ಟಿದ ಬಾಸಿಂಗ ಬಿಚ್ಚಿಡುವ ಕಾರ್ಯ ಅವರೇ ಮಾಡಬೇಕು. ಒಟ್ಟಿನಲ್ಲಿ ಈ ಬಾಸಿಂಗ ತೆಗೆದುಕೊಳ್ಳುವುದರಿಂದ ಹಿಡಿದು ಮದುವೆ ಆದ ಮೇಲೆ ಬಾಸಿಂಗ ಹೊಳಿಯಲ್ಲಿ ಬಿಡುವ ಕೆಲಸವೂ ಸೋದರಮಾವನಿಗಿದೆ. ಬಾಸಿಂಗ ಕಟ್ಟುವ ಕಾರ್ಯ ಎಷ್ಟು ಮಹತ್ವದ್ದೋ, ಅಷ್ಟೇ ಬಷ್ಟಗಿ ಹಾಕುವ ಕೆಲಸ ಮಹತ್ವದ್ದಾಗಿದೆ. ವಧು-ವರರ ಪಕ್ಷದವರು ಮೊಟ್ಟಮೊದಲು ತಮ್ಮೊಳಗೆ

ನಿಶ್ಚಯವನ್ನು ಮಾಡಿಕೊಂಡು ಕೆನ್ನೆಗೆ ಕುಂಕುಮ ಇಟ್ಟು ಆ ಮೇಲೆ ತಾವೇ ನಿಶ್ಚಯದ ಮಾತುಗಳನ್ನು ಸಾರ್ವಜನಿಕರಲ್ಲಿ ಇಟ್ಟು ಗಟ್ಟಿ ಮಾಡುತ್ತಾರೆ. ಈ ಕಾಲದ ನಿಶ್ಚಯದ ಕಾರ್ಯಕ್ಕೆ "ಭಷ್ಟಗಿ" ಹಾಕುವುದು ಎನ್ನುತ್ತಾರೆ.

ಈ ಸಂದರ್ಭದಲ್ಲಂತೂ ಹೆಂಗಳೆಯರು ಹಾಡು ಹೇಳುತ್ತಾರೆ. ಅವನ್ನು ಬಷ್ಟಗಿ ಹಾಡುಗಳೆಂದು ಕರೆಯುತ್ತಾರೆ. ಈ ಮದುವೆ ಹಾಡುಗಳನ್ನು ಹೇಳಿದವರ ಪರಿಚಯ ಕೂಡಾ ಡಾ.ಸಿ.ಕೆ.ನಾವಲಗಿ ಅವರು ಮಾಡಿದ್ದಾರೆ. ಇದರಿಂದ ಇವರ ಒಂದು ಶಿಸ್ತುಬದ್ಧವಾದ ಚೌಕಟ್ಟನ್ನು ತಿಳಿಯಲು ಅನುಕೂಲವಾಗಿದೆ. ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಿಗೆ ಸಂಬಂಧಪಟ್ಟವರು ಇದ್ದಾರೆ.ಈ ಎಲ್ಲ ಹಾಡುಗಳನ್ನು ಹಾಡಿದವರು ಒಟ್ಟು ಎಂಟು ಜನ. ಇಲ್ಲಿ ವಿಶೇಷವೇನೆಂದರೆ, ಇಪ್ಪತ್ತೆರಡು ಮದುವೆಹಾಡುಗಳಲ್ಲಿ, ಹದಿನೈದು ಹಾಡುಗಳನ್ನು ಒಬ್ಬಳೇ ಶ್ರೀಮತಿ ಬಾಗವ್ವ ಈರಪ್ಪ ಜಿಗಜಿನ್ನಿ ಹಾಡಿದ್ದಾರೆ. ಅವರು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಮುನವಳ್ಳಿ ಧಡೇರ ಸುಸಂಸ್ಕೃತ ಕುಟುಂಬದಲ್ಲಿ ಜನಿಸಿದ್ದಾರೆ. ಇವರು 'ಮದುವೆ ಹಾಡುಗಳ ಕೋಗಿಲೆಯಂದೇ' ಪ್ರಸಿದ್ಧಳಾಗಿದ್ದಳು. ಈಗ ಇವಳು ಬದುಕಿಲ್ಲ. ಅದೇ ರೀತಿ ನಾವಲಗಿ ದಂಪತಿಗಳು ಮದುವೆ ಹಾಡುಗಳನ್ನಷ್ಟೇ ಸಂಪಾದಿಸದೇ ಹಾಡಿದವರ ಪರಿಚಯಸಹಿತ ಪಟ್ಟಿಮಾಡಿದ್ದು ತುಂಬಾ ಸಹಾಯಕವಾಗಿದೆ. ಈ ರೀತಿ ಪಟ್ಟಿಯನ್ನು ಕೊಡದೆ ಇದ್ದಿದ್ದರೆ ಮುಂದಿನ ಅದ್ಯಯನಕ್ಕೆ ಸಹಾಯಕವಾಗುತ್ತಿರಲಿಲ್ಲ. ಅದರ ಜೊತೆಗೆ ಅನುಬಂಧದಲ್ಲಿ ಮದುವೆ ಕುರಿತ ಗಾದೆ, ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡಬೇಕಂತ. ಹಾಗೇಯೆ ಲಗ್ನ ಆದ ವರ್ಷ ಮನೆಗೆ ಸುಣ್ಣ ಹಚ್ಚಬಾರದು ಇಂತಹ ನಂಬಿಕೆಗಳನ್ನು ಸಂಗ್ರಹಿಸಿದ್ದು ಇದಕ್ಕೊಂದು ಮೆರಗು ತರುವಂತಿವೆ.

೩.೪ ಜನಪದ ಕಥನಗೀತ ಸಂಚಯ

ಡಾ.ಸಿ.ಕೆ.ನಾವಲಗಿ ಅವರು ಈ ಗ್ರಂಥವನ್ನು ತಮ್ಮ ಪತ್ನಿ ಶಕುಂತಲಾ ಅವರೊಂದಿಗೆ ಜೊತೆಗೂಡಿ ಸಂಪಾದಿಸಿದ್ದಾರೆ. ಈ ಪುಸ್ತಕದ ಒಟ್ಟು ಪುಟಗಳು ೭೦. ೨೦೦೨ ರಲ್ಲಿ ಇದು ಪ್ರಕಟಗೊಂಡಿದ್ದು ಇದರ ಬೆಲೆ ೬೦/- ರೂಪಾಯಿ.

ಈ ಪುಸ್ತಕದ ಪ್ರಕಾಶಕರು-ಕನಕ ಸಾಹಿತ್ಯ ಪ್ರತಿಷ್ಠಾನ(ರಿ) ಮಂಜುನಾಥ ನಗರ ಬೆಂಗಳೂರು. ಇದರ ಮೂಲ ಪುಟವಿನ್ಯಾಸ ಶ್ರೀ ಆರ್.ಭರತ್. ನಂತರ ಅರ್ಪಣೆ ಹೇಳಲಾಗಿದೆ. ತದನಂತರ ಮನವು ನೆನೆದಾಗ ತನುವು ಬಾಗಿತ್ತು ಎಂಬುದನ್ನು ಸಂಪಾದಕರೇ ಹೇಳಿದ್ದಾರೆ. ಅದೇ ರೀತಿ ಪ್ರಸ್ತಾವಣೆ ಮತ್ತು ಪರಿವಿಡಿಯ ಸಂಕ್ಷಿಪ್ತ ಅರ್ಥ ಒಳಗೊಂಡಿದೆ. ನಂತರ ಪರಿವಿಡಿ ಹೇಳಲಾಗಿದೆ. ಗ್ರಂಥ ಡಾ.ಸಿ.ಕೆ.ಎನ್ ಕೃತಿಗಳ ಕುರಿತು ಅಭಿಪ್ರಾಯಗಳನ್ನು ಅವರ ಪ್ರಕಟಿತ ಕೃತಿಗಳ ಪರಿಚಯ ಒಳಗೊಂಡಿದೆ.. ಹಾಗೆಯೇ ಬೆನ್ನುಡಿಯನ್ನು ಶ್ರೇಷ್ಠ ಜಾನಪದ ವಿದ್ವಾಂಸರಾದ ಡಾ.ಸೋಮಶೇಖರ ಇಮ್ರಾಪುರ ಬರೆದಿದ್ದಾರೆ. ಗ್ರಂಥದ ಕೊನೆ ಭಾಗದಲ್ಲಿ ಡಾ.ಸಿ.ಕೆ.ನವಲಗಿ ಅವರು ಇದುವರೆಗೆ ಪ್ರಕಟಿಸಿದ ಗ್ರಂಥಗಳ ಕುರಿತು ವಿವಿಧ ವಿದ್ವಾಂಸರು.ಅಭಿಮಾನಿಗಳು ಬರೆದ ಅಭಿಪ್ರಾಯಗಳನ್ನು ಮುದ್ರಿಸಲಾಗಿದೆ.

ಮನವು ನೆನೆದಾಗ ತನುವು ಬಾಗಿತ್ತು:ಪ್ರಸ್ತುತ"ಜನಪದ ಕಥನಗೀತ" ಸಂಚಯದಲ್ಲಿ ಪೌರಾಣಿಕ ಐತಿಹಾಸಿಕ-ಸಾಮಾಜಿಕವಾಗಿ ವರ್ಗೀಕರಿಸಿಕೊಂಡು ಒಟ್ಟು ಹನ್ನೆರಡು ಕಥನಗೀತಗಳನ್ನು ಒಳಗೊಂಡಿದೆ. ಹೆಣ್ಣಿನ ನೋವು-ಸಂಕಟ, ಕಥೆ-ವ್ಯಥೆ, ತಳಮಳ-ತಿರಸ್ಕಾರ, ಅಪಮಾನಗಳಿಗೆ ಒಳಗಾಗುತ್ತ ಬಂದ ಭಾರತೀಯ ಸ್ತ್ರೀ ಪರಂಪರೆಯ ಸೂಕ್ಷ್ಮ ಒಳನೋಟಗಳನ್ನು ಅರ್ಥೈಸಿಕೊಳ್ಳಲು ಈ ಬಗೆಯ ಸಂಗ್ರಹ ಸಂಪಾದನೆ ಸಂಶೋಧನೆಗಳು ಅರ್ಥಪೂರ್ಣ ಹಾಗೂ ಉಪಯುಕ್ತವಾಗುತ್ತವೆ. ಅದರಲ್ಲೂ ಇಲ್ಲಿಯ ಬಹುತೇಕ ಹಾಡುಗಳು ಹೆಣ್ಣನ್ನೇ ಕೇಂದ್ರವಾಗಿಸಿಕೊಂಡು ರಚಿತವಾಗಿದೆ. ಈ ಜನಪದ ಕಥನಗೀತ ಸಂಗ್ರಹಕಾರ್ಯದ ಬಹುತೇಕ ಪಾಲು-ನನ್ನ ಶ್ರೀಮತಿಯವರದೇ ಎಂದು ಡಾ.ಸಿ.ಕೆ.ನಾವಲಗಿ ಅವರು ಹೇಳುವಂತೆ -ಅವರಿಗೆ ನೆರವು ನೀಡಿದ್ದೇನೆ ಅಷ್ಟೇ ಎನ್ನುತ್ತಾರೆ. ಡಾ.ಸಿ.ಕೆ.ನಾವಲಗಿ ಅವರು ಹಾಗೆ ನೋಡಿದರೆ ಈ ಪುಸ್ತಕ ಶ್ರೀಮತಿ ಶಕುಂತಲಾ ಧಡೇದ ಅವರ ಹೆಸರಿನಿಂದ ಪ್ರಕಟವಾಗಬೇಕಿತ್ತು ಆದರೆ, ಶ್ರೀಮತಿಯವರ ಒತ್ತಾಸೆಯ ಮೇರೆಗೆ ನನ್ನ ಹೆಸರೂ ಸೇರಿಕೊಂಡಿದೆ ಎನ್ನುವ ಡಾ॥ ಸಿ.ಕೆ.ನಾವಲಗಿ ಅವರ ಮನದಾಳದ ಮಾತೂ ಆಗಿದೆ.

ಇದರಲ್ಲಿ ಈ ಜನಪದ ಕಾರ್ಯಕ್ಕೆ ಪ್ರೋತ್ಸಾಹದಂತಹ ವ್ಯಕ್ತಿಗಳು ಹೆಚ್ಚು-ಕಡಿಮೆ ತಮ್ಮ ಸಂಬಂಧಿಗಳಾಗಿದ್ದಾರೆ. ಅದೇ ರೀತಿ ಹಾಡುಗಾರರಿಗೆ ಬೆನ್ನುಡಿ & ಮುನ್ನುಡಿ ಬರೆದವರಿಗೆ ಪ್ರಣಾಮ ಸಲ್ಲಿಸುವ ಮೂಲಕ ಪ್ರಕಾಶನ, ಮುಖಪುಟ, ಮುದ್ರಣ ಮಾಡಿದವರಿಗೆ ಕೃತಜ್ಞತೆಗಳನ್ನು ಸಲ್ಲಿಸುವ ಮೂಲಕ ತಮ್ಮ ಮನದಾಳ ಮಾತುಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. 'ಕಥನಗೀತ' ವಿಶಿಷ್ಟವಾದ ಜಾನಪದ ಕಾವ್ಯ ಪ್ರಕಾರ ಕಥೆ ಹೇಳುವುದು, ಕೇಳುವುದು ಅನಾದಿ ಕಾಲದಿಂದಲೂ ನಡೆದು ಬಂದಿದೆ. ಈ ಕತೆಗಳನ್ನು ಚಿಕ್ಕಮಕ್ಕಳಂತೂ ಕಿವಿಗೊಟ್ಟು ಕತೆ ಕೇಳುತ್ತವೆ. ದೊಡ್ಡವರಿಗೂ ಕೂಡಾ ಅಷ್ಟೇ ಕುತೂಹಲ. ಕಥೆ-ಗದ್ಯಪದ್ಯಗಳೆರಡು ರೂಪದಲ್ಲಿ ಇರಬಹುದು. ಗದ್ಯರೂಪ ದಲ್ಲಿದ್ದರೆ-ಗದ್ಯಕತೆ-ಪದ್ಯರೂಪದಲ್ಲಿದ್ದರೆ-ಕಥನ ಗೀತ । ಕಥನಕವನ ಎನ್ನುತ್ತಾರೆ.

ಕಥನ ಕವನದಲ್ಲಿ ಕ್ರಿಯೆ ಪಾತ್ರಗಳು, ಸಂಯೋಜನೆಗಳಿಗೆ ಪ್ರಾಮುಖ್ಯತೆ, ಕ್ರಿಯೆ ನಾಟಕೀಯವಾಗಿರುತ್ತದೆ. ಮುಖ್ಯಪಾತ್ರಕ್ಕೆ ಪೂರಕವಾಗಿ ಉಳಿದೆಲ್ಲ ಪಾತ್ರಗಳು ಬರುತ್ತವೆ. ಸಂಕ್ಷಿಪ್ತತೆ ಕವನದುದ್ದಕ್ಕೂ ಕಂಡುಬರುವ ಗುಣ. ಕಥನಕವನ ಸಾಮಾನ್ಯವಾಗಿ ವ್ಯಕ್ತಿ ನಿಷ್ಠವಲ್ಲ. ವಸ್ತುನಿಷ್ಠ, ಇದು ಮಾನವೀಯ ಸ್ವಭಾವ ಲೋಕನೀತಿಯನ್ನು ಸಾರುವುದುಂಟು. ಕಥನ ಕವನದಲ್ಲಿ 'ಗದ್ಯದ ಸೊಗಸು-ಸೊಗಸು-ಸೊವಡು-ಹರಿವು' ಗಳಿರುತ್ತವೆ. ಆರಂಭದ ತೋಂಡಿ ಸಂಪ್ರದಾಯ [Oral Tradition] ದ ಕತೆಗಳನ್ನು ಒಬ್ಬರಿಂದ-ಇನ್ನೊಬ್ಬರು-ಕೇಳಿ ನೆನಪಿನಲ್ಲಿಟ್ಟುಕೊಂಡು ಮತ್ತೊಬ್ಬರಿಗೆ ಹೇಳಬೇಕಾಗುತ್ತಿತ್ತು. ಈ ಪರಂಪರಾಗತ ಕತೆಗಳು ಒಬ್ಬರ ಬಾಯಿಯಿಂದ ಇನ್ನೊಬ್ಬರ ಕಿವಿಗೆ ಸೇರಿ ಅವರು ಬೇರೊಬ್ಬರಿಗೆ ಹೇಳುವಾಗ ಸಾಕಷ್ಟು ಬದಲಾವಣೆಗಳಾಗುತ್ತಿದ್ದುದುಂಟು. ಹೀಗಾಗಿ ಈ ಬಗೆಯ ಕಥೆಗಳಿಗೆ ಒಂದೇ ಒಂದು ಪಾಠವಿಲ್ಲ. ಅನೇಕ ಪಾಠಗಳು ಇವನ್ನೇ ಜಾನಪದ ಕತೆಗಳೆಂದು ಗುರುತಿಸಲಾಗಿದೆ.

ಗುರು–ಶಿಷ್ಯರಿಗೆ ಹೇಳಿದ ಪದ್ಯರೂಪದ ಕತೆಯನ್ನು ಆ ಶಿಷ್ಯ ನೆನಪಿಟ್ಟುಕೊಂಡು ಮುಂದೆ ತನ್ನ ಶಿಷ್ಯರಿಗೆ ಹೇಳುತ್ತಿದ್ದ. ಹೀಗೆ ಗುರುಶಿಷ್ಯರ–ಪರಂಪರೆಯಲ್ಲಿ ಕತೆ ಉಳಿದುಕೊಂಡು ಬರುತ್ತಿತ್ತು ಎಂದು ಎಸ್. ಅನಂತನಾರಾಯಣ ಅವರು ಕಥನ ಕಾವ್ಯತೋಂಡಿ ಪರಂಪರೆಯಲ್ಲಿ ಸಾಗಿ– ಬಂದಿದ್ದನ್ನು ಗುರುತಿಸಿದ್ದಾರೆ.

ಹಬ್ಬ–ಹುಣ್ಣಿಮೆ, ಜಾತ್ರೆ–ಉತ್ಸವಾದಿಗಳಲ್ಲಿ ಕಥನ ರೂಪದ ಪದ್ಯಗಳನ್ನು ಹೇಳುವ ಸಂಪ್ರದಾಯ ಜನಪದದಲ್ಲಿ ಇದ್ದೇ ಇತ್ತು. ಕಥೋಪಜೀವಿಗಳು, ಲಾವಣಿಕಾರರು, ಗೊಂದಲಿಗರು, ಕಥನಗೀತೆಗಳನ್ನು ಲಾವಣಿಗಳನ್ನು ಹಾಡುತ್ತಾರೆ. ಕಥನಗೀತೆಗಳನ್ನು ಲಾವಣಿಗಳನ್ನು ಹಾಡುತ್ತಾರೆ. ಕಥನಗೀತೆಗಳನ್ನು ಹಾಡುವ ಇತರರೂ ಇದ್ದಾರೆ. ಹೀಗಾಗಿ ಪದ್ಯ ಕತೆಗಳು ಹುಲುಸಾಗಿ ಬೆಳೆಯಲು ಸಾಧ್ಯವಾಗಿದೆ. ಇಲ್ಲಿ ಕಥೆಗಿಂತ ವರ್ಣನೆಯೇ ಹೆಚ್ಚು. ಸಾಮಾನ್ಯವಾಗಿ ನಾಲ್ಕು ಸಾಲುಗಳುಳ್ಳ ಸುಲಭವಾಗಿ ಕಲಿಯಲು ಸಾಧ್ಯವಾಗುವ ಲಯವನ್ನುಳ್ಳ ಛಂದೋರೂಪ ಈ ಕಥನವಾಗಿದೆ.

ಡಾ. ಸಿ.ಕೆ.ನಾವಲಗಿ ಅವರು ಈಗಾಗಲೇ ಐವತ್ತಕ್ಕೂ ಹೆಚ್ಚು ಗ್ರಂಥಗಳ ಮೂಲಕ ನಾಡಿಗೆ ಚಿರಪರಿಚಿತರಾಗಿದ್ದಾರೆ. ಹಾಗಾಗಿ ಸುಸಂಸ್ಕೃತ ವ್ಯಕ್ತಿತ್ವ, ತೂಕಬದ್ಧ ಬರವಣಿಗೆಗಳ ಮೂಲಕ ಪ್ರಜ್ಞಾವಂತರ ವೈಚಾರಿಕ ನೆಲೆಯಲ್ಲಿ ಮಿಂಚಿದ್ದು ನಿಜ. ಅದೇ ರೀತಿ ಉತ್ತಮ ವಿಮರ್ಶಕರಾಗಿ–ವಿಮರ್ಶಕರ ಮೆಚ್ಚುಗೆಗೆ ಪಾತ್ರರಾಗಿ ಮೂಲತಃ ಜಾನಪದ ವಿದ್ಯಾರ್ಥಿಯಾಗಿ ಶ್ರೀಯುತರು ಪ್ರಸ್ತುತ ಜಾನಪದ ವಿದ್ವಾಂಸರಾಗಿ ಗುಣಾತ್ಮಕವಾದ ವಿಮರ್ಶನ ಲೇಖನಗಳ ಮೂಲಕ ಜಾನಪದ ಕ್ಷೇತ್ರಕ್ಕೆ ಹೊಸ ಆಲೋಚನೆಗಳನ್ನು ಕೊಟ್ಟಿದ್ದಾರೆ.

ಇವರ ಜೋಲಿತಪ್ಪದ ಚಿಂತನ ಶೀಲತೆ, ವಿಷಯ ನಿರೂಪಣೆಯಲ್ಲಿ ಆಳವಾದ ಆಲೋಚನಾದೀಪ್ತಿ, ಏಕಮುಖವಲ್ಲದ ವಿಮರ್ಶಾದೃಷ್ಟಿ, ಹೊಸತೊಂದನ್ನು ಗೃಹಿಸಬೇಕೆಂಬ ಹಂಬಲ ಡಾ. ಸಿ.ಕೆ.ನಾವಲಗಿ ಅವರ ಬರವಣಿಗೆಯುದ್ದಕ್ಕೂ ಮಿಳಿತಗೊಂಡಿರುವುದು ನಮ್ಮೆಲ್ಲರಿಗೆ ಕುತೂಹಲಕಾರಿಯಾಗಿದೆ.

ಒಬ್ಬ ಜಾನಪದ ಶ್ರೇಷ್ಠ ವಿದ್ವಾಂಸನಿಗಿರಬೇಕಾದ ಅರ್ಹತೆಗಳನ್ನು ಹೊಂದಿರುವ ಇವರಿಗೆ–ಗೋಕಾಕದ ಗಟ್ಟಿಯಾದ ಜಾನಪದ ಪರಿಸರವೂ ಪ್ರೇರಣೆಗೆ ಹರಿಗಟ್ಟಿದಂತಾಗಿದೆ.

"ಒಂದರ ಹಿಂದೆ ಒಂದು, ಮತ್ತೊಂದು, ಮುಗದೊಂದು, ಹೀಗೆ ಗ್ರಂಥಗಳನ್ನು ಪ್ರಕಟಿಸಿ ಅದರ ಬೆನ್ನಹಿಂದೆಯೇ ಡಾ. ಚೆನ್ನಬಸವ ಮತ್ತು ಶ್ರೀಮತಿ ಶಕುಂತಲಾ ಚನ್ನಬಸವ ದಂಪತಿಗಳು ಜಾನಪದ ತೇರನ್ನೆಳೆಯಲು ಸಿದ್ಧರಾಗಿ–'ಜಾನಪದ ಕಥನಗೀತ ಸಂಚಯ' ವನ್ನು ಪ್ರಕಟಿಸಿದ್ದು ಪರಮಸಂತೋಷ, ಸ್ವಾಗತಾರ್ಹ ಎಂದಿದ್ದಾರೆ ೧" ಡಾ.ಸೋಮಶೇಖರ ಇಮ್ರಾಪುರ

೧. ಜನಪದ ಕಥನಗೀತ ಸಂಚಯ ಸಂ.ಚನ್ನಬಸವ ನಾವಲಗಿ ಶಕುಂತಲಾ ನಾವಲಗಿ ಪ್ರ.ಕನಕ ಸಾಹಿತ್ಯ ಪ್ರತಿಷ್ಠಾನ(ರಿ)ಬೆಂಗಳೂರ ಪ್ರ.೨೦೦೨ ಬೆನ್ನುಡಿ

ಡಾ.ಸಿ.ಕೆ.ನಾವಲಗಿ ಅವರು ಈ ಕಥನಗಳನ್ನು ಮೂರು ರೀತಿಯಗಿ ವರ್ಗಿಕರಿಸಿದ್ದಾರೆ. ಇದೊಂದು ಉತ್ತಮವಾಗಿರತಕ್ಕಂತಹ ವರ್ಗಿಕರಣ ಹಾಗೂ ಉತ್ತಮವಾದಂತಹ ಸಂಪಾದನೆ ಆಗಿದೆ. ಪೌರಾಣಿಕ.ಐತಿಹಾಸಿಕ, ಸಾಮಾಜಿಕ ಕಥನಗೀತಗಳನ್ನು ಗಮನಿಸಿದಾಗ ಈ ಎಲ್ಲ ಕಥನಗಳ ಮಹತ್ವ ತಿಳಿದು ಬರುತ್ತದೆ ಹಾಗೂ ಇದರ ವೈವಿದ್ಯತೆ ಗೊತ್ತಾಗುತ್ತದೆ.

೪.೧ ಪೌರಾಣಿಕ

ಪಾರ್ವತಿ ತವರಿಗೆ ಹೋದದ್ದು : ಈ ಪೌರಾಣಿಕ ಕಥೆಗಳಲ್ಲಿ ಶಿವ-ಪಾರ್ವತಿಯವರ ದೇವತೆಗಳ ಬದುಕಿಗೂ, ಮಾನವನ ಬದುಕಿಗೂ, ತಾದಾತ್ಮ್ಯವನ್ನು ಕಲ್ಪಿಸಿದ್ದು- ಪೌರಾಣಿಕ ಕಥೆಗಳ ಮಹತ್ವ ಸಾರುವಂತಿದೆ. ಏಕೆಂದರೆ, ಹೆಣ್ಣುಮಕ್ಕಳು ತವರು ಮನೆಗೆ ಹೋಗಿಬರುವುದು. ಇಂದು ನಿನ್ನೆಯ ಸಂಗತಿಯೇನಲ್ಲ. ಅದು ಶಿವ-ಪಾರ್ವತಿಯ ಕಾಲದಿಂದಲೂ ಆಚರಣೆಯಲ್ಲಿತ್ತು ಎಂಬುವುದನ್ನು ಗಮನಕ್ಕೆ ತಂದಿದೆ. ತವರು ಮನೆಗೆ ಹೋಗಿಬರುತ್ತೇನೆ ಎಂದಾಗ ಶಿವನು ಹಲವಾರು ಪ್ರಶ್ನೆ ಹಾಕಿ ಕೇಳಿದ್ದಕ್ಕೆ ಅವಳು ಸೋಲದೆ ಪ್ರತ್ಯುತ್ತರ ಕೊಟ್ಟಾಗ ಅದು ತವರು ಮನೆಯ ಪ್ರೀತಿಯನ್ನು ಎತ್ತಿತೋರಿಸಿದಂತಿದೆ. ಇಂದು ಗಂಡನ ಮನೆಯಲ್ಲಿ ಏನೂ ಕಡಿಮೆ ಇರದಿದ್ದರೂ ಅವಳು ತವರು ಮನೆಯನ್ನು ನೆನೆಸುತ್ತಾಳೆ. ಏಕೆಂದರೆ, ತವರ ಮನೆಯಲ್ಲಿ ಏನೂ ಇರದಿದ್ದರೂ ಅವಳು ಅಲ್ಲಿ ಹೋಗಿ ಬಂದರೆ ಅವಳ ಮುಖ ಅರಳುತ್ತದೆ. ಪತಿಯ ಮನೆಯಲ್ಲಿ ಎಷ್ಟೇ ಇದ್ದರೂ ಅವಳ ಮುಖ ಬಾಡುತ್ತದೆ. ತವರು ಮನೆ ಅಂದರೆ ಯಾವುದೇ ಹೆಣ್ಣಿಗೆ ಪಂಚಪ್ರಾಣ.

"ಹೊಳಿಯ ದಂಡೆಯ ಮ್ಯಾಲಿನ

ಕರಕ್ಷೀಯಹಂಗ ಹಬ್ಬಲಿ"

ಯಾವತ್ತು ನನ್ನ ತವರ ಮನೆಗೆ ಬಡತನ ಬರದಿರಲಿ ಅಂತ ಸದಾ ದೇವರ ಸ್ಮರಣೆಯಲ್ಲಿರುತ್ತಾಳೆ.

"ಬಡತನವಿರಲಿ, ಸಿರಿತನವಿರಲಿ,

ಅವರಕೊಟ್ಟ ನೂಲೆಳೆ ಶ್ರೇಷ್ಠ"

ಎಂಬಂತೆ ತನ್ನ ತವರಮನೆಯವರಿಗೆ ಸ್ವತಃ ಪತಿಯೇ ಹಂಗಿಸಿದರೂ ಸಹಿಸಲಾರಳು, ಇದು ಅವಳ ತವರ ಮನೆಯ ಮಹತ್ವವನ್ನು ಎತ್ತಿ ತೋರಿಸುತ್ತದೆ. ಪಾರ್ವತಿ ತವರಿಗೆ ಹೋಗಲು ಪತಿಯಲ್ಲಿ ಕೇಳಿಕೊಂಡಿದ್ದು ಇಂದಿನ ಎಲ್ಲ ಸ್ತ್ರೀಯರಿಗೆ ಪ್ರತಿಬಿಂಬವಾದಂತಿದೆ. ಇದರ ತಾತ್ಪರ್ಯವೇನೆಂದರೆ, ಪೌರಾಣಿಕ ಕಥೆಗಳಲ್ಲಿಯೂ **"ಹೆಣ್ಣಿಗೆ ತವರು ಮನೆಯೇ ಶ್ರೇಷ್ಠ"** ಎಂಬುದು ಇಂದಿಗೂ ಮಹತ್ವವನ್ನು ಪೌರಾಣಿಕ ಕಥೆಗಳು ಪಡೆದುಕೊಂಡಿವೆ.

<u>ಕೊರವಂಜಿ:</u> ಎಂತಹ ಪುರುಷನಾದರೂ ಕೂಡಾ ಹೆಣ್ಣಿನ ಮುಂದೆ ಆಟ ನಡೆಯಲಾರದು ಎಂಬುದಕ್ಕೆ ಈ ಕೊರವಂಜಿ ಪಾತ್ರವೇ ಸಾಕ್ಷಿ. ಹೆಣ್ಣನ್ನು (ಗೌರಿ) ಒಲಿಸಿಕೊಳ್ಳಲು ಶಿವ ಮಾರುವೇಷದಲ್ಲಿ ಕೊರವಂಜಿಯಾಗಿ ಗೌರಿಯನ್ನು ಬೇಟಿಯಾಗುವುದಕ್ಕೆ ಪಟ್ಟ ಹರಸಾಹಸ ಅಷ್ಟಿಷ್ಟಲ್ಲ. ಇದನ್ನ ನೋಡಿದರೆ, ಹೆಣ್ಣಿನ ಮಹತ್ವ ತಿಳಿದು ಬರುತ್ತದೆ. **"ಹೆಣ್ಣಿಗೆ ಮರುಳಾಗದ ಗಂಡ ಇಲ್ಲ"** ಎಂಬಂತೆ ಇವರಲ್ಲಿ ಕಂಡು ಬರುತ್ತದೆ. 'ಸವತಿ ಅಂದರೆ ಸತ್ತ ಹೆಣ ಎದ್ದು ಕುಂತಂತೆ' ನಿನ್ನ ಮೇಲೆ ಸವತಿ, ಮಲಮಗ ಇದ್ದಾನೆ ಎನ್ನುವುದನ್ನು ಕೇಳಿ ಆ ಗೌರಿ ನೆಟ್ಟು-ನೆತ್ತಿಗೇರಿದ್ದು, ಇದರ ಮಹತ್ವ ಒಂದು ಹೆಣ್ಣು ಏನಾದರೂ ಸಹಿಸಬಲ್ಲಳು. ಆದರೆ ಸವತಿ, ಮಲಮಗ ನನ್ನ ಸಹಿಸಲು ಸಾಧ್ಯವಿಲ್ಲ ಎಂಬುದು ತಿಳಿದುಬರುತ್ತದೆ. ಇಂದಿನ ಆಧುನಿಕ ಜಗತ್ತಿನ ಹೆಣ್ಣು ಮಕ್ಕಳಿಗೆ ಇದು ಪೂರಕವಾಗಿದೆ. ಇದರಿಂದ ಪೌರಾಣಿಕ ಸ್ತ್ರೀಯೂ ಆಧುನಿಕ ಮಹಿಳೆಗೂ ಏನೂ ವ್ಯತ್ಯಾಸವಿಲ್ಲ ಎಂಬುದು ತಿಳಿದುಬರುತ್ತದೆ.

<u>ಪಾಂಡವರು ಪಗಡಿ ಆಡಿ ಸೋತದ್ದು:</u> ಯಾವುದೇ ಒಂದು ಹೆಣ್ಣಿಗೆ ತನ್ನ ಗಂಡ ಪೌರುಷನಾಗಿ ರಬೇಕು, ಧೀರ, ವೀರ ನಾಗಿರಬೇಕು. ಯಾರಿಗೂ ಸೋಲನ್ನೊಪ್ಪುವ ಗಂಡನನ್ನು ಅವಳು ಸಹಿಸಲಾರಳು. ಹಾಗೆಯೇ ಈ ದ್ರೌಪದಿಯ ಸ್ವಭಾವ, **"ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ"** ಎನ್ನುವ ನಾಚಿಕೆಗೇಡಿ ಸ್ವಭಾವ ಈ ಸೋತ ಪಾಂಡವರಲ್ಲಿ ಇತ್ತು. ಅವಳು ಪಂಚಪಾಂಡವರ ಹೆಂಡತಿ ಎಂದು ಲೋಕ ಪ್ರಖ್ಯಾತಿ ಪಡೆದಿದ್ದು ಕೇವಲ ಪಗಡಿ ಆಟ ಎಲ್ಲವೂ ಕುಂದುತ್ತದೆ. ಇದರಿಂದ ಅವಳ ದುಗುಡ ಹೃದಯ ವಿದ್ರಾಹಕವಾಗುತ್ತದೆ. ಇಂದಿನ ಸಮಾಜದಲ್ಲಿಯೂ ಕೂಡಾ ನಾವು ನೋಡುತ್ತೇವೆ. ತನ್ನ ಗಂಡ ಇನ್ನೊಬ್ಬರಿಗೂ, ಯಾರಿಗೂ ಒಳಗಾಗಬಾರದೆಂಬ ಹೆಣ್ಣಿನ ಬಯಕೆ ಇಂದಿಗೂ ಕೂಡಾ ಅನ್ವಯಿಸುತ್ತದೆ.

ಇಂದು ಪುರುಷರು ತನ್ನ ಆಸ್ತಿ-ಪಾಸ್ತಿಗಳನ್ನೆಲ್ಲಾ ಅಡವು ಇಟ್ಟು ಸೋಲಬಹುದು. ಆದರೆ ತನ್ನ ಹೆಂಡತಿಯನ್ನೇ ಸೋತಿದ್ದು ನಾವು ಇಂದು ಪೌರಾಣಿಕದಲ್ಲೆ ಕಾಣುತ್ತೇವೆ. ಇದರಿಂದ ಒಬ್ಬ ಪುರುಷ ತನ್ನ ಸ್ವಾರ್ಥಕ್ಕಾಗಿ ಏನೆಲ್ಲವನ್ನು ತ್ಯಾಗ ಮಾಡಬಲ್ಲನು ಎಂಬುದು ತಿಳಿದು ಬರುತ್ತದೆ.

ಉದಾ:- ಈಗಲಾದರೂ ಕಾಣುತ್ತೇವೆ. ತನ್ನ ಹೆಂಡತಿಯನ್ನು ಇನ್ನೊಬ್ಬರಲ್ಲಿ ಹಂಚಿಕೊಳ್ಳುವುದೆಂದರೆ, ಅವಳಿಗೆ ಎಷ್ಟು ಹಿಂಸೆ, ಅಸಹ್ಯ ಎದ್ದು ಕಾಣುತ್ತದೆ. ಇದರಿಂದ ಹೆಣ್ಣಿನ ಮಹತ್ವ ತಿಳಿದು ಬರುತ್ತದೆ.

ಇಂದು ಸಮಾಜದಲ್ಲಿ ಇಂತಹ ಅಹಿತಕರ ಘಟನೆಗಳು ನಡೆದದ್ದನ್ನು ನಾವು ಕಾಣುತ್ತೇವೆ. ಆದರೆ ಇದು ವಿಷಾದಕರ ಸಂಗತಿ ಎಂದರೆ, ತನ್ನ ಸ್ವಾರ್ಥಕ್ಕಗೋಸ್ಕರ ಮಾನವ ತನ್ನ ಅರ್ಧಾಂಗಿಯನ್ನೇ ಮಾರುವುದು ಯಾವ ಪಾಪ, ಇಂದಿನ ಸಮಾಜ ಅದನ್ನರಿತು ನಡೆಯಬೇಕಾಗಿದೆ.

<u>ಅಭಿಮನ್ಯುವಿನ ವಿವಾಹ ಪ್ರಸಂಗ :</u> ಇದು ಒಂದು ಕೋಲುಪದ. ಅದೇ ರೀತಿ ಲಾವಣಿ, ಸೋಬಾನೆ, ಬೀಸುವ ಪರವಾಗಿಯೂ ಹಾಡುತ್ತಾರೆ. ಹಿಂದೆ ನಾವು ಪೌರಾಣಿಕ ಇತಿಹಾಸದಲ್ಲೂ ಕೂಡಾ

ಕಾಣುತ್ತೇವೆ. ಏನೆಂದರೆ, ತಂಗಿ ಅಣ್ಣನ ಮಗಳನ್ನು, ತನ್ನ ಮಗನಿಗೆ ದಾರೆಯೆರೆದು ಕೊಡಬೇಕೆಂದು ಕೇಳಿಕೊಳ್ಳುವುದನ್ನು ಕಾಣುತ್ತೇವೆ. ಅಥವಾ ಸೋದರ ಮಾವನ ಮಗಳನ್ನು ಮದುವೆ ಮಾಡಿಕೊಳ್ಳುವುದು ಹಿಂದೆ ಕಾಣುತ್ತೇವೆ. ಅದೇ ರೀತಿ ಅವಳನ್ನು ಬೇರೆಯವರಿಗೆ ಮದುವೆ ಮಾಡಲು ಹೊರಟರೆ ಸಂಬಂಧಿಯಾದವರು ಸುಮ್ಮನೆ ಇರುವುದಿಲ್ಲ. ನಮ್ಮನ್ನ ಕೇಳಿ ಕೊಡಬೇಕಾಗಿತ್ತು ಎಂದು ಹಲವಾರು ಜಗಳ, ಹೊಡೆದಾಟ, ನಾವಿಂದು ನೋಡುತ್ತೇವೆ. ಹೀಗೆ ಅಭಿಮನ್ಯುವಿನ ವಿವಾಹ ಪ್ರಸಂಗ ಇಂದು ಅತೀ ಮಹತ್ವವನ್ನು ಪಡೆದಂತಿದೆ. ಮಾರುವೇಷದಲ್ಲಿ ಬಂದು ಮಾವನ ಮಗಳನ್ನು ಪಡೆದುಕೊಂಡಿದ್ದು, ಮಾವನಿಗೆ ಗೊತ್ತಾಗಿ, ತನ್ನ ಮಗಳನ್ನು ಸೊಕ್ಕಿನ ಮುಂಡೆ ಎಂದು ಬೈಯ್ದದ್ದು ಅವಳನ್ನು ಬಂಧಿಯಾಗಿ ಇಟ್ಟಿದ್ದು ಪಾಂಡವರು ಸತ್ಯವಂತರು ದೈವಾನುಗ್ರಹಿಗಳು. "ಸತ್ಯಕ್ಕೆ-ದೇವರು ಇದ್ದೆ ಇರುತ್ತಾನೆ" ಎಂಬಂತಾಗಿದೆ. "ಸತ್ಯಕ್ಕೆ ಜಯ ಸಿಕ್ಕೆ ಸಿಗುತ್ತದೆ" ಎಂಬಂತೆ. ಇವರ ಗಂಡು ಹೆಣ್ಣಿನ ನಿಜವಾದ ಪ್ರೀತಿ ಪ್ರೇಮಕ್ಕೆ ಕೊನೆಗಾದರೂ ಯಶ ಸಿಕ್ಕಿದ್ದು ಇಂದಿನ ಸಮಾಜದ ಮಹತ್ವವನ್ನು ಸಾರುವಂತಿದೆ. 'ಸಂಬಂಧ' 'ಕಳುಬಳ್ಳಿ' ಎನ್ನುವುದು-ಗ್ರಾಮೀಣ ಜನತೆಯಲ್ಲಿ ಮನೆ ಮಾಡಿದೆ. ಇದು ಹಿಂದೆಯೂ, ಇಂದಿಗೂ ಮಹತ್ವ ಪಡೆದುಕೊಂಡು ಬಂದಿದೆ. ಇಂದು 'ಸತ್ಯಕ್ಕೆ ಜಯವಿದೆ' ಸಾವು ಇಲ್ಲ ಅಸತ್ಯಕ್ಕೆ ಕಾಲವಿಲ್ಲ ಎಂಬುದನ್ನು ಅರಿಯಬೇಕಾಗಿದೆ. "ಯಾರಿಗೆ ಯಾವ ವಸ್ತು ಸೇರಬೇಕಾಗಿದೆಯೋ ಅವರಿಗೆ ಸೇರಬೇಕಾದದ್ದು" ಎಂಬ ನೈತಿಕತೆ ಇಲ್ಲ ತಿಳಿಯಲಾಗಿದೆ.

<u>ಕೃಷ್ಣಲೀಲೆ :</u> ಈ ಬಾಲಕೃಷ್ಣನ ಜಗಳ- ಬೇರೆ ಸ್ತ್ರೀಯರನ್ನು ಕಾಡಿಸುವುದು, ಮನೆಯವರೆಗೂ ಜಗಳ ತರುವುದು. ನಂತರ ತಾಯಿ ಜಗಳ ಬಗೆಹರಿಸುವುದು. ಪೌರಾಣಿಕ ಕಥನಗೀತವಾದರೂ ಇಂದಿಗೂ ಇದರ ಮಹತ್ವ ಮರೆಯುವಂತಿಲ್ಲ. ಇಂದಿನ ಮಕ್ಕಳು ಮನೆಗೆ ಜಗಳ ತರುವುದು ತಾಯಿ ಬಗೆಹರಿಸುವುದು ಸಾಮಾನ್ಯವಾಗಿದೆ. ಇದರಿಂದ ನಮಗೆ ತಿಳಿಯಬರುವುದೇನೇಂದರೆ- ಪೌರಾಣಿಕ ಕಥನಗೀತಗಳಿಗೂ- ನಮ್ಮ ಆಧುನಿಕತೆಗೂ ಸಂಬಧವಿದೆ. ಆದ್ದರಿಂದ ಇಂದಿಗೂ ಇಂತಹ ವಿಷಯಗಳು ಮಹತ್ವ ಪಡೆದುಕೊಂಡು ಬಂದಿದೆ.

ಈಗ ನಮ್ಮ ಮಕ್ಕಳಿಗೂ ನಾವು "ಕಿಡಿಗೇಡಿ ಮಕ್ಕಳು" ಎನ್ನುತ್ತೇವೆ. ಇದು ಹಿಂದಿನಿಂದಲೂ ಬೆಳೆದುಬಂದಂತದ್ದು. ಆಧುನಿಕ ಕಾಲಕ್ಕನುಗುಣವಾಗಿ ಆಧುನಿಕ ಭಾವನೆಗಳು ಬೆಳೆಯಲಿಲ್ಲ. ಕೆಲವೊಂದು ಇಂತಹ ವಿಷಯ, ಪ್ರಸಂಗಗಳು ಹಿಂದೆ, ಇದ್ದುದನ್ನೇ ಈಗಲೂ ಇವೆ. 'ಹೊಸದು ಏನೂ ಇಲ್ಲ' 'ಹೊಸದು ಏನೂ ಕಲಿತಿಲ್ಲ ಎಂಬಂತಿದೆ.

<u>೪.೨ ಐತಿಹಾಸಿಕ ಕಥನಗೀತ :</u>

<u>ನರಗುಂದದ ಬಂಡಾಯ :</u> ಕರ್ನಾಟಕ ಇತಿಹಾಸದಲ್ಲಿ ಹಲವಾರು ಬಂಡಾಯಗಳಲ್ಲಿ 'ನರಗುಂದದ ಬಂಡಾಯ' ಮಹತ್ವದ ಸ್ಥಾನ ಪಡೆದುಕೊಂಡಿದೆ. ಈ ಇಂತಹ ಅನೇಕ ಬಂಡಾಯಗಳಲ್ಲಿ ನಮ್ಮ ಭಾರತೀಯರು ವೀರ ಮರಣ ಹೊಂದಿದ್ದನ್ನು ನಾವಿಂದು ಮಣಗಾನಬೇಕಾಗಿದೆ. ಇದರಂತೆ ನರಗುಂದದ ಕ್ರಾಂತಿವೀರ ಬಾಬಾಸಾಹೇಬ.

"ಬೇರೆಯವರ ಆಳಾಗಿ ಬಾಳೋದಕ್ಕಿಂತ ಮರಣವೇ ಲೇಸು" ಎಂಬಂತೆ ಈತ ಪರಾಧೀನತೆಯನ್ನು ಸಹಿಸಲಾರದ ನರಗುಂದದ ವೀರರಮಣೀಯರ ಚಿತ್ರ ಪ್ರಸ್ತುತ ಜೀವನದಲ್ಲಿ ಈ ಕಥನ ಕವನದಲ್ಲಿ ಮೈನವಿರೇಳುವಂತೆ ಚಿತ್ರಿತವಾಗಿದೆ. ದುರ್ದೈವವಶಾತ್- "ದಿಕ್ಕು ದಿಕ್ಕಿನ ಗಾಳಿ ದಿಕ್ಕೆಟ್ಟು ಹೊಡೆದಾಗ ದಿಕ್ಕಾತ ನರಗುಂದ" ದಿಕ್ಕೀನ ದಿಕ್ಕಾತ ನರಗುಂದ- ಅಪ್ಪಾಸಾಹೇಬ ದಿಕ್ಕಿಗೆ ಬಾಯಿ ಬಿಡತಾನ ಇಲ್ಲಿ ಈತನಿಗೆ ಒದಗಿದ ಆಪತ್ತಿನ ಸೂಚನೆ ಎದ್ದು ಕಾಣುತ್ತದೆ.

ವಿರೋಧಿಗಳ ಮೋಸದಿಂದಾಗಿ ನರಗುಂದದ ಮುತ್ತೈದಿಯರೆಲ್ಲ ಕೈಸೆರೆಯಾದರೆ & ಅತ್ತಿ-ಸೊಸೇರು ಜತೆಯಾಗಿಯೇ ಹೊತ್ತೇರುವುದರೊಳಗಾಗಿ ಹೊಳೆಯ ಮುಳಗ್ಯಾರ ಇದು ಇನ್ನೊಬ್ಬರ ಸೆರೆಯಾಳಾಗಿ ಬದುಕುವುದಕ್ಕಿಂತಮರಣವೇ ಲೇಸೆಂದು ಈ ರೀತಿ ಅಲ್ಲಿಯ ವೀರರಮಣಿಯರಿಗೆ. ತಮಗೆ ಅಂತಹ ಸಂಕಟ ಒದಗಬಹುದೆಂದು ತಿಳಿದು ಆ ಅಪಜಯದ ಅಪಕೀರ್ತಿ. ಅಪಸ್ವರ ಕಿವಿಗೆ ಅಪ್ಪಳಸುವ ಮುನ್ನವೇ ಆತ್ಮಾಹುತಿಯನ್ನು ಮಾಡಿಕೊಂಡರು. ಇದು ತಮ್ಮ ನಾಡಿನ ಮೇಲಿನ ಪ್ರೀತಿ. ಅಭಿಮಾನಗಳು. ಮಾರ್ಮಿಕವಾಗಿ ಎದ್ದು ಕಾಣುತ್ತವೆ. ಕಿತ್ತೂರ ಬಂಡಾಯದಲ್ಲಿಯೂ ಕೂಡಾ ಮೋಸ. ಕಪಟದಿಂದ ಚೆನ್ನಮ್ಮನನ್ನು ಬಲಿತೆಗೆದುಕೊಂಡಿದ್ದನ್ನು ನೆನಪಿಸಿಕೊಳ್ಳಬಹುದು. ಹೀಗಿ ಐತಿಹಾಸಿಕವಾಗಿ ನರಗುಂದದ ಬಂಢಾಯದ ಮಹತ್ವ ಮರೆಯುವಂತಿಲ್ಲ. ದೇಶಕ್ಕಾಗಿ ವೀರಮರಣ ಹೊಂದಿದ್ದು. ಅವರ ಧೈರ್ಯ ಸಾಹಸ ಮೆಚ್ಚುವಂತದ್ದು. ಆದರೆ. ಇಂದಿನ ಯುವಜನರು ಅದರ ಮಹತ್ವವನ್ನು ತಿಳಿಯುವುದು. ಅದರ ಹಿಂದಿನ ಮೋಸ ತಿಳಿಯುವುದು ಅತ್ಯಾವಶ್ಯಕ.

ನಮ್ಮ ದೇಶಕ್ಕಾಗಿ ತಮ್ಮ ಪ್ರಾಣವನ್ನೇ ಮುಡುಪಾಗಿಟ್ಟ ವೀರ- ಧೀರರನ್ನು ನೆನೆಸಿಕೊಂಡರೆ ಮೈ ನವಿರೇಳಿಸುವಂತದ್ದಾಗಿದೆ. ಇಂದು ನಾವು ಇಷ್ಟು ಸ್ವಾತಂತ್ರ್ಯರಾಗಿ ಬದುಕಲಿಕ್ಕೆ ಇಂದು ಅವರ ಅಪಾರ ಶ್ರಮ. ಕಷ್ಟ-ನಷ್ಟ-ನೋವು ಸಾವುಗಳೇ ಕಾರಣವಾಗಿವೆ. ಇಂತಹ ಪೌರಾಣಿಕ ಕಥೆಗಳ ಸಂಪಾದನಾ ಕಾರ್ಯ ಆಧುನಿಕ ಜಗತ್ತಿಗೆ ಅನಿವಾರ್ಯವೆಂದರೂ ತಪ್ಪೇನಿಲ್ಲ. ಇಂತಹ ಮಹಾನ್ ಕಾರ್ಯಮಾಡಿದ ನಾವಲಗಿ ದಂಪತಿಗಳಿಗೆ ನನ್ನಂತಹ ಹಲವಾರು ಜನರು ಚಿರಋಣಿಯಾಗಿರುತ್ತಾರೆ.

೪.೩ ಸಾಮಾಜಿಕ ಕಥನ ಗೀತಗಳು :

ಏಳು ಮಂದಿ ಅಣ್ಣಂದಿರು: ತಾಯಿ ಇಲ್ಲದ ತವರು ಮನೆಯಲ್ಲ. ತಾಯಿ ಇರುವತನಕ ಅಷ್ಟೇ ಹೆಣ್ಣಿನ ಆಧಾರ. **"ತಾಯಿ ಇಲ್ಲದ ತವರೂರಿಗೆ ಹೋಗಬಾರದವ್ವ"** ಎಂಬ ಜಾನಪದ ಹಾಡಿನಂತೆ ತಾಯಿ ಇಲ್ಲದ ತಬ್ಬಲಿ. ತಬ್ಬಲಿ-ನಾನಾದೆನವ್ವ ಎನ್ನುವಂತೆ. ಏಳುಜನ ಅಣ್ಣಂದಿರು ಇದ್ದರೂ ಏನು ಪ್ರಯೋಜನ. "ಅಣ್ಣ ನಮ್ಮವನಾದರೂ ಅತ್ತಿಗೆ ನಮ್ಮವಳಲ್ಲ" ಎಂಬಂತೆ ಅಣ್ಣನ ಹೆಂಡತಿಯವರು- ಹೆಣ್ಣು ಮಗಳನ್ನು (ನಾದಿನಿ) ಯನ್ನು ಕಾಡಿದ. ಹಿಂಸಿಸಿದ. ಪರಿಪಾಠ ಅಷ್ಟಿಷ್ಟಲ್ಲ. ತವರವರಿಗೆ ಹೆಣ್ಣು ಸರಾಫ್ ಕೊಟ್ಟರೆ ತವರು ಮನೆ ಎಂದೂ ಉದ್ಧಾರ ಆಗುವುದಿಲ್ಲ ಎಂಬ ಮಾತು ನಿಜ. ಅದಕ್ಕೆ ಅಂದಿರುವರು ಹಿರಿಯರು-

"ಗಂಡನ ಮನೆಯ ಗಂಜೀಯ ಲೇಸ" ತವರವರು 'ಬಂಗಾರದ ಮಂಚದ' ಮ್ಯಾಲ ಕೂಡ್ರಿಸಿ ತೂಗಿದರೂ ಬೇಡ ಎನ್ನುವ ಮಾತೊಂದಿದೆ. ತಾಯಿ ಇಲ್ಲದ ತವರೂರಿಗೆ ಹೆಂಗ ಹೋಗಲವ್ವಾ. ತವರುಮನೆಯಲ್ಲಿ- ಅರಮನೆಯಲ್ಲಿ ರಾಜಕುಮಾರಿಯಂತೆ, ಮುದ್ದುಗಿಳಿಯಂತೆ, ಬಾಳಬೇಕಾದವಳು ತಾಯಿ ಇಲ್ಲದ ತವರು ಮನೆಯಲ್ಲಿ-ಅತ್ತಿಗೆಯರಿಂದ ಅನುಭವಿಸಿದ ಹಿಂಸೆ- ಕುಟ್ಟುವ ಬೀಸುವ ಬಟ್ಟೆ ತೊಳೆಯುವ, ಸಗಣಿಯಲ್ಲಿ ಮುಳ್ಳು ಸೇರಿಸಿ ಸಾರಿಸುವ ಕೆಲಸ ಹಚ್ಚಿದ್ದು, ತಾಯಿಯಿಲ್ಲದ ತವರಿನಲ್ಲಿ ಹೆಣ್ಣು ಬದುಕುವುದು ಅದೆಷ್ಟು ಕಷ್ಟಸಾಧ್ಯ ಎಂಬುವುದನ್ನು ಈ ಕಥೆ ಮನಮಿಡಿಯುವಂತೆ ಚಿತ್ರಿಸಿದೆ. ಇಂತಹ ಘಟನೆಗಳು ಇಂದಿನ ಸಮಾಜದ ಕಣ್ಣು ತೆರೆಸುವಂತಾಗಿದೆ ಎಂಬುದೇ ಈ ಕಥನ ಗೀತದ ಉದ್ದೇಶವಾಗಿದೆ. "ಇದು ಕೊಟ್ಟ ಹೆಣ್ಣು ಕುಲದ ಹೊರಗೆ" ಎಂಬಂತೆ ತಾಯಿಯ ಮನೆ ಎರವಾಗುತ್ತದೆ. "ಒಂದು ನೂರು ದೇವರಸ್ಥಾನವನ್ನು ಒಬ್ಬ ತಾಯಿ ತುಂಬುತ್ತಾಳೆ" ಅಥವಾ "ನೂರು ದೇವರುಗಳಿಗೆ ಒಬ್ಬ ತಾಯಿ ಸಮ", "ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲ" ಎಂಬ ಗಾದೆಯಂತೆ ಸಮಾಜದಲ್ಲಿ ದುಡ್ಡು ಕೊಟ್ಟರೆ ಏನೆಲ್ಲಾ ಕಂಡುಕೊಳ್ಳಬಹುದು. ಆದರೆ, ತಾಯಿಯನ್ನು ಕಂಡುಕೊಳ್ಳಲು ಸಾಧ್ಯವಿಲ್ಲ ಎಂಬುದು ತಾಯಿಯ ಮಹತ್ವವನ್ನು ಸಾರುವಂತಿದೆ.

ತಾಯಿಯ ಪ್ರೀತಿ ಅಗಾದವಾದುದು. ಒಂದು ಹೆಣ್ಣಿಗೆ ತಾಯಿಯೇ ಸರ್ವಸ್ವ, ಆಕೆಯ ಸ್ಥಾನವನ್ನು ತುಂಬಲು ಆ ದೇವರಿಂದಲೂ ಸಾಧ್ಯವಿಲ್ಲ ಎಂಬ ಮಾತೂ ಇಂದಿಗೂ ನಿಜವಾಗಿದೆ. ತಾಯಿಗೆ ಸಮಾನವಾದರು ಬಹುಶಃ ಈ ಜಗತ್ತಿನಲ್ಲಿ ಯಾರೂ ಇಲ್ಲ. ಆಕೆಯ ಸ್ಥಾನವನ್ನು ತುಂಬಲಿಕ್ಕೆ ಸಾಧ್ಯವೇ ಇಲ್ಲ. ಅದಕ್ಕೆ "ಅವಳಿಗೆ ಭೂತಾಯಿ, ಭೂದೇವಿ, ಭುವನೇಶ್ವರಿ" ಇತ್ಯಾದಿ ಹೆಸರುಗಳಿಂದ ಕೀರ್ತಿ ಪಡೆದುಕೊಂಡಿದ್ದಾಳೆ. ಆಕೆಗೆ ಇರುವ ಸಹನೆ, ತಾಳ್ಮೆ, ಕರುಣೆ, ಪ್ರೀತಿ ಮತ್ಯಾರಲ್ಲೂ ಇರುವುದಿಲ್ಲ. ಅಂತೆಯೇ **"ಹೆತ್ತ ತಾಯಿಗೆ ಹೆಗ್ಗಣವೆ ಮುದ್ದು"** ಎಂಬ ಮಾತು ತಾಯಿ-ಮಕ್ಕಳ ಪ್ರೀತಿ ಬಾಂಧವ್ಯ ಅಪಾರವಾದುದು ಎಂಬುವುದನ್ನು ತೋರಿಸುತ್ತದೆ. ಆಕೆಯಂತೆ ಮಕ್ಕಳಿಗಾಗಿ ಕರುಳು ಮಿಡಿಯುವುದು-ಹಂಬಲಿಸುವುದು-ಮತ್ಯಾವ ಪುರುಷನಿಂದಲೂ ಸಾಧ್ಯವಿಲ್ಲ. ಅದಕ್ಕೆ ನಮ್ಮ ಹಿರಿಯರು ಹೇಳುತ್ತಾರೆ. "ಹೆಣ್ಣು ಮಕ್ಕಳು ತವರಮನೆಯಲ್ಲಿ ಕಣ್ಣೀರು ಹಾಕಬಾರದು" ಹಾಕಿದರೆ ನಮಗೆ ಶಾಪ ಹತ್ತುತ್ತದೆ ಎನ್ನುತ್ತಾರೆ. ಹಿರಿಯರು ಮಾಡಿದಂತಹ ಸಂಪ್ರದಾಯಗಳನ್ನು ಇಂದು ಅರಿತು ಬಾಳಬೇಕಾಗಿದೆ. ಆದರೂ ಇಂತಹ ಸನ್ನಿವೇಶ ಇಂದಿಗೂ ಅರ್ಥವಾಗದೇ ಹೆಣ್ಣು ಮಕ್ಕಳನ್ನು ಹಿಂಸಿಸುತ್ತಾರೆ.

ಗೋವಿ ತಾಯಿ ಹಾಡು : ಈ ಗೋವುಗಳನ್ನು ತಾಯಿಗೆ ಹೋಲಿಕೆ ಮಾಡಲಾಗಿದೆ. ತಾಯಿಯನ್ನು ದೇವತೆ ಎನ್ನುತ್ತೇವೆ. ಹಾಗೆಯೇ ಆ ಗೋಪಿತಾಯಿಯನ್ನು ದೇವರ ಸಮಾನತೆಗೆ ಹೋಲಿಸ ಲಾಗಿದೆ. ಈ ಪುಣ್ಯಕೋಟಿ ಹಾಡಿನಲ್ಲಿ, ಮಾತೃವಾತ್ಸಲ್ಯ ತುಂಬಿದೆ. ಹುಲಿ, ಹಸು, ಕರು ಮುಖಾಮುಖಿಯಾಗಿ ನಡೆಸುವ ಸಂಭಾಷಣೆ ಕರುಣರಸಾರ್ದ್ರವಾಗಿದ್ದು, ಇಲ್ಲಿ ಆಕಳು ಸಾತ್ವಿಕ ಮನಸ್ಸು, ಹುಲಿ ತಾಮಸ ಮನಸ್ಸುಗಳ ಪ್ರತೀಕ. ಇಲ್ಲಿ ಆಕಳ ಮನಸ್ಸಿಗೆ ಹುಲಿಯ ಮನಸ್ಸು ಸೋಲುತ್ತದೆ. ಏಕೆಂದರೆ, ಸತ್ಯಕ್ಕೆ ಜಯ ಇದ್ದೇ ಇರುತ್ತದೆ. ಎಂಬುದು ಅರಿಯಬೇಕಿದೆ.

ನಾವು ಪ್ರಾಣಿಗಳಿಗೆ ವಿಚಾರ ಶಕ್ತಿಯಿಲ್ಲವೆಂದು ಪ್ರಾಣಿಗಳನ್ನು ಮಾನವನಿಗಿಂತಲೂ ಕಡಿಮೆಯಾಗಿ ಕಾಣುತ್ತೇವೆ. ಮಾನವ ಅತ್ಯಂತ ಶ್ರೇಷ್ಠ ಪ್ರಾಣಿ ಎಂದು ಹೇಳುತ್ತೇವೆ. ಏಕೆಂದರೆ, ಈತನಿಗೆ ದೇವರು ಬುದ್ಧಿಶಕ್ತಿ ಕೊಟ್ಟಿದ್ದಾನೆಂದು ಆದರೆ ಅತ್ಯಂತ ಕನಿಷ್ಠ ಪ್ರಾಣಿಯೂ ಎಂಬುವುದನ್ನು ಮರೆಯುವಂತಿಲ್ಲ. ಏಕೆಂದರೆ, ಮಾನವ ಕೊಟ್ಟ ಮಾತಿಗೆ ತಪ್ಪುತ್ತಾನೆ. ಇನ್ನೊಬ್ಬರಿಗೆ ಹಿಂಸಿಸುತ್ತಾನೆ, ಮೋಸ ಮಾಡುತ್ತಾನೆ, ಇವೆಲ್ಲವುಗಳಿಂದ ಆತನನ್ನು ಕೆಟ್ಟ, ಕ್ರೂರಪ್ರಾಣಿ, ಕನಿಷ್ಠ ಪ್ರಾಣಿಯಂತಲೂ ಕರೆದಿದ್ದಾಗಿದೆ. ಆದರೆ, ಇಂದು ಈ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ನಿಷ್ಠೆ ಪ್ರಾಣಿಗೆ ಇರಬೇಕಾದರೆ ಮಾನವ ಅವುಗಳಿಗಿಂತ ಕನಿಷ್ಠ ಮಟ್ಟದಲ್ಲಿರಬಾರದು ಎಂಬ ನೀತಿ ಪರಬೋಧನೆ ಇದರಲ್ಲಿದೆ. ಈ ಗೋಪಿತಾಯಿ ಕಥೆಯನ್ನಾದರೂ ನೋಡಿ ಮಾನವ ಮಾನವೀಯ ಗುಣಗಳನ್ನು ಅಳವಡಿಸಿಕೊಳ್ಳಲಿ ಎಂಬ ಮಾತು ಈ ಸಮಾಜಕ್ಕೆ ತುಡಿಯುತ್ತದೆ.

ಇಂದಿನ ದಿನಗಳಲ್ಲಿ ಮಾನವನಲ್ಲಿ ಮಾನವೀಯ ಗುಣಗಳು, ನೈತಿಕತೆ, ಎಲ್ಲವೂ ಮಾಯವಾಗುತ್ತಾ ನಡೆದಿವೆ. ಆದ್ದರಿಂದ ಇಂತಹ ಸಾಮಾಜಿಕ ಕಥನಗಳಿಂದ ಸಮಾಜ ತಿದ್ದುವುದು ಅವಶ್ಯಕವಾಗಿದೆ. ಆದ್ದರಿಂದ ಇಂದು ಇವು ಮಹತ್ವ ಪಡೆದುಕೊಂಡಿವೆ. ಗೋಪಿತಾಯಿ ತನ್ನ ಕರುವನ್ನು ಬಿಟ್ಟು ಬರುವುದು. ಆ ಕರು ತಾಯಿಯನ್ನು ಬಿಟ್ಟು ಅಗಲುವಿಕೆ . ಕೇಳುಗರ ಮನಸ್ಸನ್ನು, ಕರಳನ್ನು ಕೊಯ್ದಂತಾಗುತ್ತದೆ. 'ಕೊಟ್ಟಮಾತಿಗೆ ತಪ್ಪಲಾರೆನು' ಎಂಬಂತೆ ಆ ಹುಲಿಯ ಮನಸ್ಸನ್ನು ಕೂಡಾ ಕರಗುವಂತೆ ಮಾಡಿದ್ದು ನಮ್ಮ ಮನ ಮೈನವರೇಳಿಸುವಂತದ್ದು ಇಲ್ಲಿ ಮಾನವ ಪ್ರಾಣಿಗಳಿಂದಲೂ ನಾವಿಂದು ಬುದ್ಧಿ ಕಲಿಯಬೇಕಾಗಿದೆ. 'ಕನಿಷ್ಠ ಎಂಬ ಪ್ರಾಣಿಗೆ ಇರುವ ಬುದ್ಧಿ ಶ್ರೇಷ್ಠ ಮಾನವನಿಗಿಲ್ಲ' ಎಂಬುದನ್ನು ಇಂದು ನಾವು ಅರಿತು ನಡೆಯಬೇಕಿದೆ.

<u>ಬಂಡಿಯಚ್ಚು ಮುರಿದಂಗಾಯ್ತು</u> : ಗಂಡ-ಹೆಂಡತಿ ಮೇಲ್ನೋಟಕ್ಕೆ ಎರಡು ಜೀವವಾದರೂ ಒಳನೋಟಕ್ಕೆ ಅವರಿಬ್ಬರ ಹೃದಯ ಒಂದೇ ಎಂಬಂತೆ ಕಂಡುಬರುತ್ತದೆ. ಗಂಡ-ಹೆಂಡತಿ ಎಂದರೆ ಒಂದು ಹೋಳಿಗೆ ಇದ್ದಂತೆ. 'ಕನಕ ಒಬ್ಬರಾದರೆ ಹೂರಣ ಮತ್ತೊಬ್ಬರು' ಕನಕ & ಹೂರಣ ಎರಡರಲ್ಲಿ ಒಂದು ಇಲ್ಲವಾದರೆ ಅದು ಹೋಳಿಗೆ ಎನಿಸಿಕೊಳ್ಳುವುದಿಲ್ಲ. ಹಾಗೆಯೇ ಸತಿ-ಪತಿಯಲ್ಲಿ ಒಬ್ಬರೂ ಕೈಬಿಟ್ಟು ಹೋದರೆ ಮತ್ತೊಬ್ಬರ ಜೀವನ ಕಷ್ಟವಾಗುತ್ತದೆ. ಹೀಗೆ ಅಗಲುವಿಕೆಯಿಂದ ಅವನ ಮನ ಮುದುಡಿ ಹೋಗಿದೆ. "ಎರಡೂ ದೇಹ ಒಂದೇ ಹೃದಯವಿದ್ದಂತೆ" ಅವನ ಪಾಲಿಗೆ ಅವನ ಪತ್ನಿ ಬಂಡಿಯ ಗಾಲಿ ಇದ್ದಂತೆ. ಬಂಡಿ ಸದೃಡವಾಗಿರಲು ಗಾಲಿ ಎಷ್ಟು ಅವಶ್ಯವೋ ಅಷ್ಟೇ ಅವನ ಪಾಲಿಗೆ ಹೆಂಡತಿ ಅವಶ್ಯ. ಆದುದ್ದರಿಂದ ನನಗೆ ಈಗ ಬಂದ ಕಷ್ಟ ಅಷ್ಟಿಷ್ಟಲ್ಲ ಎಂದು ಮರಗುವಂತಾಗಿದೆ.

ಆ ಮುದುಕನಿಗೆ ಅಷ್ಟೇ ಅಲ್ಲ. ಅವಳು ತನ್ನ ಹೆಣ್ಣು ಮಕ್ಕಳಿಗೆ ಮಮತೆಯ ತಾಯಿಯಾಗಿ ಪತಿಗೆ ಒಲುಮೆಯ ಸತಿಯಾಗಿ, ಅತ್ತೆ ಮಾವಂದಿರಿಗೆ ಮುದ್ದಿನ ಸೊಸೆಯಾಗಿ, ನಾದಿನಿ-ಮೈದುನರಿಗೆ ಅಕ್ಕರೆಯ ಅತ್ತಿಗೆಯಾಗಿ ಮನೆಯನ್ನು ನಗುವ ನಂದನವನ್ನಾಗಿಸುವ ಮಹಾದೇವತೆ. ಅಂಥವಳಿಲ್ಲದ ಸಂಸಾರ ರಥದ ಅಚ್ಚು ಮುರಿದಂತೆ. ಹೀಗೆ ಒಂದು ಹೆಣ್ಣು ಎಷ್ಟು

ಜನರಿಗೆ ಆಧಾರವಾಗಿರುತ್ತಾಳೆ ಎಂಬುದನ್ನು ತಿಳಿಯಬೇಕಾಗಿದೆ. ಮನೆಯಲ್ಲಿ ಗೃಹಿಣಿಯ ಪಾತ್ರ ಅತೀ ಮಹತ್ವದ್ದು ಎಂಬುದು ತಿಳಿದುಬರುತ್ತದೆ. ಇವರು ಒಂದೇ ನಾಣ್ಯದ ಮುಖಗಳಿದ್ದಂತೆ. ಇವರಿಬ್ಬರೂ ಇಲಿ– ಗಣಪತಿ ಇದ್ದ ಹಾಗೆ. ಒಂದಕ್ಕೆ ಪೆಟ್ಟು ಬಿದ್ದರೆ, ಇನ್ನೊಂದಕ್ಕೆ ಗಾಯವಾದಂತೆ.

ಬಾಲಪುತ್ರೇಶ: "ಕೈಯಲ್ಲಿನ ತುತ್ತ ಬಾಯಿಗೆ ಬರಲಿಲ್ಲ" ಎಂಬಂತೆ ಮಗುವನ್ನು ದೇವರು ಕೊಟ್ಟ, ನಂತರ ಅವನೇ ಕಸಿದುಕಕೊಂಡ ದೇವರು ಕೊಟ್ಟು ನೋಡತಾನ, ಕಸಿಕೊಂಡು ನೋಡತಾನ ಎಂಬಂತೆ ಮಗು ಯಾವುದೇ ಬೇನೆಯಿಂದ ನರಳಿದರೂ ಅವಳ ಕರಳು ಕೊಯ್ದಂತಾಗುತ್ತದೆ. ಆ ಕಂದನನ್ನು ಉಳಿಸಿಕೊಳ್ಳುವ ಸಲುವಾಗಿ ತಾಯಿ ಏನು ಬೇಕಾದರೂ ಮಾಡಲು ಸಿದ್ಧಳಾಗುತ್ತಾಳೆ.

ತನ್ನ ಮಡಲನ್ನು ಬರಿದು ಮಾಡಿಕೊಳ್ಳಲು ಅವಳು ಸಿದ್ದಳಿಲ್ಲ. ತನ್ನ ಕಂದನ್ನು ಬೇನೆಯಿಂದ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಊರಿನ ಎಲ್ಲ ದೇವತೆಗಳಿಗೆ ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ. ಆದರೂ ದೇವರು ಆಕೆಯ ಒಡಲಿಗೆ ಬೆಂಕಿ ಹಚ್ಚುತ್ತಾನೆ. ಅಂದರೆ, "ಕರುಳಿನ ಕುಡಿಯನ್ನೇ ಕಸಿದುಕೊಂಡ" ಎಂಬ ಬಾಸವಾಗುತ್ತದೆ. ಈಗಲೂ ಕೂಡಾ ಗ್ರಾಮೀಣ ಸಂಪ್ರದಾಯ ಬಿಟ್ಟುಹೋಗಿಲ್ಲ. ಮಕ್ಕಳಿಗಾಗಿ– ನಾವು ಮಕ್ಕಳನ್ನೇ ಬಲಿ ಕೊಡುವುದು ಅಥವಾ ಹಲವಾರು ಹರಕೆಗಳನ್ನು ಸಲ್ಲಿಸುವುದಾಗಿ ಬೇಡಿಕೊಳ್ಳುತ್ತೇವೆ. ಈಗಲೂ ಇಂದಿನ ಆಧುನಿಕ ಯುಗದಲ್ಲಿಯೂ ಇಂತಹ ಕಥನಗೀತಗಳು ಮಹತ್ವವನ್ನು ಪಡೆದುಕೊಂಡಿವೆ. ಚಿಕ್ಕಮಕ್ಕಳಿಗೆ ಈಗಲೂ ಕೂಡಾ ಮೈಲಿಬೇನೆ ಬಂದರೆ ಹಳ್ಳಿಗರು ಗ್ರಾಮದೇವತೆಗಳಿಗೆ ದೀಪಕೊಡುವ ಸಾಂಪ್ರದಾಯ ಹಿಂದಿನಿಂದಲೂ ಮುಂದುವರೆಸಿಕೊಂಡು ಬಂದಿದ್ದನ್ನು ಕಾಣುತ್ತೇವೆ. ಈ ತಾಯಿಯ ಕರುಳಿನ ಕೂಗು ಆ ದೇವತೆಗಳಿಗೆ ಕೇಳಿಸಲಿಲ್ಲವೆನೋ ಎಂಬಂತೆ ಕಂಡುಬರುತ್ತದೆ. ಅಂದರೆ, ಇದರ ಮಹತ್ವ ಇಷ್ಟೇ ತಾಯಿ ಮಗುವಿಗಾಗಿ ಏನೆಲ್ಲಾ ಮಾಡಲು ಸಿದ್ದಳು. ಆದರೆ,

ಆ ಪರಮಾತ್ಮನ ಇಚ್ಛೆಯಂತೆ ವಿಧಿ ಏನಾಗಬೇಕಿತ್ತು ಹಾಗೆ ಆಗಬೇಕಾಗುತ್ತದೆ ಎಂಬಂತೆ ಆ ಮಗುವಿನ ವಿಧಿ, ಹಣೆಬರಹ ಅಷ್ಟೇ ಇತ್ತು. ಅದೇ ರೀತಿ ತಾಯಿಯ ರೋಧನ ಆ ಪರಮಾತ್ಮನಿಗೆ ಕೇಳಿಸದೆ ಹೋಯಿತು ಎಂಬುದು. ತಾಯಿಯ ಕರುಳಿನ ಕಿಚ್ಚು ಆ ಪರಮಾತ್ಮನಿಗೆ ಕೇಳಿಸದೆ ಹೋಯಿತು ಎಂಬುದು ತಾಯಿಯ ಒಡಲಿನ ಕಿಚ್ಚು ಹಚ್ಚಿದಂತಾಗಿತ್ತು.

ಬತಿಗೇಡಿ ರಾಜ (ಅಂಜುಬುರುಕ, ಕೈಲಾಗದವ): ಶ್ರೀಮಂತನು ಬಡವನ ಮೇಲೆ ದಬ್ಬಾಳಿಕೆ, ಹೀಗೆ ರಾಜ ಅದೂ ಪರ ಸ್ತ್ರೀಯನ್ನು ಬಯಸಿದ್ದು ಯಾವ ನ್ಯಾಯ ಎಂಬಂತಿದೆ. ಗ್ರಾಮೀಣ ಭಾಷೆಯಲ್ಲಿ "ಒಬ್ಬನ ಪತ್ನಿಯ ಮೇಲೆ ಮತ್ತೊಬ್ಬ ಕಣ್ಣು ಹಾಕಲು ಸಾಧ್ಯವೇ ಇಲ್ಲ" ಎಂಬಂತೆ. ರಾಜನಾದವನು ಪರ ಸ್ತ್ರೀಯನ್ನು ಬಯಸಿದ್ದು, ಅವನ ಕಾಮಕ್ಕೆ ಬಲಿಯಾಗದೇ ಇರುವುದು. ಇಂದಿನ ಹೆಣ್ಣಿನ ಶೌರ್ಯ, ಕೀರ್ತಿ, ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಂತಾಗಿದೆ. ಇಂದಿನ ಸ್ತ್ರೀಯೂ ಕೂಡಾ ಹಿಂದಿನ ಸ್ತ್ರೀಯರು ಪ್ರತಿಬಿಂಬದಂತಿದ್ದಾರೆ. ತಮ್ಮ ಮಾನ ಮರ್ಯಾದೆ ಗೌರವ ಕಳೆದುಕೊಳ್ಳಲು ಯಾವ ಸ್ತ್ರೀಯೂ ಮನಸ್ಸು ಮಾಡುವುದಿಲ್ಲ. ರಾಜನನ್ನು ಎದುರಿಸುವ ಧೈರ್ಯ ಹಿಂದೆಯೂ ಬೇರೆ ಪುರುಷರಿಗೂ ಇತ್ತು ಎಂಬುದು ತಿಳಿದುಬರುತ್ತದೆ. ಈಗಲೂ ಕೂಡಾ ನಾವು ಇಂತಹ

ಅಮಾನವೀಯ ಕೃತ್ಯಗಳನ್ನು ಕಂಡು ಕೇಳಿಯೂ ಕೇಳದಂತೆ ಸುಮ್ಮನಿರಬಾರದು. ಇದು ಇಂದಿನ ಸಮಾಜಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಇಂದು ಪುರುಷರಿಗೆ ಇಂತಹ ಕೆಟ್ಟ ವರ್ತನೆಗಳಿಗೆ ಕಡಿವಾಣ ಹಾಕಲು ಮಹಿಳೆಯೇ ಸಾಕು. ಇದನ್ನರಿತು ಇಂದಿನ ಮಹಿಳೆಯು ನಡೆಯಬೇಕಿದೆ. ಮಹಿಳೆ ಆಧುನಿಕ ಯುಗದಲ್ಲಿ ಇದ್ದುಕೊಂಡು ಯಾವ ಕಾರಣಕ್ಕೂ ಮೋಸ ಹೋಗದಂತೆ ಎಚ್ಚರದಿಂದಿರಬೇಕಾಗುತ್ತದೆ.

ರಡ್ಡೇರ ಅವ್ವಣ್ಣಿ : ಈ ಕಥನಗೀತದಲ್ಲಿ ಕೆಳಜಾತಿ ಮೇಲುಜಾತಿ ಎಂಬ ಬೇದಬಾವ ಹುಟ್ಟುತ್ತದೆ ಈ ಜಾತಿ ಪ್ರೇಮಕ್ಕೆ ಅಡ್ಡ ಬರುತ್ತದೆ. ವಿಧವೆಯಾದ ತಂಗಿಯನ್ನು ಮನೆಯಲ್ಲಿ ಇಟ್ಟು ಕೊಂಡಿದ್ದರ ಪರಿಣಾಮ ಅಣ್ಣ ನಮ್ಮವನಾದರೆ ಅತ್ತಿಗೆ ನಮ್ಮವಳಲ್ಲ. ಎಂಬಂತೆ ನಾದಿನಿಯನ್ನು ಸರಿಯಾಗಿ ನೋಡಿಕೊಳ್ಳದಿರುವುದು ವಿಷಾದಕರ ಸಂಗತಿಯಾಗಿದೆ.ಒಟ್ಟಿನಲ್ಲಿ ಇಂತಹ ಕಥಾನಿರೂಪಣೆಗಳು ಜನಪದ ಕಥನಗೀತದಲ್ಲಿ ಬಲು ಸೊಗಸಾಗಿ ಮೂಡಿಬಂದಿವೆ.

೩.೫ ಜನಪದ ತ್ರಿಪದಿಗಳು: ಒಂದು ಅಧ್ಯಯನ :

ಡಾ. ಸಿ.ಕೆ. ನಾವಲಗಿ ಅವರ ಜನಪದ ತ್ರಿಪದಿ ಒಂದು ಅಧ್ಯಯನ ಇದು ಅಪ್ರಕಟಿತ ಕೃತಿ. ಇದು ಒಟ್ಟು ಐವತ್ತೆರಡು ಪುಟಗಳನ್ನು ಒಳಗೊಂಡಿದೆ. ಮೊಟ್ಟ ಮೊದಲಿಗೆ ಪರಿವಿಡಿ, ಜಾನಪದ ಸಾಹಿತ್ಯ ಮೊದಲ ನೆನೆದೇನ ಎಂಬುದು ಅವರ ಅನಿಸಿಕೆ ಒಳಗೊಂಡಿದೆ. ತದನಂತರ ಏಳು ಪುಟಗಳ ಪ್ರಸ್ತಾವಣೆ ಒಳಗೊಂಡಿದೆ. ನಂತರ ತ್ರಿಪದಿ ಮತ್ತು ಅದರ ಸಂಕ್ಷಿಪ್ತ ಅರ್ಥ ಒಳಗೊಂಡಿದೆ. ಡಾ. ಸಿ.ಕೆ. ನಾವಲಗಿ ಅವರ ತಾಯಿ ಹಾಡಿದ ಒಂದುನೂರು ತ್ರಿಪದಿಗಳನ್ನು ವರ್ಗಿಕರಿಸಿ ಹೇಳಿದ್ದು ಉತ್ತಮವಾಗಿದೆ. ಇಂದು ಜಾನಪದ ತ್ರಿಪದಿಗಳು ನಮ್ಮನ್ನಗಲಿ ಹೋಗದಂತೆ ಇವರು ಪುಸ್ತಕದ ರೂಪದಲ್ಲಿ ಹಿಡಿದಿಡಲು ಪ್ರಯತ್ನಿಸುತ್ತಿದ್ದಾರೆ. ಈ ಎಲ್ಲ ತ್ರಿಪದಿಗಳನ್ನು ಗಮನಿಸಿದಾಗ ಇದರ ಮಹತ್ವ ತಿಳಿದು ಬರುತ್ತದೆ.

ಬೆಳಗಾವಿ ಜಿಲ್ಲೆಯ ಗಡಿನಾಡಾದರೂ ಹಿಮಾಲಯದ ಅಡಿಯಲ್ಲಿರುವ ಕಿತ್ತೂರು ನಾಡು ಸೃಷ್ಟಿ ಸೌಂದರ್ಯದ ಬೀಡಾಗಿದೆ. ಇಂತರಹ ಕಿತ್ತೂರು ಪರಿಸರದ ಬಸರಕೋಡ ಗ್ರಾಮದಲ್ಲಿ ಕೃಷಿ ಕುಟುಂಬದಲ್ಲಿ ಇವರು ಬಾಲ್ಯದಲ್ಲಿಯೇ ತಾಯಿಯಿಂದ ಜಾನಪದ ಪರಿಸರದ ಸೊಡಗಿನ ಸಿರಿಯಲ್ಲಿ ಬೆಳೆದದ್ದು, ವರವಾಗಿ ಪರಿಣಮಿಸಿ ಖ್ಯಾತ ಜಾನಪದ ಸಾಹಿತಿಯಾಗುವುದಕ್ಕೆ ಅಡಿಪಾಯ ಹಾಕಿದಂತಾಯಿತು. 'ಜಾನಪದ' ವೆಂಬುದು ಜನಪದ ಜನಾಂಗದ ಸಮಸ್ತ ಬದುಕಿನ ಇತಿಹಾಸ, 'ಜನಪದ' ಎಂದರೆ ದೇಶ, ಜನ, ಜನಾಂಗ. ಈ ಜನಪದಕ್ಕೆ ಸೇರಿದ ಸಮಗ್ರ ಅಧ್ಯಯನವೇ ಜಾನಪದ. ಇದು ಹಿಂದಿನ ಇಂದಿನ ಹಾಗೂ ಮುಂದಿನ ಜನತೆಯ ಇತಿಹಾಸವಾಗಿದೆ. ಜಾನಪದ ಪ್ರಾಚೀನ ಮಾನವನಷ್ಟೇ ಹಳೆಯದಾಗಿದೆ.

ಇತ್ತೀಚಿನ ದಿನಗಳಲ್ಲಿ ಜಗತ್ತಿನಾದ್ಯಂತ ಕುತೂಹಲ ಕೆರಳಿಸುತ್ತಿರುವ ಅಧ್ಯಾಯಗಳಲ್ಲಿ ಜಾನಪದ ಅಧ್ಯಯನವೂ ಒಂದು. ಹಾಗಾಗಿ ಬೆಳಗಾವಿ ಜಿಲ್ಲೆ ಜಾನಪದ ಕ್ಷೇತ್ರಕ್ಕೆ ಹೆಸರುವಾಸಿಯಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ 'ಜಾನಪದ ವಿದ್ವತ್ತು' ಎಂದು ಕರೆಯಿಸಿಕೊಂಡ ಬೆಟಗೇರಿ ಕೃಷ್ಣ ಶರ್ಮ ಮೊದಲಿಗರು ಅವರನ್ನು ಮೊದಲನೆ ತಲೆಮಾರಿನ ಜಾನಪದ ವಿದ್ವಾಂಸರೆಂದು ಕರೆಯಲಾಗಿದೆ. ಅದೇ ರೀತಿ ಡಾ. ಚಂದ್ರಶೇಖರ ಕಂಬಾರ, ಡಾ. ಎಂ.ಎಸ್.ಲಠ್ಠೆ, ಡಾ. ಜ್ಯೋತಿ ಹೊಸೂರ, ಡಾ. ನಿಂಗಣ್ಣ ಸಣ್ಣಕ್ಕಿಯವರು ಜಾನಪದ ಉಳಿವಿಗಾಗಿ ಸಾಕಷ್ಟು ಶ್ರಮಿಸಿದ್ದಾರೆ. ಇವರನ್ನು ಎರಡನೆಯ ತಲೆಮಾರಿನ ಜಾನಪದ ವಿದ್ವಂಸರೆಂದು ಕರೆಯಲಾಗಿದೆ. ತದನಂತರ ಮೂರನೆ ತಲೆಮಾರಿನ ಜಾನಪದ ವಿದ್ವಾಂಸರೆಂದು ಖ್ಯಾತಿ ಪಡೆದವರಲ್ಲಿ ಡಾ॥ ಬಸವರಾಜ ಮಲಶೆಟ್ಟಿ, ಡಾ. ಶ್ರೀರಾಮ ಇಟ್ಟಣ್ಣವರ ಡಾ.ಸಿ.ಕೆ.ನಾವಲಗಿ ಅವರ ಹೆಸರು ಕೇಳಬರುವಂತದ್ದು.

ಡಾ.ಸಿ.ಕೆ.ನಾವಲಗಿ ಅವರು ಎಂ.ಎ ಕನ್ನಡ ಜಾನಪದದಲ್ಲಿ ಸ್ನಾತಕೋತ್ತರ ಪದವಿ ಪಡೆದು ಕನ್ನಡ ಅಧ್ಯಾಪಕರಾಗಿ ಕಳೆದೆರೆಡು ದಶಕಗಳಿಂದ ಜಾನಪದ ಸೇವೆಯಲ್ಲಿ ಕ್ರಿಯಾಶೀಲರಾಗಿರುವ ಅವರು ಪದವಿ ತರಗತಿಯಲ್ಲಿ ಸಮಾಜಶಾಸ್ತ್ರವನ್ನು ಪ್ರಧಾನ ವಿಷಯವಾಗಿ ಅಭ್ಯಾಸ

ಮಾಡಿದ್ದರಿಂದ ಚಿನ್ನದ ಪದಕದೊಂದಿಗೆ ಹೊರಹೊಮ್ಮಲು ಅನುಕೂಲವಾಯಿತು. ಬಸವ ಅಧ್ಯಯನದಲ್ಲಿ ಡಿಪ್ಲೋಮಾ ಚಿನ್ನದ ಪದಕ ಸಹಿತ ಪ್ರಥಮ ವರ್ಗದಲ್ಲಿ ತೇರ್ಗಡೆ. ಅದೇ ರೀತಿ ವಚನ ಸಾಹಿತ್ಯದಲ್ಲಿ ಜನಪದೀಯ ಅಂಶಗಳು ಕುರಿತು ಸಂಶೋಧನಾ ಅಧ್ಯಯನ ಮಾಡಲು ನೆರವಾಯಿತು. ಹೀಗೆ ಇದಕ್ಕೆ ಚಿನ್ನದ ಪದಕ ಪಡೆದುಕೊಂಡದ್ದು ಇವರ ಜಾನಪದ ಕೀರ್ತಿ ಹೆಚ್ಚಿದೆ. ತಮ್ಮ ಜಾನಪದ ಬರಹಗಳನ್ನು ಅತ್ಯಂತ ಉತ್ಸಾಹ ಆಸಕ್ತಿ, ಶೈಕ್ಷಣಿಕ ಶಿಸ್ತಿನಿಂದ ಮುನ್ನೆಡೆಸಿಕೊಂಡು ಬರಲಿಕ್ಕೆ ಈ ಮೇಲಿನ ಎಲ್ಲವೂ ಮುಡಿಗೇರಿಸಿಕೊಂಡ ಗರಿಗಳು ಮತ್ತೊಂದಿಷ್ಟು ಪ್ರೇರಣೆ ನೀಡುವಂತಿದೆ. ಡಾ.ಸಿ.ಕೆ.ನಾವಲಗಿ ಅವರ ಕೆಲವು ಕೃತಿಗಳು ಅಧ್ಯಯನ ಶಿಸ್ತು, ತೌಲನಿಕ ದೃಷ್ಟಿ, ತರ್ಕಬದ್ಧ ವಿಚಾರಸರಣಿ, ಆಳವಾದ ಚಿಂತನೆ, ಅನ್ವೇಷನೆ ಗುಣ ಪರಿಶ್ರಮ, ಪ್ರತಿಭೆ, ಪ್ರೀತಿಗಳು ಇದ್ದು ಅವರನ್ನು ಓರ್ವ ಜಾನಪದ ತಜ್ಞರನ್ನಾಗಿ ರೂಪಿಸಿವೆ ಎಂದು ವಿದ್ವಾಂಸರು ಅಭಿಪ್ರಾಯಿಸಿದ್ದು ಪೂರಕವಾಗಿದೆ. ವೃತ್ತಿಯಿಂದ ಕಾಲೇಜ ಉಪನ್ಯಾಸಕರಾಗಿದ್ದ ಡಾ.ಸಿ.ಕೆ.ನಾವಲಗಿ ಅವರು ನಿರಂತರ ಜಾನಪದ ಅಧ್ಯಯನ ಅಧ್ಯಾಪನದ ತಪಸ್ಸಿನೊಂದಿಗೆ ಸಾಗಿದವರು. ಇವರು ನಮ್ಮ ನಾಡಿನ, ಭಾರತದ ಜಾನಪದವನ್ನು ಇನ್ನೂ ಆಳಕ್ಕಿಳಿದು ಅಧ್ಯಯನ ಮಾಡುವುದರ ಜೊತೆಗೆ ಪಾಶ್ಚಾತ್ಯ ಜಾನಪದ ಸಾಹಿತ್ಯ ಬೇರೆ-ಬೇರೆ ಆಯಾಮಗಳನ್ನು ಕುರಿತು ಈಗಾಗಲೇ ನಡೆದ ಅಧ್ಯಯನಗಳನ್ನು ಕುರಿತು ಈಗಾಗಲೇ ನಡೆದ ಅಧ್ಯಯನಗಳನ್ನು ಅಭ್ಯಸಿಸಿ,

ನಮ್ಮ ಜಾನ ಪದವನ್ನು ಅನ್ಯಯಿ ವಿಮರ್ಶೆಯ ನೆಲೆಯಲ್ಲಿಯೂ ಅಧ್ಯಯನಿಸಬೇಕಾದ ಅಗತ್ಯತೆವನ್ನು ಮನಗಾಣಬೇಕಿದೆ. ಅಂದಹಾಗೆ ಅವರು ಅದಕ್ಕೆ ಬೇಕಾದ ನಿರಂತರ ಕುತೂಹಲ ಪರಿಶ್ರಮ, ಜಿಗುಟತನವನ್ನು ರೂಢಿಸಿಕೊಂಡಿದ್ದಾರೆಂಬುದು ಇವರ 'ಜಾನಪದ ತ್ರಿಪದಿ' ಒಂದು ಅಧ್ಯಯನದಿಂದ ತಿಳಿದುಬಂದಿದೆ. ಇಂದು ಅವರು ಜಾನಪದ ಕ್ಷೇತ್ರದಲ್ಲಿ ಮಾಡಿದಂತಹ ಕಾರ್ಯಗಳನ್ನು ಪರಿಗಣಿಸಿಯೇ ಅವರನ್ನು ಉತ್ತರ ಕರ್ನಾಟಕದ ಜಾನಪದ ತಜ್ಞ, ಜಾನಪದ ವಿದ್ವಾಂಸರೆಂಧು ಕರೆದದ್ದು ಸೂಕ್ತವಾಗಿದೆ. ಅದರಲ್ಲೂ "ಒಬ್ಬ ಜಾನಪದ ವಿದ್ವಾಂಸನಿಗೆ ಇರಬೇಕಾದ ಎಲ್ಲ ಅರ್ಹತೆಗಳನ್ನು ಇವರು ಹೊಂದಿದ್ದಾರೆ[೧] " ಎಂದವರು ಡಾ.ಸೋಮಶೇಖರ ಇಮ್ರಾಪೂರ. ಇವರನ್ನು "ಸಾಂಪ್ರದಾಯಿಕ ಜಾನಪದ ತಜ್ಞ ಜಾನಪದ ವಿದ್ವಾಂಸರೆಂದು ಕರೆಯುವುದಕ್ಕಿಂತ 'ಪ್ರಾಯೋಗಿಕ ಜಾನಪದ ಚಿಂತಕರೆಂದು' ಕರೆಯುವುದು ಸೂಕ್ತವಾದುದೆಂದು ಡಾ. ಚಂದ್ರಶೇಖರ ಕಂಬಾರ ಹೇಳಿದ್ದಾರೆ[೨]".

ಇದು ಕೂಡಾ ಅವರ ಜಾನಪದ ಶಕ್ತಿ ಹೆಚ್ಚಿಸಿದಂತಾಗಿದೆ. ಹೀಗೆ ಜಾನಪದ ತಜ್ಞ, ಜಾನಪದ ವಿದ್ವಾಂಸ, ಪ್ರಯೋಗಿಕ ಜಾನಪದ ಚಿಂತಕ ಇಂತಹ ಬಿರುದುಗಳು ಅವರ ವ್ಯಕ್ತಿತ್ವವನ್ನು ಹೆಚ್ಚಿಸಿವೆ.

೧ ಜನಪದ ಕಥನಗೀತ ಸಂಚಯ ಸಂ.ಚನ್ನಬಸವ ನಾವಲಗಿ ಶಕುಂತಲಾ ನಾವಲಗಿ ಪ್ರ.ಕನಕ ಸಾಹಿತ್ಯ ಪ್ರತಿಷ್ಠಾನ ಬೆಂಗಳೂರ ಪ್ರ.೨೦೧೨ ಬೆನ್ನುಡಿ

೨ ಜೀವನ ಸಾದನೆ ಮಾಹಿತಿ ಸೂಚಿ ಡಾ.ಸಿ.ಕೆ.ನಾವಲಗಿ.

"ಗೋಕಾಕ ತಾಲೂಕಿನಲ್ಲಿ ಪ್ರಥಮವಾಗಿ ರೂಪಗೊಂಡದ್ದು ಜನಪದ ಸಾಹಿತ್ಯ ಬೆಟಗೇರಿ ಕೃಷ್ಣ ಶರ್ಮರು, ಜ್ಞಾನಪೀಠ ಪುರಸ್ಕೃತ ಚಂದ್ರಶೇಖರರು, ಇಲ್ಲಿಯ ಬಾಷೆಯ ಸೊಗಡನ್ನು ತಮ್ಮ ಸಾಹಿತ್ಯದಲ್ಲಿ ಬಳಸಿಕೊಂಡು ಶ್ರೀಮಂತಗೊಳಸಿದ್ದಾರೆ ಎಂದರು. ಡಾ.ಸಿ.ಕೆ. ನಾವಲಗಿ ಅವರು ಇದು ಗೋಕಾಕ ತಾಲೂಕಿನ ಜಾನಪದದ ಹಿರಿಮೆಯನ್ನು ಹೆಚ್ಚಿಸಿದಂತಿದೆ[1]"

<u>ಮೊದಲನೆನದೇನ</u> : ಡಾ.ಸಿ.ಕೆ.ನಾವಲಗಿ ಅವರು ಜಾನಪದ ಅಧ್ಯಯನಕ್ಕೆ ಹೆಚ್ಚಿನ ಮಹತ್ವ ನೀಡಿದ್ದು, ತುಂಬಾ ಅವಶ್ಯಕವದದ್ದು ಏಕೆಂದರೆ, ಜಾನಪದ ತವರು ಏನಿಸಿಕೊಂಡ ಭಾರತದಲ್ಲಿ ಇಂದು ಕಣ್ಮರೆಯಾಗುತ್ತಿರುವ ಜಾನಪದ- ಸಂಗ್ರಹ ಸಂಪಾದನೆ ತುಂಬಾ ಮಹತ್ವದ್ದಾಗಿದೆ. ಈ ಎಲ್ಲ ತ್ರಿಪದಿಗಳನ್ನು ಹೇಳಿದ ಮಹತ್ವ ಡಾ.ಸಿ.ಕೆ.ನಾವಲಗಿ ಅವರ ತಾಯಿ ಬಸಲಿಂಗವ್ವ ಕಲ್ಲಪ್ಪ ನಾವಲಗಿ ಅವರಿಗೆ ಸೇರುತ್ತದೆ. ಆದರೆ, ಇವುಗಳನ್ನೆಲ್ಲ ಹಾಳಾಗದಂತೆ ಇವುಗಳ ಕಡೆಗೆ ಹೆಚ್ಚಿನ ಗಮನ ಹರಿಸಿ, ಶ್ರಮವಹಿಸಿ ಅವುಗಳನ್ನು ಸಂಗ್ರಹ ಸಂಪಾದನೆ ಮಾಡಿದ ಕೀರ್ತಿ ಡಾ.ಸಿ.ಕೆ.ನಾವಲಗಿ ಅವರಿಗೆ ಸೇರುತ್ತದೆ ಈ ಕಾರ್ಯ ಅದ್ಭುತವಾಗಿದೆ. ಡಾ.ಸಿ.ಕೆ.ನಾವಲಗಿ ಅವರು ಈ ಸಂಗ್ರಹ ಕಾರ್ಯಕ್ಕೆ ಪ್ರೋತ್ಸಾಹ ನೀಡಿದ ಗುರುಗಳ ಸ್ಥಾನ ಮಹತ್ವದ್ದು " ನಾವು ಜೀವನದ್ದಲಿ ಏನೇ ಮಾಡಿದರೂ ಅದಕ್ಕೊಂದು ಅರ್ಥ ಇರಬೇಕು ಎಂಬಂತೆ ಹಿಂದೆ ಗುರು ಇದ್ದರೆ ಮುಂದೆ ಗುರಿ ಇರಬೇಕು ಎಂಬಂತೆ" ಜಾನಪದ ತ್ರಿಪದಿ ಸಂಗ್ರಹದಲ್ಲಿ ಮಹತ್ವದ ಸ್ಥಾನ ಇವರು ಗಿಟ್ಟಿಸಿಕೊಂಡಿದ್ದಾರೆ. ಡಾ.ಸಿ.ಕೆ. ನಾವಲಗಿ ಅವರ ಈ ಜಾನಪದ ತ್ರಿಪದಿ ಒಂದು ಅಧ್ಯಯನ ಇದು ಅಪ್ರಕಟಿತ ಕೃತಿ ಆಗಿದೆ. 'ತ್ರಿಪದಿ' ಒಂದು ಜನಪದೀಯ ಅಧ್ಯಯನ ಬೀಜ ಏಕೆಂದರೆ, " ಜನಜೀವನದ ಕನ್ನಡ ಸಾಹಿತ್ಯ ಎನ್ನುವುದಾದರೆ, ಸಾಮಾನ್ಯ ಜೀವನದ ಪಡಿನೆರಳೇ ಜನಪದ ಸಾಹಿತ್ಯ" ಎನ್ನುವಂತಾಗಿದೆ.

ಈ ಜಾನಪದ ಹಾಡುಗಳಲ್ಲಿ ಗ್ರಾಮೀಣ ಜನರ ಪಾತ್ರ ಮಹತ್ವದ್ದು, ನಾಗರಿಕ ಸಾಹಿತ್ಯಕ್ಕಿರುವಂತೆ ಇದಕ್ಕೆ ಇತಿಹಾಸವಿಲ್ಲ. ಆದರೆ ಪರಂಪರೆ ಇದೆ. ಏಕೆಂದರೆ, ಇದು ಕಿವಿಯಿಂದ-ಕಿವಿಗೆ-ಬಾಯಿಯಿಂದ-ಬಾಯಿಗೆ ಹರಿದು ಬಂದದ್ದು. ಈ ಜಾನಪದ ತ್ರಿಪದಗಳನ್ನೆ ಹಾಡಿದವರು ಅನಕ್ಷರಸ್ಥರು ಆದರೂ ಅವರಿಗೆ ಅಕ್ಷರಸ್ಥರ ಜ್ಞಾನ ಒದಗಿದಂತಿದೆ.

ಹಲಗೆಯ ಹಿಡಿದಿಲ್ಲ, ಬಳಪಾದಿ ಬಿಕಿದಿಲ್ಲ

ಶ್ರೀಗುರುವು ನಮಗೆ ಬರೆಸಿಲ್ಲ ಕೇಳರಪ್ಪ


ಲೆಕ್ಕಣಿಕಿ ನಮಗ ಗೊತ್ತಿಲ್ಲ

ಯಾವ ವ್ಯಕ್ತಿಯೂ ತನ್ನ ಭಾವನೆಗಳಿಗೆ ಅನಿಸಿದ್ದನ್ನು ಹೊರಹಾಕದೇ ಇರಲಾರ, ಎಂಬುದಕ್ಕೆ ಉದಾಹರಣೆ ಸಾಕಷ್ಟಿವೆ.

೧ ಪ್ರಜಾವಾಣಿ ದಿನಪತ್ರಿಕೆ ಡಾ.ಸಿ.ಕೆ.ನಾವಲಗಿ ದಿನಾಂಕ:೧೨-೦೬-೨೦೦೩ ಮಟ ೩೭

ಅಕ್ಕಮಹಾದೇವಿ: " ಅಯ್ಯಾ ನೀ ಕೇಳಿದರೆ ಕೇಳೂ ಕೇಳದದ್ದಡೆ ಮಾಣು, ನಾನಿನ್ನು ಹಾಡಿದನಲ್ಲದೇ ಸೈರಿಸಲಾರೆನಯ್ಯಾ" ಎನ್ನುತ್ತಾರೆ.

ಡಾ ದೇ. ಜವರೇಗೌಡ ಪ್ರಕಾರ ಜಾನಪದ ಸಾಹಿತ್ಯ



ಇದರ ಪ್ರಕಾರ ಈ ಮೇಲಿನಂತೆ ಜಾನಪದ ಸಾಹಿತ್ಯದ ಪ್ರಕಾರಗಳಾದರೆ ಕೆಲವು ಸಂಶಯಗಳಿಂದಾಗಿ ಇದು ಸಮರ್ಪಕವಾಗಿಲ್ಲ. ಏಕೆಂದರೆ, ಎಲ್ಲ ವಿದ್ವಾಂಸರ ಅಭಿಪ್ರಾಯದಂತೆ ಗೀತೆ, ಕಥೆ, ಗಾದೆ, ಒಗಟು ಈ ೪ ಪ್ರಕಾರಗಳು ಮುಖ್ಯವಾಗಿವೆ.

'ತ್ರಿಪದಿ' ಮೂರು ಸಾಲುಗಳನ್ನೊಳಗೊಂಡಿದೆ. ಆದುದರಿಂದ ಇದಕ್ಕೆ ತ್ರಿಪದಿ ಎಂಬ ಹೆಸರು ಬಂದಿದೆ. ಆದಾಗ್ಯೂ ಇದು ತ್ರಿಪದಿ, ತ್ರಿವಳ, ತ್ರಿವಿದಿಕಾ, ತ್ರಿವಿಧಿ, ತ್ರಿವದಿ, ತಿವುಡೆ, ತ್ರಿವುಡೆ, ಒನಕೆವಾಡು ಇತ್ಯಾದಿ ವಿವಿಧ ಹೆಸರುಗಳ ಆಯಾಮ ಕಾಲದಲ್ಲಿ ಹೊತ್ತುಕೊಂಡೇ ಬಂದಿದೆ. ಇದರ ಸ್ವರೂಪ ಮತ್ತು ಲಕ್ಷ್ಮಣಗಳ ಮೇಲಿಂದಲೇ ತ್ರಿಪದಿ ಎಂಬ ಹೆಸರು ಬಂದಿರಬೇಕು. ಇದರ ಮೂಲ ಹೆಸರು ನಮಗಿಂದು ಲಭ್ಯವಾಗಿಲ್ಲ.

: **ತ್ರಿಪದಿಯ ಲಕ್ಷಣ** :

ತ್ರಿಪದಿ ಮೂರು ಪಾದಗಳುಳ್ಳದ್ದು ಎಂಬುದನ್ನು ಈ ಪದ್ಯ ಜಾತಿಯ ಹೆಸರೇ ಸೂಚಿಸುತ್ತದೆ. ತ್ರಿಪದಿಯ ಮೊದಲ ಪಾದಕ್ಕಿಂತ ಎರಡನೆಯ ಪಾದ ಚಿಕ್ಕದು. ಎರಡನೆಯದಕ್ಕಿಂತ ಮೂರನೆಯ ಪಾದ ಚಿಕ್ಕದು. ಮೊದಲಿಗೆ ತ್ರಿಪದಿ ಎರಡು ಪಾದಗಳ ಬಂಧವಾಗಿತ್ತೆಂದೂ, ಒಂದನೆಯ ಪಾದದಲ್ಲಿ ನಾಲ್ಕು, ಎರಡನೇಯ ಪಾದದಲ್ಲಿ ಮೂರು ಹೀಗೆ ಒಟ್ಟು ಏಳು ಗಣಗಳನ್ನು ಹೊಂದಿರಬೇಕೆಂದು ವಿದ್ವಾಂಸರು ತರ್ಕಿಸಿದ್ದಾರೆ. ಏಳು ಗಣಗಳನ್ನೊಳಗೊಂಡ ದ್ವಿಪದಿಯನ್ನು ಎಳೆ ಎಂದು ಕರೆದಿದ್ದಾರೆ. ದ್ವಿಪದಿಯನ್ನು (ಎಳೆ) ಎಂದು ಕರೆದಿದ್ದಾರೆ. ದ್ವಿಪದಿಯನ್ನು (ಎಳೆ) ಹಿಗ್ಗಿಸಿ ಮೂರು ಸಾಲುಗಳಾಗಿ

ಬರೆದಾಗ ಅದು ತ್ರಿಪದಿಯಾಗುತ್ತದೆ. ಮುಂದೆ ತ್ರಿಪದಿಯೇ ಬೆಳೆದು ಕನ್ನಡ ವೃತ್ತಗಳ ಗಾಯತ್ರಿಯಾಗಿರಬೇಕೆಂದು ಹೇಳುತ್ತಾರೆ.

: ಜಾನಪದ ತ್ರಿಪದಿಯಲ್ಲಿ ಛಂದಸ್ಸು-ಲಯ-ಪ್ರಾಸ :

ಕಾವ್ಯ (ಭಾವಗೀತ)ದಲ್ಲಿ ಅರ್ಥ, ಧ್ವನಿ, ಲಯಗಳಿದ್ದರೂ ಇವುಗಳಿಗೆ ಆಧಾರವಾಗಿರುವುದು ಛಂದಸ್ಸು. ಇದು ಕಾವ್ಯದ ಅಂತರಂಗದ ಅವಶ್ಯಕತೆ. ಕಾವ್ಯಕ್ಕೆ. ಅಸ್ಥಿಪಂಜರ, ಭಾವನಾ ವಿನ್ಯಾಸದ ರಚನೆಗೆ ಪ್ರೇರಕವಾದುದು.

ಒಟ್ಟಿನಲ್ಲಿ ಕಬ್ಬಿನಲ್ಲಿರುವ ರಸ, ಚಂದನದಲ್ಲಿರುವ ಶ್ರೀಗಂಧ, ಹೂವಿನಲ್ಲಿರುವ ಮಕರಂದ ಹೇಗೊ ಹಾಗೆ ಕಾವ್ಯದಲ್ಲಿ ಛಂದಸ್ಸು. ಸೂರ್ಯೋದಯದ ವರ್ಣನೆಯನ್ನು ಗದ್ಯದಲ್ಲಿ ಹೇಳುವುದಾದರೆ, "ಪೂರ್ವದಿಕ್ಕಿನಲ್ಲಿ ಸೂರ್ಯ ಹುಟ್ಟಿದನು" ಎಂದು ಹೇಳಬಹುದು. ಅದನ್ನೇ ಛಂದಸ್ಸಿನ ಮೂಲಕ ಹೇಳುವುದಾದರೆ,

"ಮೂಡಲ ಮನೆಯಾ ಮುತ್ತಿನ ನೀರಿನ ಎರಕವ ಹೊಯ್ದಾ

ನುಣ್ಣನ್ನೆರಕವ ಹೊಯ್ದಾ ಬಾಗಲತೆರೆದೂ ಬೆಳಕೂ ಹರಿದೂ

ಜಗವೆಲ್ಲಾ ತೊಯ್ಕಾ" ಹೋಯ್ತೋ ಜಗವೆಲ್ಲಾ ತೊಯ್ದಾ ।

ತ್ರಿಪದಿ ಮೂಲತಃ ಜಾನಪದ ಛಂದಸ್ಸಾಗಿ ಇದ್ದಿರಬೇಕು ಜಾನಪದ ಹಾಡುಗಳ ಛಂದಸ್ಸು, ಶಿಷ್ಟದಂತೆ ಕಟ್ಟುನಿಟ್ಟಿನ ಛಂದಸ್ಸಾಗಿರದೇ, ರಾಗಕ್ಕೆ ಹೊಂದಿಕೆಯಾಗುವ ರೀತಿಯಲ್ಲಿ ಹಿಗ್ಗುವ ಮತ್ತು ಕುಗ್ಗುವ ಛಂದಸ್ಸು ಜಾನಪದ ಛಂದಸ್ಸು ಸ್ವಚ್ಛಂದವಾದುದು.

ಪ್ರಾಸ: ಪ್ರಾಸವಿಲ್ಲದ ಪದವ ತಾಸು ಹಾಡಿದರೇನು ಸರ್ವಜ್ಞನ ಈ ವಾಣಿ ಕಾವ್ಯಕ್ಕೆ ಪ್ರಾಸದ ಅವಶ್ಯಕತೆಯನ್ನು ಸೂಚಿಸುತ್ತದೆ.

ಪ್ರಾಸವನ್ನು 'ಮಾನಸೋಲ್ಲಾಸ' ದಲ್ಲಿ 'ಪ್ರಣಾರಕ' ಎಂದು ಕರೆದಿದ್ದಾರೆ. ಛಂದಶಾಸ್ತ್ರಜ್ಞರು ಪ್ರಾಸ ಪದ್ಧಯದ ಪ್ರಾಣವೂ ಹೌದು ತ್ರಾಣವೂ ಹೌದು.

ಲಯ: ಉಸಿರಿನ 'ಏರಿಳಿತವೇ'- ಲಯ ಇಂಥ ಲಯ ಪ್ರತಿಕಾವ್ಯದಲ್ಲಿ ಸಿಕ್ಕುತ್ತದೆ.

ಅಳಬ್ಯಾಡ ಮಳ್ಳ ಬಾಬಾರ ಇಲ್ಲಿ

ಅಳತಾರ 'ಏನ ಹೀಂಗ'

ಗಂಡ-ಹೆಂಡರ ಜಗಳಾಂದರ ನೋಡ

ಹೇಗಂಧ ತೀಡಿದ್ಹಂಗ

ತ್ರಿಪದಿಯು ತನ್ನ ಸಂಕ್ಷಿಪ್ತತೆಯ ಗುಣದಿಂದಾಗಿ ಇದು ಹಿಡಿದರೆ ಹಿಡಿತುಂಬ-ಬಿಟ್ಟರೆ-ಮನೆತುಂಬ "ಕುವೆಂಪು ರವರು ಭಾವಗೀತೆಯನ್ನು ಕುರಿತು ಒಂದೆಡೆ" ಅರ್ಥಮುಕ್ತ-ಭಾವದೀಪ್ತ-ಧ್ವನಿಪ್ರಚುರ ಎಂದಿದ್ದಾರೆ. ಭಾವಗೀತವನ್ನು ಪಾಶ್ಚಾತ್ಯರು ವ್ಯಕ್ತಿ ನಿಷ್ಠೆ ಮತ್ತು ವಸ್ತುನಿಷ್ಠೆ ಎಂದು ವಿಂಗಡಿಸಿದ್ದಾರೆ. ಮನುಷ್ಯನ ಮೂಲ ಪ್ರವೃತ್ತಿಯನ್ನು ಗಮನಿಸಿದಾಗ ಈ ವಿಚಾರ ಸರಿಯಾದುದಲ್ಲ ಎಂಬುದು ಮನವರೆಕೆಯಾಗುತ್ತವೆ. ಕಲೆ ವ್ಯಕ್ತಿಯ ವೈಯಕ್ತಿಕ ಪ್ರತಿಭೆಯಿಂದ ಹುಟ್ಟುವಂಥದ್ದು, ಮೊದಲಿಗೆ ಕಲೆ ಹುಟ್ಟುವುದು-ವ್ಯಕ್ತಿ ನಿಷ್ಠೆಯಿಂದಲ್ಲವೆಂಬುದು-ಡಾ.ಸಿ.ಕೆ.ನಾವಲಗಿ ಅವರ ಮಾತು ಸರಿಯೆನಿಸುತ್ತದೆ. ಆದರೆ ಇಂದಿಗೂ ಕೆಲವು ಹಾಡುಗಳು ಸಮೂಹಿಕವಾಗಿಯೇ ಹುಟ್ಟುತ್ತವೆ. ನಮ್ಮ ಜನಪರರು ಏನೂ ಮಾಡಿದರೂ ಗುಂಪುಗೂಡಿಯೇ ಮಾಡುವುದು. ಒಟ್ಟಿನಲ್ಲಿ ಜನಪದಗೀತೆಯ ಹುಟ್ಟು ವೈಯಕ್ತಿಕವಾದರೂ ಬೆಳವಣಿಗೆ ಸಾಮೂಹಿಕ. ಒಟ್ಟಾರೆ ಈ ತ್ರಿಪದಿಗಳಲ್ಲಿ ಕುಟ್ಟುವ, ಬೀಸುವ, ಮಕ್ಕಳನ್ನಾಡಿಸುವ ಲಾಲಿಗಳು ಹಾಡುಗಳೇ ಹೆಚ್ಚಾಗಿವೆ. ಇವೆಲ್ಲ ಇಂದು ವಿಜ್ಞಾನದ ತೆಕ್ಕೆಯಲ್ಲಿ ಸಿಕ್ಕು ನುಚ್ಚು ನೂರಾಗಿ ನಶಿಸಿ ಹೋಗುತ್ತಿವೆ. ಇಂದು ಹಳ್ಳಿಗಳಲ್ಲಿ ಕುಟ್ಟು ಬೀಸುವುದೇ ಕಡಿಮೆಯಾಗಿದೆ. ಬೀಸುಕಲ್ಲು ಬದಲು ಗಿರಣಿಗಳು ಬಂದಿರುವುದರಿಂದ ಬೀಸುವಾಗ ಹಾಡುವ ಸುಮಧುರ ನಾದ ಇಂಗಿಹೋಗಿ ಗಿರಣಿಯ ಕೊಕೆ-ಕೊಕೆ ಎಂಬ ಒರಟು ಧ್ವನಿ ಕೇಳಿಸುತ್ತವೆ.

ಆದ್ದರಿಂದ ಇಂದಿನ ಆಧುನಿಕ ಯುಗದಲ್ಲಿ ನಮ್ಮ 'ಸಂಸ್ಕೃತಿ' ಉಳಿಯಬೇಕಾದರೆ, ನಾವು ಇಂತಹ ತ್ರಿಪದಿಗಳ ಸಂಗ್ರಹದ ಮೊರೆ ಹೋಗಲೇಬೇಕು. ಇಂತಹ ಬೃಹತ್ ಕಾರ್ಯವನ್ನು ಕೆಲವು ಜಾನಪದ ವಿದ್ವಾಂಸರು ಮೊದಲು ಕೈಗೊಂಡಿದ್ದಾದ್ದರೂ ಇಂದಿನ ದಿವಸ ಭರದಿಂದ ಕಾರ್ಯಮುನ್ನಡೆಸಿಕೊಂಡು ಬರುವ ಡಾ.ಸಿ.ಕೆ. ನಾವಲಗಿ ಅವರ ಪತ್ರ ಮಹತ್ವದ್ದು ಹಾಗಾಗಿ ಈ ಜಾನಪದ ತ್ರಪದಿಗಳಿಗೆ ಒಂದು ಹೊಸ ಆಯಾಮ ತಂದುಕೊಟ್ಟಂತಾಗಿದೆ.

<u>ಪ್ರಾರ್ಥನೆ:</u> ಈ ಪ್ರಾರ್ಥನೆ ಎಂಬ ತ್ರಿಪದಿಯಲ್ಲಿ – ಗ್ರಾಮೀಣದಲ್ಲಿ ಈಗಲೂ ಕೂಡಾ ದೇವರ ಮೇಲೆ ಇಟ್ಟ ನಂಬಿಕೆ ಹಾಗೆ ಇದೆ. ನಮ್ಮ ಮೂಢನಂಬಿಕೆಗಳನ್ನು ಅಷ್ಟು ಸಲೀಸಾಗಿ ಬಿಟ್ಟು ಬಿಡಲು ಸಾಧ್ಯವಿಲ್ಲವೆಂಬಂತೆ ಈ ಪ್ರಾರ್ಥನೆಯಿಂದ ತಿಳಿದುಬರುತ್ತದೆ.

<u>ಉದಾ:-</u>ದೇವಿಗೆ ನಾವು ಕಪಲಿ ಆಕಳ ಕರು, ಎಮ್ಮೆ ಕರು ಬಿಡುವುದು ಹಿಂದಿನಿಂದಲೂ ಬಂದದ್ದು. ಈಗಲೂ ಕೂಡಾ ಅದು ಜೀವಂತವಾಗಿದೆ-ಎಂದರೆ ಇಂದು ಇದರ ಕೀರ್ತಿ ಪತಾಕೆ ಆಕಾಶದೆತ್ತರಕ್ಕೂ ಬೆಳೆದಿದೆ ಎಂಬುದು ಇದರ ತಾತ್ಪರ್ಯ.

<u>ಅಕ್ಕ-ತಮ್ಮ, ಅಣ್ಣ-ತಂಗಿ, ಅತ್ತಿಗೆ-ನಾದಿನಿಯರು:</u> ಇಂದಿಗೂ ಕೂಡಾ ನಾವು ಹಳ್ಳಿಗಳಲ್ಲಿ ಇಂತಹ ಸುಮಧುರ ಸಂಬಂಧವನ್ನು ಕಾಣುತ್ತೇವೆ. ಇಂದಿಗೂ ಕೂಡಾ ಸಂಬಂಧಿಗಳ ಸವಿರುಚಿ ಬಾಡಿಹೋಗಿಲ್ಲ. ಅವು ಜೀವಂತವಾಗಿವೆ. ಹೇಗೆಂದರೆ ಅಕ್ಕನ ಮಗಳನ್ನು ತಮ್ಮ ಕೇಳುವುದರಲ್ಲಿ ಸಂದೇಹವಿಲ್ಲ. ಅವಳಿಗೂ ಕೂಡಾ ಅಷ್ಟೇ ಸಂತೋಷ ! ಹೆಮ್ಮೆ ಇರುತ್ತದೆ. ಒಟ್ಟಿನಲ್ಲಿ ಸಂಬಂಧಗಳ ಜೀವಂತಿಕೆ ಇಲ್ಲಿ ಎದ್ದು ಕಾಣುತ್ತಿದೆ.

ತಂಗಿಯೂ ಕೂಡಾ ಅಣ್ಣನ ಮಗಳನ್ನು ಕೊಡುವುತನಕ ನಾ ಬಿಡೋದಿಲ್ಲ ಎಂದು ಹಕ್ಕು, ಅಧಿಕಾರ ಚಲಾಸುವ ಪರಿಪಾಠವೂ ಇಲ್ಲಿ ಮೂಡಿಬಂದಿದೆ. ಹೀಗಾಗಿ ಇದು ಅಣ್ಣ-ತಂಗಿ ಸಂಬಂಧಗಳ ಮಹತ್ವ ಸಾರುವಂತಿದೆ. ಇಲ್ಲಿ ಅಣ್ಣ ತಂಗಿಯ ಪ್ರೀತಿ ಉಕ್ಕಿ ಹರಿದಂತಿದೆ. ಅವರಿಬ್ಬರ ಪ್ರೀತಿ ಅಗಾದವಾದು ಶ್ರೇಷ್ಠವಾದುದು ಎನ್ನುವುದಕ್ಕೆ ಒಂದು ಚಿಕ್ಕ ಉದಾಹರಣೆ.

"ಸೈನಂಗಿ ತೊಡಬ್ಯಾಡ ಜಮನಾಸ ಬಿಡಬ್ಯಾಡ

ಹಗಲ ತಾಲಿಮಕ ಹೊಗಬ್ಯಾಡ । ನನ ತಮ್ಮ

ಹಗಲೆಲ್ಲಾ ದೃಷ್ಠಿ ತಗದೇನ"

ಹೆಣ್ಣು ಮಗಳು ತನ್ನ ತವರ ಮನೆಯ ಮೇಲೆ ತನ್ನ ಪ್ರಾಣವನ್ನೇ ಇಟ್ಟಿರುತ್ತಾಳೆ ಎನ್ನುವುದು ನಿಜ. ಯಾವಾಗಲೂ ತನ್ನ ತವರವರಿಗೆ ಅಣ್ಣ-ತಮ್ಮಂದಿರಿಗೆ ಒಳ್ಳೆಯದನ್ನೇ ಬಯಸುತ್ತಾಳೆ ಎನ್ನುವುದು ಇದರಿಂದ ನಮಗೆ ಮತ್ತುಷ್ಟು ತಿಳಿದು ಬರುತ್ತದೆ.

<u>ಉದಾ:</u>**" ನನ್ನ ತವರು ಹೊಳೆಯ ದಂಡೆಯ ಮೇಲಿನ ಕರಕಿಹಂಗ ಹಬ್ಬಲಿ "** ಎನ್ನುವ ಮಾತು ಹೆಣ್ಣು ಮಗಳು ತನ್ನ ತವರು ಮನೆ ಯಾವಾಗಲೂ ರಸಬಳ್ಳಿಯಂತೆ ಹಬ್ಬಲಿ ಎಂದು ಹಾರೈಸುವುದು. ಇವರ ಸಂಬಂಧಿಗಳ ಮಹತ್ವ ಎತ್ತಿ ತೋರಿಸುತ್ತದೆ.

ಇಂದು ಅಣ್ಣ-ತಮ್ಮಂದಿರಲ್ಲಿ ಬೇಧಭಾವ ಬರಬಹುದು. ಆದರೆ, ಅಕ್ಕ-ತಂಗಿಯರು ಯಾವಾಗಲೂ ಒಂದೇ ಇರುತ್ತಾರೆ. ಅವರ ಗುಟ್ಟು ಒಂದೇ ಅದೇ ರೀತಿ ಅಕ್ಕ-ತಂಗಿ ಕೂಡಿ ಮಾತಾಡಾಕ ಹತ್ತಿದರ ಅವರ ಮಾತು ಮುಗಿಯುವುದಿಲ್ಲ. ಅವರಿಗೆ ಯಾವುದೇ ನೆನಪು ಇರುವುದಿಲ್ಲ. ಅಂದರೆ ಅವರು ಯಾವುದೇ ಲೋಕದಲ್ಲಿರುವಂತೆ ತಮ್ಮ ಲೋಕದೊಳಗೆ ಮಾತಿನೊಳಗೆ ಮುಳುಗಿರುತ್ತಾರೆ. ಇದು ಅವರ ಅಕ್ಕ-ತಂಗಿ ಮಹತ್ವ ಸಾರುತ್ತದೆ. ಅಣ್ಣ/ತಮ್ಮಂದಿರು, ಅಕ್ಕ/ತಂಗಿಯರ ವರ್ಣನೆ ಮಾಡುವರು. ಜೊಚ್ಚಲ ಹಡದರೆ "ಹೆಣ್ಣು ಹಡಿಬೇಕು" ಎನ್ನುವ ಮಾತು ಅವರಿಬ್ಬರ (ಅಣ್ಣ-ತಂಗಿ) ಸಂಭಂಧ ಗಟ್ಟಿಗೊಳಿಸುವಂತದ್ದು. ಅತ್ತಿಗೆ (ಅಣ್ಣನ ಹೆಂಡತಿ) ಮತ್ತು ಹೆಣ್ಣು ಮಗಳು (ನಾದಿನಿ) ಗಂಡನ ತಂಗಿ ಇವರಿಬ್ಬರೂ ಪ್ರೀತಿಯಿಂದ ತಾಯಿ-ಮಗಳಂತೆ ಇರಬೇಕು. ಇಲ್ಲಿ ಭೇದಭಾವ ಇರಬಾರದು.

"ಹಿರಿಯರು ಇಲ್ಲದ ಮಠ ಚಂದಲ್ಲ

ಮಕ್ಕಳ್ಳಿಲ್ಲದ ಮನಿ ಚಂದಲ್ಲ" ಎಂಬಂತೆ

ಮನೆಯಲ್ಲಿ-ಅತ್ತಿ-ಮಾವ ಇರಬೇಕು ಅದರ ಜೊತೆಗೆ ಮಕ್ಕಳು, ಗಂಡನ ತಮ್ಮಂದಿರ ಸಹಿತ, ಬಾಲಕರು ಇದ್ದರೆ ಅತ್ತಿಗೆಗೆ ಇನ್ನಷ್ಟು ಹುರುಪು ಬರುತ್ತದೆ. ಅದೇ ರೀತಿ ಮನೆಯಲ್ಲಿ ಸ್ವರ್ಗದ ಸಂತೋಷವನ್ನೇ ಕಾಣಬಹುದು. ಅಂದರೆ ಇಲ್ಲಿ-ಅತ್ತಿಗೆ-ತನ್ನ ಹೆಣ್ಣು ಮಗಳನ್ನು (ನಾದಿನಿ)- ನಾದಿನಿಯಂತೆ (ವೈರಿ) ಯಂತೆ ನೋಡಿಕೊಳ್ಳದೇ ಅವಳು ಕೂಡಾ ತನ್ನ ಮಗಳಂತೆ ನೋಡಿಕೊಳ್ಳುವುದು. ಅದೇ ರೀತಿ ತನ್ನ ಮೈದುನರನ್ನು ತನ್ನ ಮಕ್ಕಳಂತೆ ನೋಡಿಕೊಳ್ಳುತ್ತಾಳೆ.

ಇದು ಅವಳ ಅತ್ತಿಗೆಯ ದೊಡ್ಡ ಮನಸ್ಸು ವಿಶಾಲವಾದ ಮನಸ್ಸನ್ನು ಎತ್ತಿ ತೋರಿಸುತ್ತದೆ. ಅದೇ ರೀತಿ ಅಷ್ಟು ಪ್ರೀತಿಯಿಂದ ಸಾಕಿ ಸಲುಹಿದ ನಂತರ ಮೈದುನ ಹೆಂಡತಿ ಬಂದ ಮೇಲೆ ಅತ್ತಿಗೆ (ನೆಗೆಣ್ಣಿ) ಯವರ ಮತ್ತು ಮೈದುನರ ಪತ್ನಿ ಇಬ್ಬರಿಗೂ ಇಲ್ಲಿ ಜಗಳ ಬರುವುದು. ಅಂದರೆ, **"ಮಾಡಿದ್ದು ನೋಡಲಿಲ್ಲ"** ಎಂಬಂತೆ ಅವರ ಕದನ ಶುರುವಾಗುತ್ತೆ.

__ಸತಿ-ಪತಿ:__ ಸತಿ-ಪತಿ ಪ್ರೀತಿ ಅನೋನ್ಯವಾದುದು. ಅವರಿಬ್ಬರ ಪ್ರೀತಿಯಲ್ಲಿ ತವರವರು ನನ್ನನ್ನು ಮರೆತಿದ್ದಾರೆ ಎನ್ನುವ ಮಾತು ಹೆಣ್ಣು ಮಗಳದ್ದು ಅಷ್ಟೊಂದು ಗಾಢವಾದ, ನಯವಾದ, ಪ್ರೀತಿ ಪ್ರೇಮ ಅವರಲ್ಲಿ ಸತಿ-ಪತಿಯರಲ್ಲಿತ್ತು ಎಂಬುದು ತಿಳುದುಬರುತ್ತದೆ. ಮದುವೆ ಆದ ತಕ್ಷಣ ಹೆಣ್ಣು ಮಗಳು ತವರನ್ನು ನೆನಸದೇ ಗಂಡನ ಮನೆಯಲ್ಲಿ ಜೀವನಪೂರ್ತಿ ಆಯುಷ್ಯ ಕಳೆಯಬೇಕಾದರೆ, ಗಂಡನ ಪ್ರೀತಿ ಅವಳಿಗೆ ಅತ್ಯಮೂಲ್ಯವಾದುದು. ಇದರ ಮಹತ್ವ ತಿಳಿಯಬೇಕಾದರೆ:-

__ಉದಾ:__- **"ಗಂಡಹೆಂಡತಿ ಜಗಳ ಉಂಡಮಲಗುವತನಕ"**

ದೇಹ ಎರಡು ಆದರೆ, ಮನಸ್ಸು ಮಾತ್ರ ಒಂದೇ, ಇವರಿಬ್ಬರೂ (ಸತಿ-ಪತಿ) ಅಂದರೆ, ಒಂದು ಹೋಳಿಗೆ ಇದ್ದಂತೆ, ಒಬ್ಬರು ಹೂರಣವಾದರೆ, ಮತ್ತೊಬ್ಬರು ಕನಕ ಇದ್ದಂತೆ. ಇವೆಲ್ಲಾ ಸತಿ-ಪತಿ ಮಹತ್ವ ಸಾರುವಂತಿದೆ.

__ಮಗ-ಮಗಳು:__ ಇಲ್ಲಿ ತಾಯಿಗೆ ಗಂಡು ಮಗ ಇದ್ದರೆ, ಬಡತನ ಬರುವುದಿಲ್ಲ ಎಂಬ ಭ್ರಮೆ ಆಗುತ್ತದೆ. ಏಕೆಂದರೆ, ಮಗನ ಮಹತ್ವ ಅರಿಯಬೇಕಾದರೆ, ನಾವಿಂದು **"ಅಳಿಯ ಎಂದೂ ಮಗನಾಗೋದಿಲ್ಲ. ಆಕಳ ಹಾಲ ಹೈನಲ್ಲ"** ಎಂಬಂತೆ ಮಗ ಇದ್ದರೆ ತಾಯಿ ಮಹತ್ವ ಹೆಚ್ಚುತ್ತದೆಂದು ಇವರ ತಾತ್ಪರ್ಯ.

.**"ಕೀರ್ತಿಗೊಬ್ಬ ಮಗ ಆರತಿಗೊಬ್ಬ ಮಗಳು"** ಎಂಬಂತೆ ಇವರಿಬ್ಬರೂ ಮನೆಯ ನಂದಾದೀಪ ಬೆಳೆಗಲು ಜ್ಯೋತಿ ಇದ್ದ ಹಾಗೆ. ಇಲ್ಲಿ ಮನೆಯಲ್ಲಿ "ದಟ್ಟಿ ಉಡುವ ಧರಣಿಯ ಹಡೆಯದಿದ್ದರೆ ಹತ್ತು ಗಂಡು ಹೆತ್ತರೆ ಫಲವೇನು? ಎಂಬಂತೆ ಹತ್ತು ಗಂಡು ಹಡೆದರೂ ಆಕೆ ಬಂಜೆ ಅನಿಸಿಕೊಳ್ಳುತ್ತಾಳೆ" ಏಕೆಂದರೆ, ಇದು ಹೆಣ್ಣಿನ ಮಹತ್ವ ಹೇಳುತ್ತದೆ. ಮನೆಯಚಂದ, ಸೊಬಗು, ಅಂದ ಕಾಣಿಸಿಕೊಳ್ಳಬೇಕಾದರೆ, ಅಲ್ಲಿ ಹೆಣ್ಣುಮಗಳು ಇರಲೇಬೇಕು. ಇದು ಹೆಣ್ಣಿನ ಮಹತ್ವ ತಿಳಿಸಿಕೊಡುತ್ತದೆ. ಹಬ್ಬ, ಹರಿದಿನ, ಉತ್ಸವ, ಪಂಚಮಿ, ಹೀಗೆ ಹಲವಾರು ಹಬ್ಬಗಳಲ್ಲಿ ಅವಳು ಸೀರೆ ಉಟ್ಟು ಅಂದ ಚೆಂದದ ಗೊಂಬೆಯಂತೆ ಕಾಣಿಸಿಕೊಳ್ಳುತ್ತಾಳೆ. "ಹೆಣ್ಣು ಮಗಳು ಎಷ್ಟೇ ಕಲಿತರೂ ಅಡುಗೆ ಮಾಡುವುದು ಬಿಡಲಿಲ್ಲ" ಎಂಬಂತೆ ಹೆಣ್ಣು ಸದಾ ಗಂಡನ ಮನೆಯ ಕೀರ್ತಿ ಪತಾಕೆ ಹಾರಿಸಬೇಕಾದರೆ, ಎಲ್ಲ ಕೆಲಸ ಕಾರ್ಯದಲ್ಲಿ ಯಶಸ್ಸು ಸಾಧಿಸಬೇಕು. ಅಂದಾಗ ಅವಳಿಗೂ ಬೆಲೆ ಬರುವುದು. ಎಷ್ಟೇ ಜನ ಇದ್ದರೂ ಅಡುಗೆ ಮಾಡಿ ಬಡಿಸುವುದು ಅವಳ ಕರ್ತವ್ಯ.

__ಉದಾ:__- ಗ್ರಾಮೀಣ ಭಾಷೆಯೊಳಗೆ ಹೇಳುವಂತೆ- **"ಅಡುಗೆ ಮನೆಯಲ್ಲಿ ಪಾಸ್ ಅನಿಸಿಕೊಳ್ಳಬೇಕು"** ಎನ್ನುತ್ತಾರೆ.

: **<u>ತತ್ವ-ನೀತಿ-ಐತಿಹಾಸಿಕ-ಪೌರಾಣಿಕ</u>** : ಎಂತಹ ಶ್ರೀರಾಮನಿಗೂ ಸಾವು ತಪ್ಪಲಿಲ್ಲ. ಸಾವು, ಜನನ, ಮರಣ ಇವು ಯಾರನ್ನು ಎಂಥವರನ್ನೂ ಬಿಟ್ಟಿಲ್ಲ ಎಂದರ್ಥ. ಉದಾ:- ಗ್ರಾಮೀಣ ಭಾಷೆಯಲ್ಲಿ ಜಗಳ ಮಾಡುವಾಗ **"ನಿನೇನು ಶ್ರೀ ರಾಮಚಂದ್ರ ಏನೋ?"** ಅಂತ ಕೇಳತಾರ. ಅಂದರೆ, ಎಂತವರಿಗೂ ಕಷ್ಟ, ದುಃಖ, ಸಾವು ತಪ್ಪುವುದಿಲ್ಲವೆಂಬುದು ಇದರ ತಾತ್ಪರ್ಯ. ಹೆಣ್ಣಿಗೆ ಕೈತುಂಬ ಬಳೆ ಚೆಂದ, ಆದರೆ ಗಂಡ (ಸಿಟ್ಟಿನ ಗಂಡ) ಬಂದು ಹೊಡೆದರೆ, ಒಂದೊಂದು ಬಳಿ ಸಿಡಿದು ಒಡೆದು ಹೋಗುತ್ತವೆ. ಮನಸ್ಸು ಮಂಗ್ಯಾ ಇದ್ದಂಗ. ಅದಕ್ಕೆ ಮಂಗ್ಯಾನ ಕೈಯಾಗ ಮನಸ್ಸು ಕೊಡಬೇಡ್ರಿ ಅಂತಾ ಹೇಳ್ತಾರೆ. ಅದೇ ರೀತಿ ಸಂಗೊಳ್ಳಿ ರಾಯಣ್ಣ ಆತನೊಬ್ಬ ಮಹಾಪುರುಷನೆಂದರೆ ತಪ್ಪೇನಿಲ್ಲ ಎಂಥವರಿಗೂ ಮಣಿಯದ, ಬಗ್ಗದ, ಜಗ್ಗದ ವ್ಯಕ್ತಿ ಇದ್ದರೂ ಆತನನ್ನು ಗಲ್ಲಿಗೇರಿಸಿದ್ದು ಮಂಗ್ಯಾನ ಆಟ ಆಡಿದಂತೆ ಆಗುತ್ತದೆ. ಸಿಂಧೂರ ಲಕ್ಷ್ಮಣನು ಕೂಡಾ ಐತಿಹಾಸಿಕ ಪುಟಗಳಲ್ಲಿ ಇವರಿಬ್ಬರೂ ಅಚ್ಚಳಿಯದಂತೆ ಉಳಿದುಬಿಟ್ಟಿದ್ದಾರೆ ಇದು ಐತಿಹಾಸಿಕ ಪುಟಗಳಲ್ಲಿ ಮಹತ್ವ ಪಡೆದಿದೆ.

: **<u>ಇತರ ಹಾಡುಗಳು</u>** : ಬೇರೆಯವರು ಎಷ್ಟೇ ಪ್ರೀತಿ ಮಾಡಿದರೂ ಅಥವಾ ತಾಯಿಯಂತೆ ಮುದ್ದಿಸಿದರೂ ತಾಯಿ ಆಗಲಾರಳು, ಅಂದರೆ ಅಪ್ಪ-ಅವ್ವನ ಸ್ಥಾನ ತುಂಬಲಿಕ್ಕೆ ಆಗದು. ತಾಯಿಯ ಕರಳು ಹರೆದಂತೆ ಮತ್ಯಾರು (ಅಪ್ಪ) ಮರಗುವುದಿಲ್ಲ. ಇಲ್ಲಿ ತಾಯಿಯ ಮಹತ್ವವನ್ನು ಅರಿಯಬಹುದು.

ಅದೇ ಹೆಣ್ಣು ಮಕ್ಕಳು ಕಾಲ ಜಾರದಂತೆ ನೀತಿ, ಪದ್ಧತಿಯನ್ನು ಅನುಸರಿಸಿಕೊಂಡು ಹೋಗಬೇಕು. "ಕಾಲು ಜಾರಿದರೆ ಕೈಲಾಸ, ಮನಸು ಜಾರಿದರೆ ವನವಾಸ" ಎಂಬಂತೆ ಪತ್ರಿವ್ರತೆ ಸ್ಥಾನವನ್ನು ಉಳಿಸಿಕೊಂಡು ಬರಬೇಕೆಂಬಂತೆ ಇಂದಿನ ಹೆಣ್ಣು ಮಕ್ಕಳಿಗೆ , ಸಮಾಜಕ್ಕೆ ತಿಳಿಹೇಳಿದಂತಿದೆ.

<u>: ಜಾನಪದ ಕ್ಷೇತ್ರ ಕಾರ್ಯದ ಅನುಭವ</u> : ಡಾ.ಸಿ.ಕೆ.ನಾವಲಗಿ ಅವರು ಈ ತ್ರಿಪದಿ ಸಂಗ್ರಹ ಕಾರ್ಯದಲ್ಲಿನ ಅನುಭವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಆದರೆ, ೧೯೮೧ ರಲ್ಲಿ ಎಂ.ಎ ಪದವಿಗೋಸ್ಕರ ಅವರು ಮಾಡಿದ ಜಾನಪದ ಕ್ಷೇತ್ರಕಾರ್ಯದ ಅನುಭವ ಮನಃ ಪಟಲದಲ್ಲಿ ಅಚ್ಚಳಿಯದೆ ಉಳಿದಿದೆ. ಈ ಕಾರ್ಯದ ಅನುಭವ ಅವರಿಗೆ ತಮ್ಮೂರಿನಲ್ಲೆ ಮೊದಲ ಆಗಿದೆ. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಕಿತ್ತೂರಿನ ಬಳಿಯಿರುವ ಬಸರಗೋಡ ಅವರ ಊರು ಕಿತ್ತೂರಿನಿಂದ ಸುಮಾರು ಮೂರು ಕಿ.ಮೀ. ಅಂತರದಲ್ಲಿ ಪಶ್ಚಿಮಕ್ಕಿದೆ. ಕಿತ್ತೂರು ನಾಡಿನಲ್ಲೆ ನನ್ನೂರು ಸೇರುತ್ತದೆ.

ಬೆಳಗಾವಿ ಜಿಲ್ಲೆಯು ಗಡಿನಾಡಾದರೂ, ಹಿಮಾಲಯದ ಅಡಿಯಲ್ಲಿ ಕಿತ್ತೂರ ನಾಡು-ಸೃಷ್ಟಿ ಸೌಂದರ್ಯದ ಬೀಡಾಗಿದೆ. ಹಬ್ಬ ಹರಿದಿನ, ಜಾತ್ರೆ ಉತ್ಸವಗಳಲ್ಲಿ ಮನಬಂದಂತೆ ಕುಣಿದು ಹಾಡಿ ತೃಪ್ತಿಪಟ್ಟವರು ಬಸರಕೋಡ (ನಮ್ಮೂರಿನ ಜನ) ಹೋಳಿಹುಣ್ಣಿಮೆ, ದೀಪಾವಳಿ, ಮೊಹರಮ್ ಇತ್ಯಾದಿ ಹಬ್ಬಗಳಲ್ಲಿ ಗಂಡಸರು ಹಾಡಿದರೆ, ಗುಳ್ಳವ್ವ , ಜೋಕುಮಾರ, ಮತ್ತು ಮಂಗಲ

ಪ್ರಸಂಗದ ದಿನಗಳಲ್ಲಿ ಹೆಣ್ಣುಮಕ್ಕಳು ಹಾಡುತ್ತಾರೆ. ಚಿಕ್ಕಮಕ್ಕಳಂತೂ ತಮಗೆ ಉತ್ಸಾಹ ತುಂಬಿದಾಗಲೆಲ್ಲಾ ಕುಣಿದು ಕುಪ್ಪಳಿಸಿ, ಹಾಡಿ, ದಣಿದು ತೃಪ್ತಿಪಡುತ್ತಿವೆ. ಇಂಥವರ ಹೃದಯದಿಂದ ನೇರವಾಗಿ ಬಂದ ಸಾಹಿತ್ಯವನ್ನು ಸಂಗ್ರಹಿಸಿ, ಸಂಪಾದಿಸಿ, ವಿಶ್ಲೇಷಣೆ ಮಾಡಿ ಅದನ್ನೊಂದು ಶಾಸ್ತ್ರೀಯ ಅಧ್ಯಯನವೆಂದು ಕರೆದು ಅಭ್ಯಾಸ ಮಾಡುವ ಹಂತದಲ್ಲಿದ್ದಾರೆ ಡಾ.ಸಿ.ಕೆ.ನಾವಲಗಿ ಅವರು. ಈ ಕಿತ್ತೂರು ನಾಡನ್ನು ಹೊಕ್ಕು ನೋಡಿದರೆ ಪ್ರತಿ ಹತ್ತು ಮನೆಗೆ-ಒಬ್ಬಳು-ಇಲ್ಲಾ, ಓಣಿಗೆ ಒಬ್ಬಳಾದರೂ ಹಾಡುವ ಕನ್ನಡ ಸಿರಿಗರತಿ ಸಿಕ್ಕೇ ಸಿಗುತ್ತಾಳೆ. ಜನಪದ ಕಥೆ ಹಾಡು, ಗಾದೆ, ಒಗಟು ಇತ್ಯಾದಿಗಳನ್ನು ಅವರೆಲ್ಲಾ ಮುಂದುವರೆಸಿಕೊಂಡು ಬಂದಿದ್ದಾರೆ.

ಆದರೆ ಕೆಲವು ಹಾಡುಗಳನ್ನು ನಶಿಸಿ ಹೋದರೂ ಕೆಲವಾದರೂ ಉಳಿದುಕೊಂಡಿವೆ. ಡಾ.ಸಿ.ಕೆ.ನಾವಲಗಿ ಅವರು ಹೇಳುತ್ತಾರೆ.

<u>ಉದಾ:</u>- ಕಿತ್ತೂರ ಸಂಸ್ಥಾನ ನಾಶವಾದರೂ ಕಿತ್ತೂರ ನಾಡು ಉಳಿದುಕೊಂಡು ಬಂದಿರುವಂತೆ.

ಡಾ.ಸಿ.ಕೆ.ನಾವಲಗಿ ಅವರಿಗೆ ಆದ ಅನುಭವ ಹಂಚಿಕೊಂಡಿದ್ದಾರೆ:- ಹಳ್ಳಿಯಲ್ಲಿ ವಾಸಿಸುವ ನನ್ನ ತಾಯಿಯವರ ಮೇಲೆ ಜನಪದ ಗೀತೆಗಳು ಪ್ರಭಾವ ಸಾಕಷ್ಟಿವೆ. ಆ ಹಾಡುಗಳನ್ನು ಕೇಳಿ-ಕೇಳಿ ತಾವೂ ಒಂದು ರೀತಿಯ ಸಂಸ್ಕಾರಕ್ಕೆ ಒಳಗಾದವರು. ಕೇಳಿದ ಹಾಡುಗಳನ್ನು ನೆನಪಿಟ್ಟು ಬೀಸುವಾಗ, ಕುಟ್ಟುವಾಗ ಇತ್ಯಾದಿ ಸಂದರ್ಭಗಳಲ್ಲಿ ಹಾಡುತ್ತಲೇ ಬಂದವರು. ಹಾಗಾಗಿ ನಮ್ಮ ತಾಯಿಯೂ ಒಬ್ಬ ಜನಪದ ಕವಿಯಿತ್ರಿ ಎಂಬುದು ನನಗೆ ಗೊತ್ತಾದುದು ೧೯೮೧ ರಲ್ಲಿ. ಎಂ.ಎ ಮಾಡುವಾಗ ಕ್ಷೇತ್ರಕಾರ್ಯಕ್ಕಾಗಿ ಏನಾದರೂ ಸಂಗ್ರಹಿಸಬೇಕೆಂಬ ವಿಚಾರದ ಹಂದರದಲ್ಲೇ ಚಿಂತಾಕ್ರಾಂತನಾಗಿ ಪವಡಿಸಿದ್ದ ನನಗೆ ಬಹಳೇ ಸಂತೋಷವಾಯಿತು.

ಕಾಲಿಲ್ಲದವರೆಗೆ ಕಾಲೇ ಬಂದಂತಾಯಿತು. ಏಕೆಂದರೆ, ಅದಕ್ಕಿಂತಲೂ ಹೆಚ್ಚಾಗಿ ನಮ್ಮವ್ವನಿಗೂ ಹಾಡಲು ಬರುತ್ತದಲ್ಲಾ ಎಂದು. ಅಂದು ತಿಳಿದನಂತರ ಹಿಗ್ಗಿ ಹೀರೆಕಾಯಿ ಆದರಂತೆ. ಮುಂದೆ ಎವ್ವಾ ಅಂದೆ, ಮತ್ತೊಮ್ಮೆ 'ಎವ್ವಾ ಬೇ' ಅಂದೆ. ಯಾಕಪ್ಪ ಅಂದಳು. ಎವ್ವಾ ಬೇ ನಿನಗೆ ಈ ಹಾಡು ಯಾರ ಹೇಳಿಕೊಟ್ರು? ನೀ ಹೆಂಗ ಹಾಡ್ತಿ. ಇಷ್ಟು ದಿನ ಇಲ್ಲ ಇವತ್ತ ಯಾಕ ಹಾಡಾಕತ್ತಿದೀ-ಇತ್ಯಾದಿಯಾಗಿ ನನ್ನ ತನ್ನ ತಾಯಿಯನ್ನೇ ಪ್ರಶ್ನಿಸತೊಡಗಿದೆ. ಪದೇ ಪದೇ ಹೀಗೆ ಕೇಳುವುದರಿಂದ ಎಲ್ಲರೂ ಬೀಸುವಾಗ ಕುಟ್ಟುವಾಗ ಹಾಡ್ತಾರಲ್ಲ. ಅವನ್ನೇ ನಾನು ಹಾಡ್ತಿನಪ್ಪ ಅಂದಾಗ ಒಂದಸಲ ಹಾಡ ಹೇಳವ್ವ ನಾ ಬರಕೋತಿನಿ ಅಂತ ಕೇಳಿಕೊಂಡಾಗ ಅವರು ಒತ್ತಾಯದ ಮೇಲೆ ತಾಯಿ ಹಾಡುತ್ತಿದ್ದರು. ನಂತರ ಸಣ್ಣ ತಂಗಿ-ಅಕ್ಕ-ಎಲ್ಲರೂ ಬಂದು, ಬರದೇ ಇದ್ದ ಹಾಡನ್ನು ತಾಯಿ ನೆನಪಿಸಿ ಹೇಳುತ್ತಿದ್ದರು. ನಾಚಿಕೆ ಸ್ವಭಾವದಿಂದ ಇವರು ಹಾಡುವಾಗ ಇವರು ಬರೆದುಕೊಳ್ಳುತ್ತಿದ್ದರು. ಆಗ ಟೇಪ್ ರಿಕಾರ್ಡರ್ ಏನೂ ಇರಲಿಲ್ಲ. ಹೀಗಾಗಿ ಪದೇ ಪದೇ ಕೇಳಿ ಬರೆಯಿಸಿಕೊಳ್ಳುವುದರಿಂದ (ಬರೆದುಕೊಳ್ಳುವುದರಿಂದ) ಅವರಿಗೂ ಬೇಸರವಾಗುತ್ತಿತ್ತಾದರೂ ಬೇಸರಗೊಳ್ಳದೇ ಸಮಾಧಾನದಿಂದ ಹಾಡಿ ಬರೆಸಿದರು.

ಹೀಗೆ ತಾಯಿ-ಮಗ-ಹೆಣ್ಣು ಮಕ್ಕಳು ಕೂಡಿ ಹಾಡುವಾಗ-ಅತ್ತಿಗೆ ಬಂದು-ಅವಳೂ ಕೂಡಾ ಆಟದಲ್ಲಿ ಭಾಗವಹಿಸಿ ತನಗೆ ಗೊತ್ತಿದ್ದ ಹಾಡುಗಳನ್ನು ಹೇಳಿದಳು.

ಹಾಗೆಯೇ ಅವರ ಅಣ್ಣನೂ ಬಂದನಂತೆ. ಆತನೂ ಹೋಳಿಯ ಹಾಡು ಹೇಳಲು ಸುರುವು ಮಾಡಿದ. ಒಂದೆರಡು ಅಂದವನೇ ನೆನಪಿಗೆ ಬರವಲ್ಲೂ ನೆನಪ ಆದಮ್ಯಾಲ ಹೇಳ್ತಿನಿ ಅಂದು- ಅವರು ಹೊಲಕ್ಕೆ ಹೋದರಂತೆ ಹೀಗೆಯೆ ಅವರು ಡಾ.ಸಿ.ಕೆ. ನಾವಲಗಿ ಅವರು ನಾಲ್ಕು ತಾಸಿನವರೆಗೆ ಸಂಗ್ರಹಿಸಿದರು. ಇದು ಮೊದಲ ದಿನದ ನನ್ನ ಜಾನಪದ ಕ್ಷೇತ್ರ ಕಾರ್ಯದ ಅನುಭವ ಎಂದಿದ್ದಾರೆ.

ಮರುದಿನ ಸುಮಾರು ೧೦:೩೦ ಗಂಟೆಗೆ ಮತ್ತೆ ನಮ್ಮ ಕೆಲಸ ಸುರುವು ಮಾಡಿದೆವು. ಮತ್ತೆ ತಾಯಿ-ತಂಗಿ-ಎಲ್ಲರೂ ಹಾಡು ಹೇಳತೊಡಗಿದರು. ಅಷ್ಟೇ ಮಹತ್ವದ ವಿಷಯವೆಂದರೆ, ನನ್ನ ಅಣ್ಣನ ಮಗ 'ರಮೇಶ' ಬಂದು ಕಾಕ ನಂದು ಒಂದ ಹಾಡ ಬರಕೋ,ನಮ್ಮ ಗುರುಗಳು ಕಲಿಸಿದ್ದು ಅಂದವನೇ,

"ಬಾಲಕರಿಲ್ಲದ ಬಾಲದ್ಯಾತರ ಜನ್ಮ

ಬಾಡಿಗೆ ಎತ್ತು ದುಡಿದ್ಹಂಗ । ಬಾಳೆಲೆಯ

ಹಾಸ್ಯುಂಡು ಬೀಡಿ ಒಗೆದ್ಹಂಗ ॥

ಎನ್ನುವ ತ್ರಿಪದಿಯನ್ನು ತನ್ನದೇ ರಾಗದಲ್ಲಿ ಹೇಳಿದನು. ಅದನ್ನು ಬರೆದುಕೊಂಡಿದ್ದೇನೆಂದು ಆತನಿಗೆ ತಿಳಿಸಿ, ನಿನ್ನ ಹಾಡು ಸಾಕು ಗಪ್ಪಿರು ಎಂದು ಹೊರಗೆ ಕಳಿಸಿದೆ. ಆದರೂ ಮತ್ತೆ ಬಂದು ಅಲ್ಲಿಯೇ ಕುಳಿತುಕೊಂಡ, ನಮ್ಮ ತಾಯಿ ಹಾಡುವಾಗ ಅವಳ ಬಾಯನ್ನೇ ನೋಡುತ್ತ ಕುಳಿತ್ತಿದ್ದ, ಬರೀ ಕುಳಿತಿರಲಿಲ್ಲ. ತಾನೂ ಅವಳ ನಾಲಿಗೆಯ ಮೇಲೆ ನಲಿದಾಡುವ ಈ ಜನಪದ ಸಾಹಿತ್ಯ ಎಷ್ಟೊಂದು ಜನಪ್ರಿಯವಾದುದೆಂಬುದು ವಿದಿತವಾಗುವುದಿಲ್ಲವೇ? ಒಟ್ಟು ಎರಡು ದಿನಗಳಲ್ಲಿ ಸುಮಾರು ೧೭೫ ತ್ರಿಪದಿಗಳನ್ನು ಸಂಗ್ರಹಿಸಿದೆ. ಇಲ್ಲಿ ಸಂಗ್ರಹಿಸಿ ವಿಭಜಿಸಿ ಕೊಡಲಾದ ಎಲ್ಲ ತ್ರಿಪದಿಗಳೂ ಹೆಚ್ಚಾಗಿ ಕುಟ್ಟುವಾಗ, ಬೀಸುವಾಗ, ತೊಟ್ಟಿಲ, ಕಟ್ಟುವಾಗ ತೂಗುವಾಗ ಹೇಳುವಂತವುಗಳೇ ಆಗಿದೆ.

ಈ ಹಾಡುಗಳನ್ನು ಸಂಗ್ರಹಿಸಿ ಸುಮಾರು ಎರಡು ತಿಂಗಳಾದರೂ ಆಗಿರಬಹುದು. ಊರಿಗೆ ಹೋದಾಗಲೆಲ್ಲಾ ನನ್ನ ತಾಯಿ- "ನನ್ನಿಂದ ಬರೆದುಕೊಂಡ ಹಾಡುಗಳನ್ನು ಏನು ಮಾಡಿದಿ? ಪುಸ್ತಕ ಮಾಡಿದಿಯಾ?" ಇತ್ಯಾದಿ ಪ್ರಶ್ನೆಗಳನ್ನು ಕೇಳಿದಾಗ ಈ ಪ್ರಶ್ನೆಗೆ ಉತ್ತರ ಇದೇ ಈಗ ಸಿದ್ಧವಾಗಿರುವ ಈ ಪ್ರಬಂಧ ಎಂದು ಹೇಳದೆ ಗತ್ಯಂತರವಿಲ್ಲ.

ಈಗಾಗಲೇ ಈ ಕ್ಷೇತ್ರದಲ್ಲಿ ಜಾನಪದ ವಿದ್ವಾಂಸರುಗಳಾದ ದೇಜಗೌ, ಕೃಷ್ಣಮೂರ್ತಿ, ಹಾಮಾನಾ, ಕಂಬಾರ, ಇಮ್ರಾಪೂರ, ಮುಂತಾದವರು ದುಡಿದಿದ್ದಾರೆ. ಜಾನಪದ ಸಂಗ್ರಹ ಸಂಪಾದನೆ ಮತ್ತು ವಿಶ್ಲೇಷಣೆಗಳಲ್ಲಿ ವಿಶೇಷ ಅಸ್ಥೆವಹಿಸಿದ್ದಾರೆ.

ಇತ್ತಿಚಿಗಂತೂ ಇದರ ಕೆಲಸ ಅಲ್ಲಲ್ಲಿ ನಡೆಯುತ್ತಲೇ ಇದೆ. ಕೆಲವರು ಬರೀ ಸಂಗ್ರಹಿಸುತ್ತಲೇ ನಡೆದಿದ್ದಾರೆ. ಬರೀ ಸಂಗ್ರಹವೂ ಒಂದು ದೃಷ್ಟಿಯಿಂದ ವ್ಯರ್ಥವಲ್ಲ. ಜನಪದ ಪ್ರಕಾರಗಳಾದ ಕಥೆ. ಗಾದೆ. ಒಗಟು ಇವೆಲ್ಲಕ್ಕಿಂತಲೂ ಹೆಚ್ಚಾಗಿ ಹಾಡುಗಳ ಸಂಗ್ರಹವಾಗಿವೆ ಎಂದು ಹೇಳಬಹುದು.

ಜನಪದ ಸಾಹಿತ್ಯವೆಂದರೆ-ಹೆಚ್ಚಾಗಿ ಅದು ಗೀತ ಸಾಹಿತ್ಯವೇ ಆಗಿದೆ. ಆ ಗೀತ ಸಾಹಿತ್ಯವನ್ನು ಉಳಿಸಿ, ಬೆಳೆಸಿಕೊಂಡು ಬಂದವರು ಹೆಚ್ಚಾಗಿ ನಮ್ಮ ಹಳ್ಳಿಯ - ಹೆಣ್ಣು ಮಕ್ಕಳು.

ಆದುದರಿಂದ ಜಾನಪದಾಂಬೆಯ ಹೆಮ್ಮೆಯ ಪುತ್ರರಾದ ನಾವು-ನೀವೆಲ್ಲ ಕಂಕಣಬದ್ಧರಾಗಿ ಇಂದೇ ಅವಳ ಉಳಿವಿಗಾಗಿ ಟೊಂಕಕಟ್ಟಿ ನಿಲ್ಲೋಣವೆಂದು ಜಾನಪದದ ಉಳಿವಿಗಾಗಿ ಕಳಕಳಿಯ ಮಾತನ್ನು ನಮ್ಮ ಮಂದೆ ಇಟ್ಟಿದ್ದಾರೆ. ಡಾ. ಸಿ.ಕೆ.ನಾವಲಗಿ ಅವರು ಇಂದು ತುಂಬಾ ಮಹತ್ವದ ಸಂಗತಿಯಾಗಿದೆ.

ಅಧ್ಯಾಯ ೪

ಸಮಾರೋಪ

ಅಧ್ಯಾಯ ೪

ಸಮಾರೋಪ

ಡಾ. ಸಿ.ಕೆ.ನಾವಲಗಿ ಅವರ ಸಂಕಲನಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದ ನಂತರ ಜಾನಪದ ಕ್ಷೇತ್ರಕ್ಕೆ ಇವರ ಕೊಡುಗೆ ಅಮೋಘವಾದದ್ದೆಂದು ಮನವರಿಕೆ ಆಗುತ್ತದೆ. ಅವರು ಈಗಲೂ ಶಿಕ್ಷಕ ವೃತ್ತಿಯಲ್ಲಿ ಸೇವೆ ಸಲ್ಲಿಸುತ್ತಿದ್ದರೂ ಬಿಡುವಿನ ಸಮಯದಲ್ಲಿ ಜಾನಪದ ಸಂಗ್ರಹ ಹಾಗೂ ಸಂಪಾದನಾ ಕಾರ್ಯದಲ್ಲಿ ತೊಡಗಿಕೊಂಡಿರುತ್ತಾರೆ. ಡಾ.ಸಿ.ಕೆ.ನಾವಲಗಿ ಅವರು ತಮ್ಮ ಸ್ನಾತಕೋತ್ತರ ಪದವಿಯನ್ನು'ಕನ್ನಡ ಜಾನಪದ ಸಾಹಿತ್ಯ' ಪ್ರದಾನ ವಿಷಯ ತೆಗೆದುಕೊಂಡು ಮುಗಿಸಿದ್ದಾರೆ. ಇದಲ್ಲದೆ "ವಚನ ಸಾಹಿತ್ಯದಲ್ಲಿ ಜಾನಪದ ಅಂಶಗಳು"ಎಂಬ ವಿಷಯ ಕುರಿತು ಸಂಶೋದನೆ ಕೈಗೊಂಡು ಡಾಕ್ಟರೇಟ ಪದವಿ ಪಡೆದಿದ್ದಾರೆ. ಇದಿಷ್ಟನ್ನೇ ಗಮನಿಸಿದರೆ ಸಾಕು ಡಾ.ಸಿ.ಕೆ.ನಾವಲಗಿ ಅವರು ಜಾನಪದ ಸಾಹಿತ್ಯ ಕ್ಷೇತ್ರದಲ್ಲಿ ಹೊಂದಿದ ಆಸಕ್ತಿ ಶ್ರದ್ಧೆ ಮನವರಿಕೆ ಆಗುತ್ತದೆ. ಈಗಲೂ ಸಹ ಜಾನಪದ ಸಾಹಿತ್ಯ ಸ್ವಾತಂತ್ರ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಾ ಡಾ.ಸಿ.ಕೆ.ನಾವಲಗಿ ಅವರು ಸದಾ ಕ್ರಿಯಾಶೀಲರಾಗಿದ್ದಾರೆ. ಉತ್ತಮ ಶಿಕ್ಷಕ ವೃತ್ತಿಯ ಜೊತೆಗೆ ಜಾನಪದ ಸಾಹಿತ್ಯ, ಸಂಶೋಧನೆ, ವಿಮರ್ಶೆ ಮುಂತಾದವುಗಳಲ್ಲಿ ಬಹುಮುಖ ಪ್ರತಿಭೆ, ಆಸಕ್ತಿಯನ್ನು ಬೆಳೆಸಿಕೊಂಡು ಬಂದ ಉತ್ತರ ಕರ್ನಾಟಕದ ಪ್ರಮುಖ ಜಾನಪದ ವಿದ್ವಾಂಸರ ಸಾಲಿನಲ್ಲಿ ನಿಲ್ಲುವ ಗಮನಾರ್ಹ ವ್ಯಕ್ತಿ ಆಗಿದ್ದಾರೆ.

ಡಾ.ಸಿ.ಕೆ.ನಾವಲಗಿ ಅವರು ಮೂಲತಃ ಕೃಷಿ ಕುಟುಂಬದಲ್ಲಿ ಜನಿಸಿದವರು. ಆದ್ದರಿಂದ ಅವರು ಬಾಲ್ಯದಲ್ಲಿಯೇ ಜಾನಪದ ಆಸಕ್ತರು ಏಕೆಂದರೆ, ಇವರ ತಾಯಿ ಮತ್ತು ಮನೆಯ ಎಲ್ಲರ ಪ್ರಭಾವ ಇವರ ಮೇಲೆ ಗಾಢವಾಗಿ ಬೀರಿತ್ತು. ಏನೇ ಆದರೂ ಇವರು ತಮ್ಮ ಆಳವಾದ, ಗಾಢವಾದ, ವಿಶಾಲವಾದ, ಸತತ ಶ್ರಮದಿಂದ ಇಂದು ಇವರು ಜಾನಪದ ಕ್ಷೇತ್ರದಲ್ಲಿ ಗಟ್ಟಿಯಾಗಿ ನಿಂತಿದ್ದಾರೆ. ತಮ್ಮ ವೃತ್ತಿ-ಪ್ರವೃತ್ತಿಗಳೆರಡರಿಂದಲೂ ತಮ್ಮದೇ ಆದ ಧೋರಣೆಯನ್ನು ರೂಢಿಸಿಕೊಂಡ ಇವರು ತಮ್ಮದೇ ಆದ ಕೆಲಸ ಕಾರ್ಯಗಳನ್ನು ಕೈಗೊಳ್ಳುತ್ತಾ ಮುನ್ನೆಡೆದಿದ್ದಾರೆ. ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನಲ್ಲಿ ಬರುವ ಬೆಟಗೇರಿ ಕೃಷ್ಣಶರ್ಮ, ಡಾ.ಚಂದ್ರಶೇಖರ ಕಂಬಾರ ಮುಂತಾದವರ ಸಂಪರ್ಕದಿಂದ ಅವರ ಸಾಹಿತ್ಯ ಕೃಷಿ ಹದಗೊಂಡಿದೆ. ಜಾನಪದ ಸಾಹಿತಿಯಾಗಿ, ಸಂಗ್ರಹಕಾರರಾಗಿ, ಸಂಶೋಧಕರಾಗಿ, ವಿಮರ್ಶಕರಾಗಿ ಉತ್ತಮ ಅಧ್ಯಾಪಕರಾಗಿದ್ದಾರೆ.

ಜಾನಪದ ಅಕಾಡೆಮಿ, ವಿಶ್ವವಿದ್ಯಾಲಯಗಳು, ಕನ್ನಡ ಸಾಹಿತ್ಯ ಪರಿಷತ್ತು, ಸಂಸ್ಕೃತಿ ಇಲಾಖೆ ಇತರ ಸಂಘ ಸಂಸ್ಥೆಗಳು ನಡೆಸಿದ ಸಭೆ ಸಮಾರಂಭಗಳ ವಿಚಾರ ಸಂಕೀರ್ಣಗಳಲ್ಲಿ ಭಾಗವಹಿಸಿ ಹಲವಾರು ಜಾನಪದ ಸಾಹಿತ್ಯ ಕುರಿತು ಪ್ರಬಂಧಗಳನ್ನು ಮಂಡಿಸುವುದರ ಮೂಲಕವಾಗಿಯೂ ಜನಪದ ಪ್ರಚಾರ ಕಾರ್ಯವನ್ನು ಈಗಲೂ ಮಾಡುತ್ತಿರುವುದು ಹೆಮ್ಮೆಯ

ವಿಷಯ. ಅವರ ಈ ಎಲ್ಲ ಸಂಕಲನಗಳ ಅಧ್ಯಯನದಿಂದ ಬಹುಮುಖ್ಯವಾದ ಅಂಶಗಳು ತಿಳಿದು ಬಂದಿದ್ದುದರಲ್ಲಿ ಮೊದಲನೆಯದಾಗಿ ಜನಪದ ಕಲೆಯನ್ನು ಉಳಿಸುವಲ್ಲಿ ಬಹುವಾಗಿ ಶ್ರಮಿಸಿದ್ದಾರೆ.

ಇಂದು ಡಾ.ಸಿ.ಕೆ.ನಾವಲಗಿ ಅವರು ಜಾನಪದ ಸಂಶೋಧಕರಷ್ಟೇ ಅಲ್ಲದೇ ಸಾಹಿತ್ಯ, ಸಂಶೋಧನೆ, ವಿಮರ್ಶೆ ಸಂಪಾದನೆ ಮುಂತಾದವುಗಳಿಂದ ಕನ್ನಡ ನಾಡಿನ ಉದ್ದಗಲಕ್ಕೂ ಚಿರಪರಿಚಿತರಾಗಿದ್ದಾರೆ. ಅವರ ಕೆಲವು ಕೃತಿಗಳ ಮೂಲಕ. ದಿಕ್ಸೂಚಿ, ಗ್ರಾಮೀಣ ಗ್ರಹಿಕೆ, ಜಾನಪದ ಚಿಂತನೆ, ಜಾನಪದ ಸ್ಪಂದನ, ಬೇಂದ್ರೇಯವರ ಕಾವ್ಯದ ಮೇಲೆ ಜಾನಪದ ಪ್ರಭಾವ, ಗಾದೆಗಳಲ್ಲಿ ಹಾಸ್ಯ, ಶರಣ ವಿಚಾರ ವಾಹಿನಿ ಮುಂತಾದ ಕೃತಿಗಳ ಮೂಲಕ ಇವರ ಸಾಧನೆ ನಿರ್ಮಲ ಮನಸ್ಸಿನಿಂದ ಕೂಡಿದೆ. ವೈಚಾರಿ ಚೈತನ್ಯ, ಪ್ರಕೃತಿ ಪ್ರೇಮ, ರಾಷ್ಟ್ರೀಯ ಭಾವೈಕ್ಯತೆ, ನಾಡಪ್ರೇಮ, ಅಭಿಮಾನ, ಉತ್ಸಾಹ, ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಬಲ್ಲ ಕೃತಿಗಳೂ ಆಗಿವೆ ಇದರಿಂದ ಇವರ ಗಾಢವಾದ ಶ್ರಮ ತಿಳಿದುಬರುತ್ತದೆ.

ಡಾ.ಸಿ.ಕೆ.ನಾವಲಗಿ ಅವರು"ಜಾನಪದ ಕ್ಷೇತ್ರಕ್ಕೆ ಹೇಳಿಮಾಡಿಸಿದ ವ್ಯಕ್ತಿ" ಎಂಬುದು ಖಂಡಿತವಾಗಿಯೂ ನಿಜವಾಗಿದೆ. ಅದೇ ರೀತಿ ಇವರ ಕೆಲವು ಲೇಖನಗಳು, ನಾಡಪ್ರೇಮ, ಅಭಿಮಾನಗಳನ್ನು, ಉತ್ಸಾಹಗಳನ್ನು ತುಂಬಬಲ್ಲವು. ಅವರೊಬ್ಬ ಜಾನಪದ ತಜ್ಞ, ಜಾನಪದ ವಿದ್ವಾಂಸ ಎಂದು ಕರೆದದ್ದು ನಿಜಕ್ಕೂ ಹೆಮ್ಮೆಯ ವಿಷಯ, ಡಾ.ಸಿ.ಕೆ.ನಾವಲಗಿ ಅವರು ಬಹುಮುಖ ಪ್ರತಿಭೆಯವರು. ಅವರ ಹೆಸರು ರಾಜ್ಯ, ರಾಷ್ಟ್ರ, ಅಂತರಾಷ್ಟ್ರ ಮಟ್ಟದವರೆಗೂ ಹರಡಿಕೊಂಡಿದೆ. ಮೊದಲು ಅವರ ಹೆಸರು ಕೇಳಿದ್ದು ನಿಜ, ಒಮ್ಮೆ ಕಣ್ಣಾರೆ ಕಂಡದ್ದು ನಿಜ. ಆದರೆ ಇಷ್ಟು ಆಳವಾದ ಎತ್ತರಕ್ಕೆ ಬೆಳೆದವರು ಎಂಬುದು ಗೊತ್ತಿರಲಿಲ್ಲ. ಹೀಗೆ ಒಮ್ಮೆ ಭೆಟ್ಟಿಕೊಟ್ಟು ಎಂ.ಫಿಲ್ ವಿಷಯ ತೆಗೆದುಕೊಳ್ಳುವ ಬಗ್ಗೆ ಮಾಹಿತಿ ಕೇಳಲಿಕ್ಕೆ ಹೋದಾಗ ಅವರ ಎಲ್ಲ ಸಾಹಿತ್ಯ ಕ್ಷೇತ್ರವನ್ನು ಕಂಡು ಬೆರಗಾದೆ. ಮೊದಲ ಬಾರಿ ಭೆಟ್ಟಿಯಿತ್ತಾಗ ಅವರ ರೀತಿ, ನಡತೆ, ಪದ್ಧತಿ, ಸಂಸ್ಕೃತಿ, ಮಾತು, ಮೌನ , ಸಹನೆ, ತಾಳ್ಮೆ, ನೋಟ, ವಿಶಾಲವಾದ ಮನಸ್ಸು ಇವೆಲ್ಲ ಒಬ್ಬ ವಿದ್ವಾಂಸನಿಗೆ ಇರಬೇಕಾದ ಎಲ್ಲ ಅರ್ಹತೆಗಳು ತುಂಬಿದ್ದವು.

ಅದರಲ್ಲೂ ಅವರ ಪ್ರಶಸ್ತಿ ಪುರಸ್ಕಾರಗಳನ್ನು ನೋಡಿ ನಿಜಕ್ಕೂ ಇವರೊಬ್ಬ ಶ್ರೇಷ್ಠ ವಿದ್ವಾಂಸರಿರಬಹುದು ಎಂದುಕೊಂಡೆ-ಅಂದುಕೊಂಡಂತೆ ಅವರನ್ನು ಅವಲೋಕಿಸಿದಾಗ, ಸಂದರ್ಶಿಸಿದಾಗ ಅವರೊಬ್ಬ ಜಾನಪದ ತಜ್ಞ, ಜಾನಪದ ವಿದ್ವಾಂಸ ಎಂಬುದು ತಿಳಿದುಬಂದಿತು. ಹೋಗಿದ್ದು ಬೇರೆ ಕೆಲಸಕ್ಕೆ, ಆದರೆ ಅವರಿಂದ ಕೆಲವು ವಿಷಯ ತಿಳಿದುಕೊಂಡಾಗ ಅವರ ಬಗ್ಗೆ ಯಾವ ಕಿರುಪ್ರಬಂಧ, ಮಹಾಪ್ರಬಂಧ ಹೊರಗೆ ಬಂದಿಲ್ಲವೆಂದರೆ, ನಿಜವಾಗಿಯೂ ಆಶ್ಚರ್ಯವಾಯಿತು. ಆ ಕ್ಷಣವೇ ಅವರಿಗೊಂದು ಮಾತು ಕೇಳಿದೆ. ಅನುಮಾನದಿಂದ ಏಕೆಂದರೆ, ಬಂದದ್ದು ಬೇರೆ ಕೆಲಸಕ್ಕೆ ಆದರೂ ಈ ವಿದ್ಯಾರ್ಥಿನಿ ಏನೇನೋ ಕೇಳುತ್ತಾಳಲ್ಲ ಅಂದರೂ ಪರವಾಗಿಲ್ಲ. ಕೇಳಲೇಬೇಕು ಎಂಬ ದೃಢ ನಿರ್ಧಾರ ಮಾಡಿ ಕೇಳಿದಾಗ ಅವರು ಅಷ್ಟು ಬೇಗ ಒಪ್ಪಿಕೊಳ್ಳಲಿಲ್ಲ, ಬೇಡ ಎಂದು ಮೊದಲು ನಿರಾಕರಿಸಿರು. ನಿಮ್ಮ ಬಗ್ಗೆ ಎಂ.ಫಿಲ್ ಅಧ್ಯಯನ ಕೈಗೊಳ್ಳಬೇಕೆಂದು ನಿರ್ಧಾರ ಮಾಡಿದ್ದೇನೆ ಎಂದಾಗ ಅವರು ದಾರಾಳವಾಗಿ ನನ್ನ ಮಾತನ್ನು ತಳ್ಳಿ

ಹಾಕಿದರು. ಏಕೆಂದರೆ, ಸಾಹಿತ್ಯ ಕ್ಷೇತ್ರದಲ್ಲಿ ಇನ್ನೂ ಬೆಳೆಯಬೇಕೆಂಬ ಆಸೆ ಇದೆ. ಇಷ್ಟುಬೇಗ ಬೇಡ ಎಂದರು. ಬಹಳ ಒತ್ತಾಯದ ಮೇರೆಗೆ ಇಲ್ಲ ಮಾಡಿದರೆ ನಿಮ್ಮ ಬಗ್ಗೆಯೇ ಮಾಡಬೇಕೆಂದುಕೊಂಡಿದ್ದೇನೆ ಎಂದಾಗ ನಾವು ಬೇಡ ಎನ್ನಲಿಕ್ಕೂ ಬರುವುದಿಲ್ಲ. ಏಕೆಂದರೆ, ನಾವು "ಸಾರ್ವಜನಿಕ ಸ್ವತ್ತು" ಆದ್ದರಿಂದ ನಿಮಗೇನು ಹೆಚ್ಚು ಹೇಳುವ ಅಧಿಕಾರವಿಲ್ಲ ಎಂದರು. ಆಗ ಸ್ವಲ್ಪ ಖುಷಿಯಾಯಿತು ನಂತರ ಅವರ ಒಂದು ಮಾತು ನನ್ನ ಮುಖವನ್ನೇ ಕರಾಳವನ್ನಾಗಿಸಿತು. "ಯೋಗ್ಯನ ಬಗ್ಗೆ ಅಯೋಗ್ಯ ಮಾಡಿದರೆ ಸರಿಯೆನಿಸಲಾರದು ಹಾಗೆಯೇ ಅಯೋಗ್ಯನ ಬಗ್ಗೆ ಯೋಗ್ಯ ಮಾಡುವುದು ಸರಿಯಲ್ಲ" ಎಂಬ ಮಾತು ನಿಜಕ್ಕೂ ಇಂದು ನನ್ನನ್ನು ಒಬ್ಬ ಉತ್ತಮ ವಿದ್ಯಾರ್ಥಿಯನ್ನಾಗಿ ಮಾಡಿತು. ಅವರಿಗೆ ಅವರದೇ ಆದ ಅಧ್ಯಯನ ಕೈಗೊಂಡು ಯೋಗ್ಯರ ಬಗ್ಗೆ ಯೋಗ್ಯರೆ ಮಾಡಿದ ಕಿರು ಪ್ರಬಂಧ ಎನ್ನುವ ಮಟ್ಟಕ್ಕೆ ತರಬೇಕೆಂದು ಅವರ ಅಧ್ಯಯನವನ್ನು ಅಷ್ಟೇ ಸೂಕ್ಷ್ಮವಾಗಿ ಆಳವಾಗಿ ಅಧ್ಯಾಯನಿಸಿದ್ದಂತೂ ನಿಜ. ನನ್ನ ಕಿರುಪ್ರಬಂಧ ಉತ್ತಮವಾಗಿದೆ ಎನ್ನುವ ಹಾಗೆ ಮಾಡಬೇಕೆಂಬ ಛಲ ತೊಟ್ಟು ಈ ಕಾರ್ಯವನ್ನು ಮಾಡಲಾಗಿದೆ.

ಚಿಗುರಿದ ಸಂಸ್ಕೃತಿಯಾಸಾರ

ಸರಕಾರ ನಿಂತ ಕಡೆ ಜನಪದಗಳು ಚಲಿಸಬೇಕು ಎಂಬಂತೆ

ಈ ಕಾರಣದಿಂದ ಇಂತಹ ವಿದ್ವಾಂಸರು ಕನ್ನಡ ಸಾಹಿತ್ಯ ಜಾನಪದ ಲೋಕದಲ್ಲಿ ಮತ್ತೆ-ಮತ್ತೆ ಡಾ.ಸಿ.ಕೆ.ನಾವಲಗಿ ಅವರ ಹೆಸರು ಕೇಳಬರುವಂತಾಗಬೇಕು.

ಅನುಬಂಧಗಳು

ಅನುಬಂಧ-೧

ವಂಶವೃಕ್ಷ

ದೊಡ್ಡಫಕೀರಪ್ಪ

ಶಿವಲಿಂಗಪ್ಪ

ಫಕೀರಪ್ಪ

ಶಿವರುದ್ರಪ್ಪ

ಕಲ್ಲಪ್ಪ-ಬಸಲಿಂಗವ್ವ
(ತಂದೆ-ತಾಯಿ)

ಗಂಗವ್ವ

ಫಕೀರವ್ವ

ಶಿವಲಿಂಗಪ್ಪ

ಶಿವಪುತ್ರಪ್ಪ

ಕಾಶವ್ವ

ಶಾಂತವ್ವ

ಚನ್ನಬಸಪ್ಪ

ಬಂಗಾರೆವ್ವ

* ಚನ್ನಬಸಪ್ಪ-ಶಕುಂತಲಾ

ಭರತ

ಅನುಬಂಧ-೨

ಭಾವಚಿತ್ರಗಳು





ಡಾ.ಸಿ.ಕೆ.ನಾವಲಗಿ ಮತ್ತು ಅವರ ಪತ್ನಿ ಶಕುಂತಲಾ




ಭರತ(ಮಗ)



ಡಾ.ಸಿ.ಕೆ.ನಾವಲಗಿ ಅವರಿಗೆ ಕುಲಾಧಿಪತಿ ಸನ್ಮಾನ್ಯಶ್ರೀ ಖುರ್ಷಿದ್ ಅಲಂಖಾನ್‌ರವರು ಪಿಎಚ್.ಡಿ ಪ್ರಧಾನ ಮಾಡಿ ಗೌರವಿಸುತ್ತಿರುವರು



ಡಾ.ಸಿ.ಕೆ.ನಾವಲಗಿ ಅವರಿಗೆ ಪಿಎಚ್.ಡಿ ಮಹಾಪ್ರಬಂಧಕ್ಕೆ ದೊರೆತ ಚಿನ್ನದ ಪದಕವನ್ನು ಉನ್ನತ ಶಿಕ್ಷಣ ಸಚಿವರಾದ ಮಾನ್ಯ ಶ್ರೀ ಪಿ.ಮಂಜುನಾಥ ಅವರು ನೀಡಿ ಗೌರವಿಸುತ್ತಿರುವರು







ಧಾರವಾಡ ಕ.ವಿ.ವಿ ಘಟಿಕೋತ್ಸವ ಸಂದರ್ಭದಲ್ಲಿ ಬಸವ ಅಧ್ಯಯನ ಡಿಪ್ಲೋಮಾದಲ್ಲಿ ಪ್ರಥಮ ರ್‍ಯಾಂಕ ಹಾಗೂ ಚಿನ್ನದ ಪದಕವನ್ನು ರಾಜ್ಯಪಾಲ ಸನ್ಮಾನ್ಯ ಶ್ರೀ ಅಶೋಕನಾಥ ಬ್ಯಾನರ್ಜಿಯವರಿಂದ ಪಡೆಯುತ್ತಿರುವ ಡಾ.ಸಿ.ಕೆ.ನಾವಲಗಿ



ಮಸ್ತಕಗಳ ಬಿಡುಗಡೆ ಸಮಾರಂಭದಲ್ಲಿ ಡಾ.ಸಿ.ಕೆ.ನಾವಲಗಿ ದಂಪತಿಗಳು







ರಂಗ ಸಂಸ್ಥಾನ ಪ್ರಶಸ್ತಿ ಪುರಸ್ಕಾರ : ರಂಗ ಸಂಸ್ಥಾನ (ರಿ) ಬೆಂಗಳೂರು ೨೦೧೧



ಡಾ.ಬಿ.ಎಸ್.ಗದ್ದಗಿಮಠ ಗೌರವ ಪ್ರಶಸ್ತಿ (ಜಾನಪದ ತಜ್ಞ) : ಕರ್ನಾಟಕ ಜಾನಪದ ಅಕಾಡೆಮಿ–೨೦೦೮ :
(೧೯–೬–೨೦೦೯ ರಂದು ಕೂಡಲಸಂಗಮ ಕ್ಷೇತ್ರದಲ್ಲಿ ರಾಜ್ಯದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪ್ರಧಾನ
ಮಾಡಿದರು





ಅನುಬಂಧ-೩

ಜೀವನಸಾರ

ಡಾ.ಸಿ.ಕೆ. ನಾವಲಗಿ

ಜೀವನ ಸಾಧನೆ : ಮಾಹಿತಿ ಸೂಚಿ

೧ **ಪೂರ್ಣ ಹೆಸರು** ಚೆನ್ನಬಸಪ್ಪ ಕಲ್ಲಪ್ಪ ನಾವಲಗಿ

೨ **ಬರೆವಣಿಗೆ ಅಂಕಿತ** ಡಾ.ಸಿ.ಕೆ.ನಾವಲಗಿ, ಡಾ.ಸಿ.ಕೆ.ಎನ್, ಡಾ.ಚೆನ್ನಬಸವ ನಾವಲಗಿ

೩ **ಜನ್ಮ ಸ್ಥಳ** ಬೆಳಗಾವಿ ಜಿಲ್ಲೆ, ಚೆನ್ನಮ್ಮ ಕಿತ್ತೂರ ಪರಿಸರದ ಬಸರಕೋಡ ಗ್ರಾಮ

೪ **ಜನ್ಮ ದಿನಾಂಕ** ೦೧-೦೮-೧೯೫೬

೫ **ವಿದ್ಯಾರ್ಹತೆ (ಶಿಕ್ಷಣ)** ೧. ಎಂ.ಎ ಕನ್ನಡ ಜಾನಪದ ಸಾಹಿತ್ಯ: ಪ್ರಥಮ ವರ್ಗ : ಪ್ರಥಮ ಸ್ಥಾನ

ಚಿನ್ನದ ಪದಕ ಸಹಿತ : ಕ.ವಿ.ವಿ ಧಾರವಾಡ ೧೯೮೧

೨. ಡಿಪ್ಲೋಮಾ ಇನ್ ಬಸವೇಶ್ವರ ಸ್ಟಡೀಜ್ :ಪ್ರಥಮ ವರ್ಗ:ಪ್ರಥಮ ಸ್ಥಾನ

ಚಿನ್ನದ ಪದಕ ಸಹಿತ : ಕ.ವಿ.ವಿ ಧಾರವಾಡ ೧೯೮೨

೩. ಪಿಎಚ್.ಡಿ "ವಚನ ಸಾಹಿತ್ಯದಲ್ಲಿ ಜಾನಪದ ಅಂಶಗಳು" ಒಂದು ಅಧ್ಯಯನ

ಚಿನ್ನದ ಪದಕ ಸಹಿತ : ಕ.ವಿ.ವಿ ಧಾರವಾಡ ೧೯೯೨

೬ **ವೃತ್ತಿ ಜೀವನ** ೩೧-೧೨-೧೯೮೫ ರಿಂದ ೨೫-೧೨-೧೯೯೨ ರವರೆಗೆ: ಕನ್ನಡ ಅಧ್ಯಾಪಕ

೨೬-೧೨-೧೯೯೨ ರಿಂದ ೧೪-೧೧-೧೯೯೯ ರವರೆಗೆ ಕನ್ನಡ ಪ್ರವಾಚಕ

(ಹಿರಿಯ ಶ್ರೇಣಿ ಅಧ್ಯಾಪಕ)

೧೫-೧೧-೧೯೯೯ ರಿಂದ ಕನ್ನಡ ಪ್ರಾಧ್ಯಾಪಕ (ಸಹ ಪ್ರಾಧ್ಯಾಪಕ) ಜೆ.ಎಸ್.ಎಸ್. ಪದವಿ ಕಾಲೇಜ, ಗೋಕಾಕ

೭ **ಪ್ರಕಟಿತ ಕೃತಿಗಳು**

(ವಿಚಾರ-ವಿಮರ್ಶೆ-ಸಂಶೋಧನ-ಸಂಪಾದನ)

೧. ಜಾನಪದ ಸ್ಪಂದನ (೧೯೮೯) ಭರತ ಪ್ರಕಾಶನ ಗೋಕಾಕ

೨. ಬೇಂದ್ರೆಯವರ ಕಾವ್ಯದ ಮೇಲೆ ಜಾನಪದ ಪ್ರಭಾವ (೧೯೯೩) ಪ್ರಸಾರಾಂಗ ಕ.ವಿ.ವಿ ಧಾರವಾಡ

೩. ಗಾದೆಗಳಲ್ಲಿ ಹಾಸ್ಯ (೧೯೯೫) : ಪ್ರಸಾರಂಗ ಕ.ವಿ.ವಿ ಧಾರವಾಡ

೪. ಶರಣ ವಿಚಾರವಾಹಿನಿ (೧೯೯೭) : ಶ್ರೀ ದುರದುಂಡೀಶ್ವರ ಮಠ ಮುರಗೋಡ (ಬೆಳಗಾವಿ ಜಿಲ್ಲೆ)

೫. ವಚನ ಸಾಹಿತ್ಯ ಮತ್ತು ಜಾನಪದ (೧೯೯೭) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೬. ದಿಕ್ಸೂಚಿ (೧೯೯೯) ಭರತ ಪ್ರಕಾಶನ ಗೋಕಾಕ (ಬೆಳಗಾವಿ ಜಿಲ್ಲಾ ಸಾಹಿತ್ಯ ಪ್ರತಿಷ್ಠಾನದ ಶ್ರೇಷ್ಠ ಕೃತಿ ಪ್ರಶಸ್ತಿ)

೭. ವಚನ ಸಾಹಿತ್ಯದಲ್ಲಿ ಜಾನಪದ ಅಂಶಗಳು: ಒಂದು ಅಧ್ಯಯನ (೨೦೦೦) : ಜ್ಞಾನೋದಯ ಪ್ರಕಾಶನ ಬೆಂಗಳೂರು (ಪಿ.ಎಚ್.ಡಿ ಮಹಾಪ್ರಬಂಧ: ಧಾರವಾಡ ಕ.ವಿ.ವಿ. ಯಿಂದ ಚಿನ್ನದ ಪದಕ)

೮. ಗ್ರಾಮೀಣ ಗ್ರಹಿಕೆ (೨೦೦೦) ಭರತ ಪ್ರಕಾಶನ ಗೋಕಾಕ (ವಿಜಾಪೂರ ಜಿಲ್ಲಾ ಜಾನಪದ ಸಂರಕ್ಷಣಾ ಪರಿಷತ್ತಿನ ಉತ್ತಮ ಕೃತಿ ಪ್ರಶಸ್ತಿ ಮತ್ತು ಕರ್ನಾಟಕ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ರೂ. ೫,೦೦೦-೦೦ ಧನ ಸಹಾಯ)

೯. ಕಥನ ಕವನ ಸಂಚಯ (ಸಂ:೨೦೦೦) ಪ್ರಸಾರಂಗ ಕ.ವಿ.ವಿ ಧಾರವಾಡ (ಕ.ವಿ.ವಿ.ಬಿ.ಸಿ.ಎ.೧ ಸೆಮಿಸ್ಟರ ೧ಮತ್ತು೨) ಕನ್ನಡ ಅವಶ್ಯಕ ಪತ್ರಿಕೆಯ ಪಠ್ಯಪುಸ್ತಕ ೨೦೦೧-೦೨ ಮತ್ತು ನಂತರದ ಅವಧಿಗಾಗಿ.

೧೦. ಜಾನಪದ ಚಿಂತನ (೨೦೦೨) : ಕನಕ ಸಾಹಿತ್ಯ ಪ್ರತಿಷ್ಠಾನ(ರಿ) ಬೆಂಗಳೂರು

೧೧. ಜಾನಪದ ಕಥನಗೀತ ಸಂಚಯ (ಸಂ: ೨೦೦೨) ಕನಕ ಸಾಹಿತ್ಯ ಪ್ರತಿಷ್ಠಾನ (ರಿ) ಬೆಂಗಳೂರು.

೧೨. ಶರಣ ಸಂಗಾತ (೨೦೦೨) : ಪ್ರಭು ಪ್ರಿಂಟರ್ಸ ಆ್ಯಂಡ ಪಬ್ಲಿಷರ್ಸ (ರಿ) ಬೆಂಗಳೂರು

೧೩. ಜಾನಪದ ಸಮಾಲೋಕ (೨೦೦೩) ಕನಕ ಸಾಹಿತ್ಯ ಪ್ರತಿಷ್ಠಾನ (ರಿ) ಬೆಂಗಳೂರು ೧. ಬೆಂಗಳೂರು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮ್ಮ ಗಿರಿಗೌಡ ರುದ್ರಪ್ಪ ದತ್ತಿ ಪ್ರಶಸ್ತಿ ೨. ಬೆಳಗಾವಿ ಜಿಲ್ಲಾ ಸಾಹಿತ್ಯ ಪ್ರತಿಷ್ಠಾನದ ಪ್ರತಿಷ್ಠಿತ 'ಸಿರಿಗನ್ನಡ' ಪ್ರಶಸ್ತಿ

೧೪ ವಿಮರ್ಶನ ಗ್ರಹಿಕೆ (೨೦೦೪) : ಕನಕ ಸಾಹಿತ್ಯ ಪ್ರತಿಷ್ಠಾನ (ರಿ) ಬೆಂಗಳೂರು

೧೫ ಗೋಕಾವಿ ನಾಡಿನ ಹೊನ್ನ ಬೆಳೆ (ಸಂ: ೨೦೦೪) : ಕನಕ ಸಾಹಿತ್ಯ ಪ್ರತಿಷ್ಠಾನ (ರಿ) ಬೆಂಗಳೂರು

೧೬ ವಚನಕಾರ ಜೇಡರದಾಸಿಮಯ್ಯ (೨೦೦೫) : ಬಸವ ಸಮಿತಿ, ಬೆಂಗಳೂರು

೧೭ ಉತ್ತರ ಕರ್ನಾಟಕದ ಭಜನೆ ಹಾಡುಗಳು (ಸಂ) ೨೦೦೫ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೮ ಉತ್ತರ ಕರ್ನಾಟಕದ ಕೃಷಿ ಜನಪದ ಸಾಹಿತ್ಯ (೨೦೦೬): ಭರತ ಪ್ರಕಾಶನ ಗೋಕಾಕ

೧೯ ಡಾ. ಬಿ.ಎಸ್. ಗದ್ದಗಿಮಠ (೨೦೦೮) ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

೨೦ ಡಾ. ಆರ್.ಸಿ ಹಿರೇಮಠ (೨೦೦೮) ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

೨೧ ಡಾ. ಎಂ.ಎಸ್.ಸುಂಕಾಪೂರ (೨೦೦೮) ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

೨೨ ಬಸವ ಬೆಳಗು (೨೦೦೮) : ಸಾಹಿತ್ಯ ಚಂದನ, ಬೆಂಗಳೂರು

೨೩ ಜಂಗಮ ಜಾನಪದ (೨೦೦೮) : ಸಾಹಿತ್ಯ ಚಂದನ, (ರಿ) ಬೆಂಗಳೂರು

೨೪ ನಮ್ಮೂರು (೨೦೦೮) : ಕನಕ ಸಾಹಿತ್ಯ ಪ್ರತಿಷ್ಠಾನ (ರಿ) ಬೆಂಗಳೂರು

೨೫ ರಸದಾಳಿ (೨೦೦೮) : ಕನಕ ಸಾಹಿತ್ಯ ಪ್ರತಿಷ್ಠಾನ (ರಿ) ಬೆಂಗಳೂರು

೨೬ ಜನಪದ ರಂಗಭೂಮಿ ಕಲಾವಿದ ಶ್ರೀ ನಿಂಗಯ್ಯಸ್ವಾಮಿ ಪೂಜಾರಿ : (೨೦೦೮) ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು

೨೭ ಪ್ರೋ. ಜ್ಯೋತಿ ಹೊಸೂರ (೨೦೦೮) ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

೨೮ ಆಧುನಿಕ ಕನ್ನಡ ಆತ್ಮಕಥೆಗಳು (೨೦೦೯) ಸಾಗರ ಪ್ರಕಾಶನ ಬೆಂಗಳೂರು

೨೯ ಬೆಳಗಾವಿ ಜಿಲ್ಲೆ ಜನಪದ ಕಲಾವಿದರು (೨೦೧೦) : ಕರ್ನಾಟಕ ಜಾನಪದ ಅಕಾಡೆಮೆ, ಬೆಂಗಳೂರು

೩೦ ಡಾ. ಬಸವರಾಜ ಮಲಶೆಟ್ಟಿ (೨೦೧೦) : ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

೩೧ ಶರಣ ಕ್ಷೇತ್ರಗಳು (ಸಂ. ೨೦೧೦) : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು

೩೨ ಜಾನಪದ ಸಂಭ್ರಮ (೨೦೧೦) ಕನಕ ಸಾಹಿತ್ಯ ಪ್ರತಿಷ್ಠಾನ (ರಿ) ಬೆಂಗಳೂರು

೩೩ ಹತ್ತು ಮಂದ್ಯಾಗ ಹಾಡೇನ (ಉತ್ತರ ಕರ್ನಾಟಕದ ಮದುವೆ ಹಾಡುಗಳು) (ಸಂ. ೨೦೧೧) ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

೩೪ ಜಾನಪದ ಸಡಗರ (೨೦೧೧) : ಸಾಗರ ಪ್ರಕಾಶನ, ಬೆಂಗಳೂರು

೩೫ ಸಾಹಿತ್ಯ ಸಂವಾದ–೨ (೨೦೧೧) (ಆವಶ್ಯಕ ಕನ್ನಡ ಭಾಷಾ ಪಠ್ಯ) : ಪ್ರಸರಾಂಗ, ರಾಣಿ ಚೆನ್ನಮ್ಮಾಜಿ ವಿಶ್ವವಿದ್ಯಾಲಯ, ಬೆಳಗಾವಿ (ಬಿ.ಎ/ಬಿ.ಎಸ್.ಡಬ್ಲ್ಯೂ ತರಗತಿಗಳಿಗೆ–೨ನೇ ಸೆಮಿಸ್ಟರ ೨೦೧೧ ಮತ್ತು ನಂತರದ ಅವಧಿಗೆ)

೩೬ ಸೋಮಲಿಂಗ ಕವಿಯ ಲಾವಣಿಗಳು (ಸಂ) ಆನಂದ ಪ್ರಕಾಶನ ಬೈಲಹೊಂಗಲ–೨೦೧೧

೩೭ ವಚನ ಸಂಪದ (ಸಂ) : ಶ್ರೀ ಶೂನ್ಯ ಸಂಪಾದನ ಮಠ, ಗೋಕಾಕ ೨೦೧೨

೩೮ ಶೂನ್ಯಸಂಪದ (ಸಂ) : ಶ್ರೀ ಶೂನ್ಯ ಸಂಪಾದನ ಮಠ, ಗೋಕಾಕ ೨೦೧೨

೩೯ ಶತಾಯುಷಿ ಲಾವಣಿ ಸಾಮ್ರಾಟ (ಸಂ) : ಶ್ರೀ ಸೋಮಲಿಂಗಪ್ಪಾ ದೊಡವಾಡ ೨೦೧೩ ಪ್ರಕಾಶನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಜಾನಪದ, ಬೆಂಗಳೂರು.

೮ **ಸಂಪಾದಕನ ಕೃತಿಗಳು (ಇತರರೊಂದಿಗೆ)**

೪೦ ಸಹೃದಯಿ (ಅಭಿನಂದನ ಗ್ರಂಥ) ೧೯೯೭

೪೧ ಬೆಳಗಲಿ (ಅಭಿನಂನ ಗ್ರಂಥ) ೧೯೯೯

೪೨ ಶರಣ ಕಿರಣ (ಸ್ಮರಣ ಸಂಚಿಕೆ) ೨೦೦೦

೪೩ ಅಮೃತದುಂದುಭಿ (ಸ್ಮರಣ ಸಂಚಿಕೆ) ೨೦೦೨

೪೪ ಸಮೃದ್ಧಿ (ಅಭಿನಂದನ ಗ್ರಂಥ) ೨೦೦೫

೯ **ಅಚ್ಚಿನಲ್ಲಿ**

೪೫ ಡಾ.ಚಂದ್ರಶೇಖರ ಕಂಬಾರ – ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು

೪೬ ಜನಪದ ತ್ರಿಪದಿಗಳು–ಒಂದು ಅಧ್ಯಯನ

೪೭ ಅಂಬಿಗರ ಚೌಡಯ್ಯನವರ ವಚನಗಳು (ಸಂ)

೪೮ ಶರೀರದ ಜನಪದ

೧೦ **ಪಡೆದ ಪ್ರಶಸ್ತಿಗಳು**

೧ ಅಕ್ಕಮ್ಮ ಗಿರಿಗೌಡ ರುದ್ರಪ್ಪಾ ದತ್ತಿ ಪ್ರಶಸ್ತಿ : ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು–೨೦೦೪ 'ಜಾನಪದ ಸಮಾಲೋಚನೆ' ಕೃತಿಗೆ

೨ ಸಿರಿಗನ್ನಡ ಗೌರವ ಪ್ರಶಸ್ತಿ : ಬೆಳಗಾವಿ ಜಿಲ್ಲಾ ಸಾಹಿತ್ಯ ಪ್ರತಿಷ್ಠಾನ ಬೆಳಗಾವಿ–೨೦೦೪

೩ ಸಾಹಿತ್ಯ ಭೂಷಣ : ಕನ್ನಡ ಜ್ಯೋತಿ ಗಾನಕಲಾ ಸಂಘ, ಗೋಕಾಕ ೨೦೦೫

೪ ಡಾ.ಬಿ.ಎಸ್.ಗದ್ದಗಿಮಠ ಗೌರವ ಪ್ರಶಸ್ತಿ (ಜಾನಪದ ತಜ್ಞ) : ಕರ್ನಾಟಕ ಜಾನಪದ ಅಕಾಡೆಮಿ–೨೦೦೮ : (೧೯–೬–೨೦೦೯ ರಂದು ಕೂಡಲಸಂಗಮ ಕ್ಷೇತ್ರದಲ್ಲಿ ರಾಜ್ಯದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪ್ರಧಾನ ಮಾಡಿದರು)

೫ ಅತ್ತಿಮಬ್ಬೆ ಸಾಹಿತ್ಯ ಪ್ರಶಸ್ತಿ : ಅತ್ತಿಮಬ್ಬೆ ಸಾಹಿತ್ಯ ಪ್ರತಿಷ್ಠಾನ ಬೆಂಗಳೂರು-೨೦೧೦ (ಬಸವಬೆಳಗು-ವಿಮರ್ಶಾ ಕೃತಿಗೆ)

೬ ರಂಗ ಸಂಸ್ಥಾನ ಪ್ರಶಸ್ತಿ ಪುರಸ್ಕಾರ : ರಂಗ ಸಂಸ್ಥಾನ (ರಿ) ಬೆಂಗಳೂರು೨೦೧೧

೭ ಅಕ್ಕಮ್ಮ ಗಿರಿಗೌಡ ರುದ್ರಪ್ಪ ದತ್ತಿ ಪ್ರಶಸ್ತಿ : ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ೨೦೧೨ (ಜಾನಪದ ಸಡಗರ ಕೃತಿಗೆ)

೧೧ **ಸದಸ್ಯತ್ವ ಗೌರವ**

೧ ಸದಸ್ಯರು ಕನ್ನಡ ಜಾಗೃತಿ ಸಮಿತಿ (ಗೋಕಾಕ ತಾಲ್ಲೂಕು) ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು

೨ ದಕ್ಷಿಣ ಭಾರತೀಯ ಬಾಷೆಗಳ ಜಾನಪದ ಸಂಸ್ಥೆ ತಿರುವನಂತಪುರ (ಕರ್ನಾಟಕದಿಂದ ಕಾರ್ಯಕಾರಿ ಸಮಿತಿಯ ಸದಸ್ಯ-೨೦೦೭)

೩ ಕರ್ನಾಟಕ ಸರ್ಕಾರ ಸ್ಥಾಪಿಸಿದ 'ಬೆಟಗೇರಿ ಕೃಷ್ಣಶರ್ಮ ಟ್ರಸ್ಟ'ನ ಸಂಸ್ಥಾಪಕ ಸದಸ್ಯ

೪ ಕರ್ನಾಟಕ ಜಾನಪದ ಪರಿಷತ್ತು, ಬೆಳಗಾವಿ ಜಿಲ್ಲಾ ಘಟಕದ ಅಧ್ಯಕ್ಷರು

೫ ಗೋಕಾಕದ ಶ್ರೀ ಸರ್ವೇಶ್ವರ ಜಾನಪದ ಕಲೋದ್ಧಾರಕ ಸಂಘದ ಅಧ್ಯಕ್ಷರು

೬ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಜೀವ ಸದಸ್ಯರು

೭ ಜಾನಪದ ಜಗತ್ತು ಪತ್ರಿಕೆಯ ಅಜೀವ ಸದಸ್ಯರು

೮ ಬೆಳಗಾವಿ ಲಿಂಗಾಯತ ಮಾಸಿಕದ ಸಂಪಾದಕ ಮಂಡಳಿಯ ಸದಸ್ಯರು

೯ ಕನ್ನಡ ಜಾನಪದ ನಿಘಂಟುವಿನ ಸಂಪಾದಕ ಸಮಿತಿಯ ಸದಸ್ಯರು

೧೦ ಕರ್ನಾಟಕ ವಿಶ್ವವಿದ್ಯಾಲಯ ಕಾಲೇಜು ಶಿಕ್ಷಕರ ಸಂಘದ ಅಜೀವ ಸದಸ್ಯರು

೧೧ ಕರ್ನಾಟಕ ವಿಶ್ವವಿದ್ಯಾಲಯ ಕಾಲೇಜು ಕನ್ನಡ ಅಧ್ಯಾಪಕರ ಒಕ್ಕೂಟದ ಸದಸ್ಯರು

೧೨ ಗೋಕಾಕ ಸಾಹಿತ್ಯ ಚಿಂತನ ಕಮ್ಮಟದ ಸದಸ್ಯ ಮತ್ತು ಸಲಹೆಗಾರರು

೧೩ ಭೂಮಿ ಬಳಗ (ಸಾಂಸ್ಕೃತಿಕ ಅಭಿವೃದ್ಧಿ ಪ್ರತಿಷ್ಠಾನ)ದ ಬೆಳಗಾವಿ ಜಿಲ್ಲಾ ಸಂಚಾಲಕ-ರಾಜ್ಯ ಮಟ್ಟದ ಸಂಘಟನೆ.

೧೪ ಅಧ್ಯಕ್ಷರು ವಚನ ಸಾಹಿತ್ಯ ಚಿಂತನ ಮಂಥನ ವೇದಿಕೆ, ಗೋಕಾಕ

೧೫ ಧಾರವಾಡ ಆಕಾಶವಾಣಿ, ಜನಪದ ಸಂಗೀತ ಕಲಾವಿದರ ಧ್ವನಿಪರೀಕ್ಷೆ ಸಮಿತಿಯ ಸದಸ್ಯ (೨೦೧೧ ರಿಂದ ಮುಂದಿನ ಮೂರು ವರ್ಷಗಳ ಅವಧಿಗೆ)

೧೬ ಧಾರವಾಡ ಆಕಾಶವಾಣಿ, ಜನಪದ ಸಂಗೀತ ಕಲಾವಿದರ ಧ್ವನಿ ಪರೀಕ್ಷೆ ಸಮಿತಿಯ ಸದಸ್ಯ (೨೦೧೧ ರಿಂದ ಮುಂದಿನ ಮೂರು ವರ್ಷಗಳ ಅವಧಿಗೆ)

***ಸನ್ಮಾನ ಸತ್ಕಾರ**

ನಾಡಿನ ಹಲವಾರ ಸಂಘ ಸಂಸ್ಥೆಗಳು, ಸರಕಾರ ಇವರ ಸಾಹಿತ್ಯ ಸಾಧನೆಗೆ, ಜಾನಪದ ಕ್ಷೇತ್ರದ ಕೊಡುಗೆಗೆ ಯೋಗ್ಯ ಸನ್ಮಾನ ಸತ್ಕಾರ ನೀಡಿವೆ.

***ಸ್ಥಾನಮಾನಗಳ ಗೌರವ**

ಕವಿಗೋಷ್ಠಿ, ವಿಚಾರಗೋಷ್ಠಿ, ಸಂಗೀತಗೋಷ್ಠಿ, ಸಾಂಸ್ಕೃತಿ ಕಾರ್ಯಕ್ರಮ, ಜಾನಪದ ಸಮಾರಂಭ, ನಾಡು-ನುಡಿ, ಗಡಿಹಬ್ಬ, ವಿಶ್ವ ಕನ್ನಡ ಸಮ್ಮೇಳನ, ಉತ್ಸವ, ಪುಸ್ತಕ ಬಿಡುಗಡೆ ಸಮಾರಂಭ, ಸಾರ್ವಜನಿಕ ಸಭೆ-ಸಮಾರಂಭ, ವಿಚಾರ ಸಂಕೀರ್ಣ ಮುಂತಾದವುಗಳಲ್ಲಿ ಅಧ್ಯಕ್ಷ ಉದ್ಘಾಟಕ –– ಕೃತಿ ಕುರಿತು ಪುಸ್ತಕ ಬಿಡುಗಡೆ-ಆಶಯ ನುಡಿ ಇವೇ ಮುಂತಾದ ಹತ್ತಾರ ಸ್ಥಾನಮಾನ ತಾಲ್ಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರ, ವಿಶ್ವವಿದ್ಯಾಲಯ ಮಟ್ಟದಲ್ಲಿ ದೊರೆತಿದೆ.

ಕರ್ನಾಟಕ ಜಾನಪದ ಅಧ್ಯಯನದ ೩ನೇ ತಲೆಮಾರಿನ ಜಾನಪದ ವಿದ್ವಾಂಸರೆಂದು ಈಗಾಗಲೇ ಇವರನ್ನು ಗುರುತಿಸಲಾಗಿದೆ. "ನನ್ನ ನಂತರ ನನ್ನ ರೀತಿಯಲ್ಲಿ ಆಲೋಚಿಸುವ ಗೋಕಾಕ ಪರಿಸರದ ಏಕೈಕ ವ್ಯಕ್ತಿ-ಸಿ.ಕೆ.ನಾವಲಗಿ" ಎಂದು ಡಾ.ಚಂದ್ರಶೇಖರ ಕಂಬಾರ ಇವರ ಬಗೆಗೆ ಆಡಿದ ಮಾತು ಇವರ ಸಾಹಿತ್ಯಕ ಶಕ್ತಿಯನ್ನು ತಿಳಿಸುತ್ತದೆ. ಇವರನ್ನು ಸಾಂಪ್ರದಾಯಿಕ 'ಜಾನಪದ ತಜ್ಞ' – 'ಜಾನಪದ ವಿದ್ವಾಂಸ' ಎಂದು ಕರೆಯುವುದಕ್ಕಿಂತ 'ಪ್ರಾಯೋಗಿಕ ಜಾನಪದ ಚಿಂತಕ'ರೆಂದು ಕರೆಯುವ ಸೂಕ್ತವಾದುದೆಂದು ತಜ್ಞರ ಅಭಿಪ್ರಾಯ.

ಡಾ.ಕುವೆಂಪು ಕಥನ ಗೀತಗಳ ಜಾನಪದ ಅಧ್ಯಯನ ವಿಷಯದ ಮೇಲೆ ತೆಗೆದುಕೊಂಡು ಪ್ರೊಜೆಕ್ಟಿಗೆ ಯುಜಿಸಿ ಧನ ಸಹಾಯ ನೀಡಿದೆ.

***ರೇಡಿಯೋ ಭಾಷಣಗಳು**

ಇವರ ಹತ್ತಾರು ರೇಡಿಯೋ ಭಾಷಣಗಳು, ರೇಡಿಯೋ ಚಿಂತನೆಗಳು, ಪುಸ್ತಕ ಪರಿಚಯಗಳು, ಬೇರೆ-ಬೇರೆ ಸಂದರ್ಭಗಳಲ್ಲಿ ಬಿತ್ತರಗೊಂಡಿವೆ. ಇವರ ಹತ್ತಾರು ಕೃತಿಗಳ ಪುಸ್ತಕಾವಲೋಕನ ಕೂಡಾ ರೇಡಿಯೋದಲ್ಲಿ ಪ್ರಸಾರಗೊಂಡಿವೆ. ಸಮಾಜ, ಸಾಹಿತ್ಯ ಕುರಿತ ಇವರ ಗುಂಪು ಚರ್ಚೆ ಕೂಡಾ ಪ್ರಸಾರವಾಗಿದೆ. ರೇಡಿಯೋ ನಾಟಕ ಒಂದರಲ್ಲಿ ಚಿಕ್ಕ ಪಾತ್ರಕೂಡ ವಹಿಸಿದ್ದಾರೆ.

***ದೂರದರ್ಶನ ಭಾಷಣ-ಸಂದರ್ಶನ**

ಉದಯ ಟಿ.ವಿ.ಯಲ್ಲಿ ಜಾನಪದ ಕಲಾಮೇಳ ಕುರಿತು, ಈ ಟಿ.ವಿ.ಯಲ್ಲಿ ಬೆಳಗಾವಿಯ ಭಾರತ ೭೦ನೇ ಕನ್ನಡ ಸಾಹಿತ್ಯ ಸಮ್ಮೇಳನ ಕುರಿತ ಇವರ ಭಾಷಣ ಪ್ರಸಾರವಾಗಿದೆ. –––– ದೂರದರ್ಶನದ ಬೆಳಗು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ೪೫ ನಿಮಿಷಗಳ ಸಂದರ್ಶನ –––– ನೀಡಿದ್ದಾರೆ.

ಅನುಬಂಧ–೪

ಗ್ರಂಥಋಣ

೧ ಚೆನ್ನಬಸವ ನಾವಲಗಿ, ಶಕುಂತಲಾ ನಾವಲಗಿ — ಜನಪದ ಕಥನಗೀತ ಸಂಚಯ, ಪ್ರ. ಕನಕ ಸಾಹಿತ್ಯ ಪ್ರತಿಷ್ಠಾನ (ರಿ) ಬೆಂಗಳೂರು–೨೦೦೨

೨ ಡಾ. ಸಿ.ಕೆ.ನಾವಲಗಿ — ಜಾನಪದ ಸಮಾಲೋಕ, ಪ್ರ. ಕನಕ ಸಾಹಿತ್ಯ ಪ್ರತಿಷ್ಠಾನ ೨೦೦೩

೩ ಡಾ. ಬಾಳಣ್ಣ ಸೀಗಿಹಳ್ಳಿ (ಸಂ) — ಹಾಡ ತೂರ್ಯಾಡ್ಯಾವ, ಪ್ರ. ಶರಣ ಸಾಹಿತ್ಯ ಅಕ್ಯಾಡೆಮಿ ಶ್ರೀ ರಾಜಗುರು ಸಂಸ್ಥಾನಕಲ್ಮಠ ಚೆನ್ನಮ್ಮನ ಕಿತ್ತೂರು ಹಾಗೂ ಲಿಂಗಾಯತ ಅಧ್ಯಯನ ಅಕ್ಯಾಡೆಮಿ ಶ್ರೀ ನಾಗಯಾರು ರುದ್ರಾಕ್ಷಿಮಠ ಬೆಳಗಾವಿ ೨೦೧೦

೪ ಡಾ. ಸಿ.ಕೆ.ನಾವಲಗಿ, ಪ್ರೋ ಚಂದ್ರಶೇಖರ ಅಕ್ಕಿ — ಹೊನ್ನಬೆಳೆ, ಪ್ರ. ಕನಕ ಸಾಹಿತ್ಯ ಪ್ರತಿಷ್ಠಾನ ಬೆಂಗಳೂರು (ರಿ) ೨೦೦೪

೫ ಡಾ. ಚಿ.ಸಿ.ನಿಂಗಣ್ಣ (ಸಂ) — ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಪ್ರ. ಶ್ರೀ ಸಿದ್ದಲಿಂಗೇಶ್ವರ ಸರಸ್ವತಿ ಗೋಧಾಮ, ಗುಲಬರ್ಗಾ ೨೦೦೮, ಎರಡನೇ ಪರಿಷ್ಕೃತ ಆವೃತಿ–೨೦೧೦

೬ ಡಾ.ಸಿ.ಕೆ.ನಾವಲಗಿ — ಉತ್ತರ ಕರ್ನಾಟಕದ ಭಜನೆ ಹಾಡುಗಳು ಕನ್ನಡ & ಸಂಸ್ಕೃತಿ ಇಲಾಖೆಯ ಆಯುಕ್ತರು, ಕೆ.ಆರ್.ನಿರಂಜನ್ ಮುದ್ರಣ–೨೦೦೬

೭ ಡಾ. ಸಿ.ಕೆ.ನಾವಲಗಿ — ಸೋಮಲಿಂಗ ಕವಿಯ ಲಾವಣಿಗಳು, ಆನಂದ ಪ್ರಕಾಶನ ಬೈಲಹೊಂಗಲ (ಬೆಳಗಾವಿ ಜಿಲ್ಲೆ) ೨೦೧೨

೮ ಡಾ. ಚೆನ್ನಬಸವ ನಾವಲಗಿ, ಪತ್ನಿ ಶಕುಂತಲಾ ನಾವಲಗಿ — ಬಿ.ಎನ್.ಪಕಿಡ್ಡಿ ಕರ್ನಾಟಕ ಜಾನಪದ ಅಕಾಡೆಮಿ ಕನ್ನಡ ಭವನ ಬೆಂಗಳೂರು–೨೦೧೧

೯ ಡಾ. ಸಿ.ಕೆ. ನಾವಲಗಿ — ಜನಪದ ತ್ರಿಪದಿ ಒಂದು ಅಧ್ಯಯನ ಅಪ್ರಕಟಿತ

೧೦	ಪ್ರೊ. ಚಂದ್ರಶೇಖರ ಅಕ್ಕಿ	ಹಾಲುಬಾಣ ಪ್ರ.ವಿದ್ಯಾನಿಧಿ ಪ್ರಕಾಶನ ಗದಗ ೨೦೦೪
೧೧	ಪ್ರೊ. ಚಂದ್ರಗೌಡ ಕುಲಕರ್ಣಿ ಶ್ರೀಮತಿ ದೇವಿಕಾ ಡಿ. ನಗರಕರ	ಕಾವ್ಯ ಸಂಗಮ ಪ್ರ. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೨೦೧೧
೧೨	ಬೈಲೂರು ಬಸವಲಿಂಗಯ್ಯ	ನೂರು ತತ್ವಪದಗಳು ಪ್ರ.ಜಾನಪದ ಸಂಶೋಧನ ಕೇಂದ್ರ ಧಾರವಾಡ ೨೦೧೧
೧೩	ಬೈಲೂರು ಬಸವಲಿಂಗಯ್ಯ ಹಿರೇಮಠ	ನೂರು ಜನಪದ ಹಾಡುಗಳು ಪ್ರ. ಜಾನಪದ ಸಂಶೋಧನಾ ಕೇಂದ್ರ ಧಾರವಾಡ ೨೦೧೧
೧೪	ರಾಜಪ್ಪ ದಳವಾಯಿ	(ಸಂ) ಕನ್ನಡ ಸಾಹಿತ್ಯ ಕೋಶ ದಳವಾಯಿ ಪ್ರಕಾಶನ ಜ್ಞಾನಭಾರತಿ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-೨೦೧೧
೧೫	ರೇವತಿಸುತೆ	(ಸಂ) ಸುಭೋಧ ಭಜನಾಮೃತ ಪ್ರ. ಕುಮಾರ ಬಮ್ಮಾಪೂರ ಓಣಿ ಹುಬ್ಬಳ್ಳಿ
೧೬	ಶಿಶುನಾಳ ಶರೀಫ	ತತ್ವಪದಗಳು & ಸಂಕ್ಷಿಪ್ತ ಜೀವನ ಚರಿತ್ರೆ ಪ್ರ. ಶಾಬಾದಿಮಠ ಪ್ರಿಂಟಿಂಗ್ ಪ್ರೆಸ್ ಬಸವೇಶ್ವರ ಸರ್ಕಲ್ ಗದಗ
೧೭	ಸಿ.ಕೆ.ಎನ್	ಗ್ರಾಮೀಣ ಗ್ರಹಿಕೆ ಭರತ ಪ್ರಕಾಶನ ಗೋಕಾಕ ೨೦೦೦